
ಸಂಪುಟ 24 ಸಂಚಿಕೆ 25-26
ಜೂನ್ 30. 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ

http:// www.geocities.com/aikyaranga





ರಾಷ್ಟ್ರಪತಿ ಚುನಾವಣೆ
ಯಾಕೀ ಸ್ಪರ್ಧೆ ?

ಸಿನಿಮಾ
‘ದ ಲೆಜೆಂಡ್ ಆಫ್ ಭಗತ್‌ಸಿಂಗ್’



ಪಶ್ಚಿಮ ಬಂಗಾಳ ಎಡರಂಗ ವಿಶ್ವದಾಖಲೆಯ 25 ವರ್ಷಗಳು
ಜನತೆ ಸೃಷ್ಟಿಸಿದ ಇತಿಹಾಸ



ನೆಲ ಕಚ್ಚುತ್ತಿರುವ ಬಿಜೆಪಿ- ಆಕಾಶ ನೋಡುತ್ತಿರುವ ನಾಯಕರು

ವಾಜಪೇಯಿ ಸರ್ಕಾರದ ಸೇಡಿನ ಕ್ರಮಗಳು

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 99

ಬಂಗಾಳಕ್ಕೆ ಸಂಬಂಧಿಸಿದ 25 ಅಂಶಗಳ ಬೇಡಿಕೆ ಪಟ್ಟಿಯನ್ನು ನಾವು ಪ್ರಧಾನಿಯೊಂದಿಗೆ ಚರ್ಚಿಸಿದೆವು. ಇತ್ತೀಚಿನ ವೇತನ ಪರಿಷ್ಕರಣೆಯಿಂದಾಗಿ ರಾಜ್ಯದ ಮೇಲೆ ಬೀಳುವ ಹೊರೆಯ ಅರ್ಧ ಭಾಗವನ್ನು ಕೇಂದ್ರ ಸರಕಾರ ಭರಿಸಬೇಕೆಂದು ನಾವು ಪ್ರಧಾನಿಗೆ ಹೇಳಿದೆವು. ಇತರ ರಾಜ್ಯಗಳು ಕೂಡ ಇದೇ ಬೇಡಿಕೆಯನ್ನು ಮುಂಡಿಸಿವೆ ಎಂದು ಪ್ರಧಾನಿ ದೃಢಪಡಿಸಿದರು.

ರಾಜ್ಯ ಪಟ್ಟಿಯನ್ನು ನಿಗದಿಪಡಿಸಿರುವ ನಿಧಿಯನ್ನು ಪಡೆಯಲು ಇದು ಸಕಾಲ ಎಂದು ಕೂಡ ಅವರು ಒಪ್ಪಿದರು. ಸಣ್ಣ ಉಳಿತಾಯ ಕ್ಷೇತ್ರದಲ್ಲಿ ರಾಜ್ಯದ ಹಿತವನ್ನು ರಕ್ಷಿಸುವುದಾಗಿ ಭರವಸೆ ಕೊಟ್ಟರು. ಪೂರ್ವ ರೈಲ್ವೆ ಮತ್ತು ಆಗ್ನೇಯ ರೈಲ್ವೆಯಿಂದಲೇ ಮೂರನೇ ಒಂದು ಆದಾಯ ಬರುತ್ತದಾದರೂ ಇದುವರೆಗೆ ಈಶಾನ್ಯ ವಲಯದ ರೈಲ್ವೆಯನ್ನು ನಿರಂತರವಾಗಿ ನಿರ್ಲಕ್ಷಿಸಲಾಗಿದೆ. ನಾವು ದೀರ್ಘವಾಗಿ ಚರ್ಚಿಸಿದೆವು. ಚರ್ಚೆಯೇನೋ ಚೆನ್ನಾಗಿಯೇ ನಡೆಯಿತು. ಆದರೆ ಅಂತಿಮ ಫಲಿತಾಂಶ ಏನಾದೀತು ಎಂಬ ಬಗ್ಗೆ ನನಗೆ ಖಾತರಿಯಿಲ್ಲ.

ಮತ್ತೆ ಪಂಚಾಯತ್ ಅಧಿಕಾರ

ದೀರ್ಘ ಅವಧಿಯ ವಿರಾಮಕ್ಕೆ ನಮ್ಮ ವ್ಯವಸ್ಥೆಯಲ್ಲಿ ಅವಕಾಶವಿಲ್ಲ. ಲೋಕಸಭೆ ಚುನಾವಣೆಯ ಸ್ವಲ್ಪವೇ ದಿನಗಳಲ್ಲಿ ರಾಜ್ಯದಲ್ಲಿ ಮೇ 28ರಂದು ಐದನೇ ಪಂಚಾಯತಿ ಚುನಾವಣೆಗಳು ನಡೆದವು. ತೃಣಮೂಲ - ಬಿಜೆಪಿ ನೇತೃತ್ವದಲ್ಲಿ ಎಲ್ಲ ಪ್ರತಿಗಾಮಿ ಶಕ್ತಿಗಳು ನಮ್ಮನ್ನು ವಿರೋಧಿಸಿದವು. ಕಾನೂನು ಮತ್ತು ಸುವ್ಯವಸ್ಥೆ 'ಸಮಸ್ಯೆ' ಉಂಟಾಗಿರುವ ರಾಜ್ಯಗಳ ಪಟ್ಟಿಯಲ್ಲಿ ಪಶ್ಚಿಮ ಬಂಗಾಳವನ್ನು ಸೇರಿಸಲು ಕೇಂದ್ರದ ಸಮ್ಮಿಶ್ರ ಕೂಟದ ಸಮನ್ವಯ ಸಮಿತಿ ನಿರ್ಧರಿಸಿತು. ಕೇಂದ್ರ ಗೃಹ ಸಚಿವ ಅಡ್ವಾನಿ ಈ ಬಗ್ಗೆ ಬೇಕಾಬಿಟ್ಟಿ ಮಾತನಾಡಿದರು. ಈ ಕೂಟಗಳ ನಾಯಕತ್ವ ಅವರವರಲ್ಲೇ ಕಚ್ಚಾಟ ನಡೆಸಿತು. ಆದರೆ ಕೆಳಮಟ್ಟಗಳಲ್ಲಿ ತಮ್ಮ ಹಿತವನ್ನು ಕಾಪಾಡಲು ಮೈತ್ರಿ ಮಾಡಿಕೊಂಡರು. ಪತ್ರಿಕೆಗಳು ಎಂದಿನಂತೆ ತಮ್ಮ ಪಾತ್ರವನ್ನು ನಿರ್ವಹಿಸಿದವು. ಕೊನೆಗೂ ಎಡರಂಗಕ್ಕೆ ಪರ್ಯಾಯವಾಗಿ ತೃಣಮೂಲ -ಬಿಜೆಪಿ ಕೂಟ ಹೊರಹೊಮ್ಮಿದೆ ಎಂಬಂತೆ ಚಿತ್ರಿಸಿದವು. ಕಾಲ್ಪನಿಕ ಅತ್ಯಾಚಾರ ಪ್ರಕರಣಗಳಿಗೂ ಪ್ರಚಾರ ನೀಡಲಾಯಿತು. ನಮ್ಮ ವಿರುದ್ಧ ಅಪಪ್ರಚಾರ ನಡೆಸಲೆಂದೇ ರಕ್ಷಣಾ ಸಚಿವರು ಕಲ್ಕತ್ತಕ್ಕೆ ಬಂದಿಳಿದರು.

ದೆಹಲಿಯಲ್ಲಿ ಬಿರುಸಿನ ಚಟುವಟಿಕೆಗಳು ನಡೆದವು. ತೃಣಮೂಲ - ಬಿಜೆಪಿ ಕೂಟಕ್ಕೆ ನೆರವಾಗಲು ಹಣದ ಹೊಳೆ ಹರಿಯಿತು. ಕೆಲವು ಜಿಲ್ಲೆಗಳಲ್ಲಿ ನಮ್ಮಲ್ಲಿ ಪೂರ್ಣ ಒಗ್ಗಟ್ಟಿತ್ತು. ಅನೇಕ ಸ್ಥಳಗಳಲ್ಲಿ ವಿಫಲರಾದೆವು. ಈ ಬಾರಿ ಗ್ರಾಮ ಪಂಚಾಯತಿ ಮತ್ತು ಸಮಿತಿ ಮಟ್ಟಗಳಲ್ಲಿ ನಮಗೆ ಸ್ವಲ್ಪವೇ ಸ್ಥಾನಗಳು ಸಿಕ್ಕವು. ಪ್ರತಿಪಕ್ಷ ಅವುಗಳಲ್ಲಿ ಅನುಕ್ರಮವಾಗಿ ಕಳೆದ ಬಾರಿಗಿಂತ ಶೇ8.46 ಹಾಗೂ ಶೇ. 5.62 ಮತಗಳನ್ನು ಪಡೆಯಿತು. ಆದರೆ ಜಿಲ್ಲಾ ಪರಿಷತ್ ಮಟ್ಟದಲ್ಲಿ ಶೇ 1.05 ಮತಗಳಿಂದ ಅವರು ಸೋತರು. ಪರಿಷತ್ ಸ್ಥಾನಗಳಲ್ಲಿ ಎಡರಂಗ ಶೇ.88.38 ಸ್ಥಾನಗಳನ್ನು, ಕಾಂಗ್ರೆಸ್ ಶೇ.4.48 ಸ್ಥಾನಗಳನ್ನು, ತೃಣಮೂಲ ಕಾಂಗ್ರೆಸ್ ಶೇ 5.32 ಸ್ಥಾನ, ಬಿಜೆಪಿ ಶೇ 0.14 ಸ್ಥಾನ, ಎಸ್-ಯುಸಿಐ ಶೇ. 0.7, ಜಾರ್ಖಂಡ ಪಕ್ಷ (ಸೋರೆನ್) ಶೇ.0.56 ಸ್ಥಾನ ಹಾಗೂ ಸಮಾಜವಾದಿ ಫಾರ್ವರ್ಡ್ ಬ್ಲಾಕ್ ಶೇ.0.42 ಸ್ಥಾನಗಳನ್ನು ಗಳಿಸಿತು.

ಕೇಂದ್ರದೊಂದಿಗೆ ಸಂಘರ್ಷ

ಕೆಲವು ರಾಜ್ಯಗಳಿಗೆ ಹೊಡೆತ ಹಾಕಲು ಕೇಂದ್ರ ಸರಕಾರ ಕಾನೂನು ಮತ್ತು ಸುವ್ಯವಸ್ಥೆ ವಿಷಯವನ್ನು ಬಳಸತೊಡಗಿತು. ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಸರಕಾರಿ ಹುದ್ದೆಗಳಲ್ಲಿ ಕ್ರಿಮಿನಲ್‌ಗಳು ಇದ್ದರು. ಕೇಂದ್ರ ಗೃಹಸಚಿವ ಅಡ್ವಾಣಿಯೇ ಒಂದು ಮೊಕದ್ದಮೆಯಲ್ಲಿ ಸಿಲುಕಿದ್ದರು. ಆದರೂ ಬಿಜೆಪಿ ತನ್ನ ಉದ್ದೇಶಗಳಲ್ಲಿ ಏಕ ಮನಸ್ಸಿನಿಂದ ಕೆಲಸ ಮಾಡಿತು. ಮಿತ್ರ ಪಕ್ಷಗಳ ಒತ್ತಡಕ್ಕೆ ಮಣಿದ ಬಿಜೆಪಿ ಸರಕಾರ ಕೆಲವು ರಾಜ್ಯಗಳಿಗೆ 'ಸತ್ಯಶೋಧನೆ' ತಂಡಗಳನ್ನು ಕಳಿಸಿತು. ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಬಿಹಾರ ಹಿಟ್‌ಲಿಸ್ಟ್‌ನಲ್ಲಿದ್ದವು. ಕಾನೂನು ಮತ್ತು ಸುವ್ಯವಸ್ಥೆ ರಾಜ್ಯದ ವಿಷಯವಾಗಿರುವುದರಿಂದ ಈ ರೀತಿ ಮಾಡುವುದು ಸಂವಿಧಾನಕ್ಕೆ ವಿರುದ್ಧವಾಗುತ್ತದೆ ಎಂದು ನಾವು ಪ್ರತಿಭಟಿಸಿದೆವು. ಅಲ್ಲದೇ ಬಂಗಾಳದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಬಗ್ಗೆ ದೂರುವಂಥದ್ದೇನೂ ಇರಲಿಲ್ಲ. ಬಿಜೆಪಿ ಆಡಳಿತದ ರಾಜ್ಯಗಳಿಗೆ ಹೋಲಿಸಿದರೆ ಬಂಗಾಳ ಶಾಂತಿಯ ಸ್ವರ್ಗವಾಗಿದೆ.

ಕೆ.ಆರ್. ಮಲ್ಕಾನಿ ಮತ್ತು ಶಾಂತಕುಮಾರ್ ಒಳಗೊಂಡ ಬಿಜೆಪಿ ಸಂಸದೀಯ ನಿಯೋಗವನ್ನು ಜೂನ್ ಮಧ್ಯದಲ್ಲಿ ಬಂಗಾಳಕ್ಕೆ ಕಳಿಸಲಾಯಿತು. ಡಂಡಂ ಕ್ಷೇತ್ರದ ಬಿಜೆಪಿ ಸದಸ್ಯ ಕೂಡ ಅವರ ಜತೆ ಸುತ್ತಾಡಿದರು. ಅವರು ಜೂನ್ 15 ರಂದು ರಾಜ್ಯದ ಗೃಹಸಚಿವ ಬುದ್ಧದೇವ ಭಟ್ಟಾಚಾರ್ಯರನ್ನು ಭೇಟಿಯಾದರು. ನಾನು ಆಗ ದೆಹಲಿಯಲ್ಲಿದ್ದೆ. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿರುವುದಕ್ಕೆ ಯಾವುದೇ ಸಾಕ್ಷ್ಯವಿಲ್ಲದೆ ನಿಯೋಗ ಬರಿಗೈಯಲ್ಲಿ ಮರಳಿತು.

ಜೂನ್ 18ರಂದು ಕೇಂದ್ರ ಗೃಹಖಾತೆಯ ಹೆಚ್ಚುವರಿ ಕಾರ್ಯದರ್ಶಿ ನೇತೃತ್ವದಲ್ಲಿ ಗೃಹಖಾತೆ ತನ್ನದೇ ಒಂದು ತಂಡವನ್ನು ಬಂಗಾಳಕ್ಕೆ ಕಳಿಸಿತು. ಇದನ್ನು ನಾವು ಒಪ್ಪಲಿಲ್ಲ. ಕೇಂದ್ರ ಸರಕಾರ ನಿಯಮಗಳನ್ನು ಉಲ್ಲಂಘಿಸುತ್ತಿದೆ ಎಂದು ಹೇಳಿದೆವು. ಅವರು ಉಪೇಕ್ಷಿತ ಅತಿಥಿಗಳು.

(ಮುಂದುವರಿಯುವುದು)

ಹಿಂದಿನ ಸಂಚಿಕೆಯಲ್ಲಿ ಕಾಂಗ್ರೆಸ್‌ನಿಂದಾಗಿ 12ನೇ ಲೋಕಸಭಾ ಚುನಾವಣೆ, ಮತ್ತೆ ವಾಜಪೇಯಿ ಅಧಿಕಾರಕ್ಕೆ, 22 ಪಕ್ಷಗಳ ನೀತಿ ಬಾಹಿರ ಒಕ್ಕೂಟ ರಚನೆ, ಕಾಮ್ರೇಡ್ ಇಎಂಎಸ್ ನಿಧನ, ಅಣುಸ್ಫೋಟ ಈ ಬಗ್ಗೆ ಓದಿರುವಿರಿ.ಈ ಸಂಚಿಕೆಯಲ್ಲಿ ಈಶಾನ್ಯ ರಾಜ್ಯಗಳ ರೈಲ್ವೆ ಅಭಿವೃದ್ಧಿ ಬಗ್ಗೆ ಕೇಂದ್ರದೊಂದಿಗೆ ಚರ್ಚೆ ಮತ್ತೆ ಪಂಚಾಯತ್ ಚುನಾವಣೆಯಲ್ಲಿ ಎಡರಂಗದ ವಿಜಯ, ಪ.ಬಂಗಾಳ ಸರ್ಕಾರ ಉರುಳಿಸಲು ಕೇಂದ್ರದ ನಿರಂತರ ಯತ್ನ, ರಾಜ್ಯಕ್ಕೆ ಕೇಂದ್ರದ ಆಯೋಗದ ಮೇಲೆ ಆಯೋಗ ಭೇಟಿ, ಇದೇ ವಿಷಯದಲ್ಲಿ ಕೇಂದ್ರದೊಂದಿಗಿನ ಸಂಘರ್ಷ... ಈ ಬಗ್ಗೆ ಓದಿ



ಏನು ಜಾದೂ ಮಾಡಿದ್ದೀರಯ್ಯಾ • ನೀವು ಕಮ್ಯುನಿಸ್ಟರು

ಸಿ.ಎನ್.ಕಮ್ಯುನಿಸ್ಟನಾದದ್ದು - 2

ಸಹಪಾಠಿ ಆನಂದಕುಮಾರ್ ನನ್ನನ್ನು 'ಫಿಲಾಸಫರ್' ಎಂದು ಕರೆಯಲಾರಂಭಿಸಿದರು. ಕಾಲೇಜಿನಲ್ಲಿ ನಡೆದ 'ಮಾಕ್ ಪಾರ್ಲಿಮೆಂಟ'ನಲ್ಲಿ ಕಮ್ಯುನಿಸ್ಟ್ ಎಂ.ಪಿ.ಯಾಗಿ ರಾಷ್ಟ್ರೀಕರಣವನ್ನು ಸಮರ್ಥಿಸಿ ಮಾತನಾಡಿದೆ. ನಾನು ಕಾಲೇಜಿನಲ್ಲಿದ್ದಾಗ ಸೋವಿಯತ್ ಒಕ್ಕೂಟದ ಪ್ರಧಾನ ಮಂತ್ರಿ ಬುಲ್ಗಾನಿನ್, ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ನಿಕಿಟಾ ಕ್ರುಶ್ಚೇವ್ ಬೆಂಗಳೂರಿಗೆ ಭೇಟಿ ಕೊಟ್ಟರು. ಅವರು ತೆರೆದ ಜೀಪಿನಲ್ಲಿಯೇ ನಮ್ಮ ಕಾಲೇಜಿನ ಪಕ್ಕದ ರೇಸ್‌ಕೋರ್ಸ್ ರಸ್ತೆಯಲ್ಲಿಯೇ ಹೋದರು. ನಮ್ಮ ವಿದ್ಯಾರ್ಥಿ ಸಂಘದಿಂದ ಅವರಿಗೆ ದೊಡ್ಡ ಹೂಮಾಲೆಯನ್ನು ಹಾಕಿದುದು ನನಗೆ ಈಗಲೂ ನೆನಪಿದೆ. ಮುಂದಿನ ವರ್ಷ ಚೀನಾದ ಪ್ರಧಾನಿ ಚೌಎನ್‌ಲೈ ಬೆಂಗಳೂರಿಗೆ ಭೇಟಿ ಕೊಟ್ಟರು. ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿ ಅವರ ಭಾಷಣವನ್ನು ಕೇಳಿದೆ.

ಬೆಂಗಳೂರಿಗೆ ಬಂದ ನಂತರ ಕಮ್ಯುನಿಸ್ಟ್ ಸಾಹಿತ್ಯ ಸಿಕ್ಕುವ ಜಾಗಗಳನ್ನು ಹುಡುಕಿದೆ. ಮೈಸೂರು ಬ್ಯಾಂಕಿನ ಮುಂದೆ ಲೋಕಯ್ಯ ಶೆಟ್ಟಿ ಎಂಬುವರು (ಈಗ ಅವರು ಮಂಗಳೂರಿನಲ್ಲಿದ್ದಾರೆ, ಆದರೆ ಪಕ್ಷದಲ್ಲಿಲ್ಲ) ಸೋವಿಯತ್ ಪ್ರಕಟಣೆಗಳನ್ನಿಟ್ಟುಕೊಂಡು ಮಾರುತ್ತಿದ್ದರು. ಮೆಜೆಸ್ಟಿಕ್ ಸರ್ಕಲಿನಲ್ಲಿ ಹಿಮಾಲಯ ಟಾಕೀಸಿನ ಸಾಲಿನಲ್ಲಿ ಒಂದು ಪುಸ್ತಕದಂಗಡಿಯಲ್ಲಿ ಸೋವಿಯತ್ ಪುಸ್ತಕಗಳನ್ನು ಮಾರುತ್ತಿದ್ದರು. ಈ ಎರಡು ಅಂಗಡಿಗಳಿಂದ ಮಾರ್ಕ್ಸ್, ಏಂಗೆಲ್ಸ್, ಲೆನಿನ್‌ರ ಕೃತಿಗಳನ್ನು ಕೊಂಡು ಓದಲಾರಂಭಿಸಿದೆ. ಈ ಇಂಗ್ಲಿಷ್ ಪುಸ್ತಕಗಳು ಆಗ ನನಗೆ ಕಠಿಣವಾಗಿ ಕಂಡವು. ಆದರೂ ಹಟದಿಂದ ಅವುಗಳನ್ನು ಓದಿದೆ.

ಈ ವ್ಯಾಸಂಗಕ್ಕೆ ಸಹಾಯಕವಾಗುವ ಘಟನೆಗಳು ಕಾಲೇಜಿನಲ್ಲಿ ನಡೆಯುತ್ತಿದ್ದವು. ಕೇಂದ್ರ ಸರ್ಕಾರದಲ್ಲಿ ಉಪಸಚಿವರಾಗಿದ್ದ ಎಂ.ವಿ.ಕೃಷ್ಣಪ್ಪನವರು ನಮ್ಮ ಕಾಲೇಜಿಗೆ ಭೇಟಿ ಕೊಟ್ಟು ವಿದ್ಯಾರ್ಥಿಗಳ ಸಭೆಯಲ್ಲಿ ತಮ್ಮ ಚೀನದ ಭೇಟಿಯ ಬಗ್ಗೆ ಮಾತನಾಡುತ್ತಾ ಚೀನ ದಲ್ಲಿ ತಾವು ಎಲ್ಲಿಯೂ ಒಬ್ಬ ಭಿಕ್ಷುಕನನ್ನು ನೋಡಲಿಲ್ಲವೆಂದೂ, ಕಳ್ಳತನವಾಗು ವುದಿಲ್ಲವೆಂದೂ, ತಾವು ಮರೆತುಬಿಟ್ಟು ಹೊರಟಿದ್ದ ವಸ್ತು ತಮ್ಮನ್ನೇ ಹುಡುಕಿಕೊಂಡು ಬಂದುದು, ಅಲ್ಲಿಯ ಸಹಕಾರಿ ಕೃಷಿಗಳ ಬಗ್ಗೆ ಹೇಳಿದರು. ಚೀನದ ವಿದ್ಯಾರ್ಥಿ ನಿಯೋಗವೊಂದು ನಮ್ಮ ಕಾಲೇಜಿಗೆ ಭೇಟಿ ಕೊಟ್ಟಾಗ ನನ್ನ ಆನಂದ ಎಲ್ಲೆ ಮೀರಿತು. ನಮಗೆ ಇಂಗ್ಲಿಷ್ ಪಾಠ ಮಾಡುತ್ತಿದ್ದ ನಂಜುಂಡ ಶಾಸ್ತ್ರಿಗಳು ಬ್ರಿಟನ್ ನಾಲ್ಕು ಶತಮಾನಗಳ ಪ್ರಜಾಸತ್ತೆಯಲ್ಲಿ ಸಾಧಿಸಲಾಗ ದುದನ್ನು ಸೋವಿಯತ್ ರಷ್ಯ ನಾಲ್ಕು ದಶಕಗಳ ಕಾರ್ಮಿಕ ವರ್ಗದ ಸರ್ವಾಧಿಕಾರದಲ್ಲಿ ಸಾಧಿಸಿ ದುದನ್ನು, ಚೀನದಲ್ಲಿ ಮಾವೋ ನಾಯಕತ್ವದಲ್ಲಿ 'ಲಾಂಗ್ ಮಾರ್ಚ್' ಕುರಿತು ಹೇಳುತ್ತಿದ್ದುದು ನನ್ನ ಮನಸ್ಸಿನ ಮೇಲೆ ಆಳವಾದ ಪರಿಣಾಮಗಳನ್ನು ಮಾಡಿತು.

ಕಾಲೇಜಿಗೆ ಬಂದ ಸ್ವಲ್ಪಕಾಲದಲ್ಲಿಯೇ ನಡೆದ ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದೆ.

1957ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷವು ಗೆದ್ದು ಅಧಿಕಾರಕ್ಕೆ ಬಂದುದು ಸಂತೋಷವನ್ನೂ, ಆಶ್ಚರ್ಯವನ್ನೂ ಉಂಟು ಮಾಡಿತು. 1957ರಲ್ಲಿ ಕೆಲವು ತಿಂಗಳು ಚಾಮರಾಜಪೇಟೆಯ ರೆಡ್ಡಿ ಹಾಸ್ಟೇಲಿನಲ್ಲಿದ್ದಾಗ ನನಗೆ ಕ್ಯಾಸಂಬಳ್ಳಿಯ ನಾರಾಯಣರ ಪರಿಚಯವಾಯಿತು. ಅವರು ಆಗಲೇ ಪಕ್ಷದ ಸದಸ್ಯರಾಗಿದ್ದರು. ಕಮ್ಯುನಿಸ್ಟ್ ಚಳುವಳಿಯ ಕುರಿತು ವಿಚಾರವಿನಿಮಯ ಮಾಡಲು, ಹಿಂದಿನ ವರ್ಷ ಹಂಗೇರಿಯಲ್ಲಿ ನಡೆದ ಪ್ರತಿಕ್ರಾಂತಿಯನ್ನು ಚರ್ಚಿಸಲು, ಕ್ರುಶ್ಚೇವರ 'ಶಾಂತಿಯುತ ಸಹಬಾಳ್ವೆ, ಶಾಂತಿಯುತ ಪೈಪೋಟಿ ಮತ್ತು ಶಾಂತಿಯುತ ಪರಿವರ್ತನೆ'ಗಳನ್ನು ಚರ್ಚಿಸಲು ಅವರ ಪರಿಚಯ ಸಹಾಯ ಮಾಡಿತು.

ಕಮ್ಯುನಿಸ್ಟ್ ಆಂದೋಲನ ಸೆಳೆದ ಬಗೆ

1958ರ ಪ್ರಾರಂಭದಲ್ಲಿ ಭೇಟಿಯಾದಾಗ ಅವರು ನನಗೆ ಕಮ್ಯುನಿಸ್ಟ್ ಪಕ್ಷದ ಸದಸ್ಯನಾಗುವುದರ ಮಹತ್ವದ ಬಗ್ಗೆ ಹೇಳಿದರು. ಆಮೇಲೆ ಅವರು ನನ್ನನ್ನು ಭೇಟಿಯಾಗಲೇ ಇಲ್ಲ. ಆಗ ನನಗೆ ಕಮ್ಯುನಿಸ್ಟ್ ಪಕ್ಷದ ಬೇರೆ ಸದಸ್ಯರ ಪರಿಚಯವಿರಲಿಲ್ಲ. ಆದ್ದರಿಂದ ಆ ವಿಷಯ ಅಲ್ಲಿಗೇ ನಿಂತಿತು.

(ಮುಂದುವರಿಯುವುದು)

ಇತ್ತೀಚೆಗೆ ನಿಧನರಾದ ಸಂಗಾತಿ ಸಿ.ನಂಜುಂಡಪ್ಪನವರು ತಾವು ಕಮ್ಯುನಿಸ್ಟನಾದ ಬಗೆಯನ್ನು ಹಿಂದೊಮ್ಮೆ ಐಕ್ಯರಂಗ ಪತ್ರಿಕೆಯಲ್ಲಿ ಬರೆದದ್ದನ್ನು ಮತ್ತೆ ಕಳೆದ ವಾರದಿಂದ ಪ್ರಕಟಿಸಲಾಗುತ್ತಿದ್ದು ಅದರ ಮುಂದುವರಿದ ಭಾಗ.....



ಈ ವಾರ ಕರ್ನಾಟಕ ಒಂದು ನೋಟ

ಎಸ್.ವೈ.ಗುರುಶಾಂತ್

ನೆಲ ಕಚ್ಚಿದ ಬಿಜೆಪಿ - ಆಕಾಶನೋಡುತ್ತಿರುವ ನಾಯಕರು

ಒಂದು ಉಪಚುನಾವಣೆ ಅಥವಾ ಕೆಲ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಒಟ್ಟು ರಾಜಕೀಯ ಸ್ಥಿತಿ, ಅದರ ಪ್ರಮುಖ ಬದಲಾವಣೆಗಳನ್ನೇನೂ ಪ್ರತಿನಿಧಿಸುವುದಿಲ್ಲವೆಂಬುದು ನಿಜವಾದರೂ ಜನತೆಯ ಅಂದಿನ ಮನೋಭಾವವನ್ನು ಖಂಡಿತವಾಗಿ ಹೊರಗೆಡಹುತ್ತವೆ. ಇತ್ತೀಚೆಗೆ ನಡೆದ ಮಂಗಳೂರು ಮಹಾನಗರ ಪಾಲಿಕೆ ಹಾಗೂ ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತದಿಂದ ಗೆದ್ದಿದೆ. ಎರಡೂ ಕಡೆ ಪ್ರಬಲವಾಗಿದ್ದ ಬಿಜೆಪಿ ಸೋತಿದೆ. ಅದರಲ್ಲೂ ನರಸಿಂಹರಾಜ ಕ್ಷೇತ್ರದಲ್ಲಿ ಡಿಪಾಸಿಟ್ ಕಳದುಕೊಂಡು ಕಂಗಾಲಾಗಿ ನೆಲಕಚ್ಚಿದೆ.

ಕರ್ನಾಟಕದ ಕಳೆದ ವಿಧಾನಸಭಾ ಚುನಾವಣೆ ಮತ್ತು ನಂತರದ ಚುನಾವಣೆಗಳಲ್ಲಿ ಕೋಮವಾದಿ ಜನದ್ರೋಹಿ ಬಿಜೆಪಿ ಅಧಿಕಾರ ಹಿಡಿಯುವುದನ್ನು ಜನತೆ ಸತತವಾಗಿ ತಿರಸ್ಕರಿಸುತ್ತಾ ಬಂದ ಪ್ರಕ್ರಿಯೆಯ ಮುಂದುವರಿಕೆಯಿದು. ಫ್ಯಾಸಿಸ್ಟ್ ಹಿಂದುತ್ವದ, ಗುಜರಾತ್ ಹತ್ಯಾಕಾಂಡ, ಪಾಕ್‌ನೊಂದಿಗೆ ಯುದ್ಧದ ಉನ್ಮಾದಗಳು ಅವರ ನೆರವಿಗೆ ಬಂದಿಲ್ಲ. ದೇಶದ ಜನತೆಯ ಜೀವನಕ್ಕೆ ಸಂಚಕಾರ ತಂದ ಆರ್ಥಿಕ-ರಾಜಕೀಯ ನೀತಿಗಳ ವಿರುದ್ಧ ಜನತೆಯ ಆಕ್ರೋಶ ಗುಜರಾತ್, ಅಯೋಧ್ಯಾ ಘಟನೆಗಳನ್ನು ಬಳಸಿ, ರಾಜ್ಯದಲ್ಲಿಯೂ ಕೋಮುದ್ವೇಷದ ಕಿಚ್ಚನ್ನು ಹಚ್ಚುವ ಅದರ ಎಲ್ಲಾ ಪ್ರಯತ್ನಗಳ ರಾಜಕೀಯವನ್ನು ಸೋಲಿಸಲು ರಾಜ್ಯದ ಜನತೆ ಪರ್ಯಾಯವಾಗಿ ಕಾಂಗ್ರೆಸ್ಸನ್ನೇ ಆರಿಸಿದ್ದಾರೆ. ಆದರೆ ಕಾಂಗ್ರೆಸ್ಸಿಗರು ಕೃಷ್ಣರ ಆಡಳಿತಕ್ಕೆ -ಸೋನಿಯಾ ಚಾಣಾಕ್ಷತನಕ್ಕೆ ಮತನೀಡಿದ್ದಾರೆಂದು ಹೊಗಳಿಕೊಳ್ಳುತ್ತಿರುವುದು ಒಂದು ಹಾಸ್ಯಾಸ್ಪದ ಪ್ರಸಂಗವೇ ಸರಿ. ಹೀಗೆ ಜನತೆಯು ಕೋಮುವಾದಿಗಳಿಗೆ ಪರ್ಯಾಯವಾಗಿ ನೀಡಿದ ಫಲಿತಾಂಶವನ್ನು ತಮ್ಮ ದುರಾಡಳಿತದ-ಜನವಿರೋಧಿ ನೀತಿಗಳನ್ನು ಮುಚ್ಚಿಕೊಳ್ಳುವ, ವಾಸ್ತವಸ್ಥಿತಿಯಿಂದ ಪಾಠ ಕಲಿಯಲಾರದ, ಕಡು ತಿರಸ್ಕಾರದ, ರಾಜಕೀಯ ದುರ್ಲಾಭದ ಲೆಕ್ಕಾಚಾರವಷ್ಟೆ.

ಹಿಂದಿನ ವಿಧಾನಸಭೆ, ಪಾರ್ಲಿಮೆಂಟ್ ಚುನಾವಣೆಯಲ್ಲಿ ಬಿಜೆಪಿಗೆ ಭದ್ರನೆಲೆಯನ್ನು ಮಂಗಳೂರಿನಲ್ಲಿ ಜನತೆ ನೀಡಿದ್ದರು. ಈಗ ಬಿಜೆಪಿ ಕುಸಿದಿದೆ. ಆದಾಗ್ಯೂ ಬಿಜೆಪಿ ಗಳಿಸಿರುವ ಮತಗಳು ಹಾಗೂ ಅದರ ಅಂತರ ಗಮನಿಸಿದರೆ ಬಿಜೆಪಿ ಸೋತಿದೆ ನಿಜ, ಆದರೆ ನೆಲ ಕಚ್ಚಿಲ್ಲ. ಇನ್ನೂ ಕಾಂಗ್ರೆಸ್ ಮೇಲಿನ ಕೋಪ, ಬಿಜೆಪಿಯನ್ನೇ ಪರ್ಯಾಯವೆಂದು ಕಾಣುತ್ತಿರುವ ಮನೋಭಾವ ಬಲವಾಗಿದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್‌ನ ಆಡಳಿತ-ನೀತಿಗಳಿಂದ ಬರಬಹುದಾದ ಅತೃಪ್ತಿಯನ್ನೇ ಬಳಸಿ ಬೆಳೆಯುವ ಅಪಾಯಕಾರಿ ಆಟ ಹೂಡುವ ಸ್ಥಿತಿಯಲ್ಲಂತೂ ಬಿಜೆಪಿ ಇದೆ.

ಮೈಸೂರಿನ ನರಸಿಂಹರಾಜ ವಿಧಾನ ಸಭಾ ಕ್ಷೇತ್ರ, ಮಂಗಳೂರು ಮಹಾನಗರಪಾಲಿಕೆ



ಚುನಾವಣೆಗಳಲ್ಲಿ ಕಾಂಗ್ರೆಸ್, ಬಿಜೆಪಿಗಳು ಎಗ್ಗಿಲ್ಲದೇ ಹಣ, ಹೆಂಡ, ತೋಳ್ಬಲ (ಬಲ ಪಂಥೀಯರ ಶಕ್ತ್ಯಾನುಸಾರದಂತೆ) ಮತದಾರರ ಪಟ್ಟಿಯಿಂದಲೇ ಮತದಾರರನ್ನು ಅಪಹರಿಸುವಂತಹ ಹಲವು ಅಕ್ರಮಗಳನ್ನು 'ತಮ್ಮ ಜನ್ಮ ಸಿದ್ಧ ಹಕ್ಕು' ಎಂಬಂತೆ ಬಳಸಿವೆ. ಈ ಕ್ಷೇತ್ರದಲ್ಲಿ ಅಜೀಜ್ ಸೇಠ್ ಶಾಸಕರಾಗಿದ್ದರು. ಅವರ ನಿಧನದ ನಂತರ ಕಾಂಗ್ರೆಸ್ ಅವರ ಮಗನಿಗೆ ಟಿಕೇಟ್ ಕೊಟ್ಟು ಅನುಕಂಪದ ಮತದೊಂದಿಗೆ 'ಅಲ್ಪಸಂಖ್ಯಾತರ ಪರ'ವೆಂದು ಪೋಜು ನೀಡಿತು. ಕನಕಪುರದ ಕುಖ್ಯಾತಿಯ 'ಡಿಕೇಶಿ' ತಮ್ಮ ಗ್ಯಾಂಗಿನೊಂದಿಗೆ ಅಲ್ಲೇ ತಳವೂರಿ ಕೃಷ್ಣರ ಕಿರೀಟ ಉಳಿಸಲು, ಹದಗೆಟ್ಟ ಸಂಬಂಧ ಸುಧಾರಿಸಲು ಟೆಂಟ್ ಹಾಕಿ, ಎಲ್ಲಾ ಕರಾಮತ್ತುಗಳನ್ನು ನಡೆಸಿದರು. ಒಂದು ವೇಳೆ ಜನತಾದಳ(ಎಸ್)ನ ಅಭ್ಯರ್ಥಿಯೆದುರು ಸೋತುಹೋದರೆ ಕೃಷ್ಣರ ರಾಜಕೀಯ ಭವಿಷ್ಯ ಮಂಕಾದೀತೆಂದು, ಆಗ ತಾವೂ ಗುಳೇ ಹೋಗಬೇಕಾಗಿ ಬರಬಹುದೆಂದು, ಡಜನ್ ಗಟ್ಟಲೇ ಮಂತ್ರಿ ಮಹೋದಯರು ಬರಬರ ತಿರುಗಿದರು. ಸ್ವತಃ ಕೃಷ್ಣರವರೇ ಎರಡು ಸುತ್ತಿನ ಪ್ರಚಾರ ನಡೆಸಿ ಗೆಲುವಿಗಾಗಿ ಶ್ರಮಿಸಬೇಕಾಯಿತು.

ಅಲ್ಲಿ ಮತದಾನವಾದದ್ದೇ ಅತ್ಯಂತ ಕಡಿಮೆ. ಶೇ 47 ರಷ್ಟು.ಈ ಎಲ್ಲಾ ಪಕ್ಷಗಳು ಎಷ್ಟೆಲ್ಲಾ ವರಸೆ ಮಾಡಿದರೂ ಬಹುಸಂಖ್ಯೆಯ ಮತದಾರರನ್ನು ಮತದಾನಕ್ಕೆ ಮನವೊಲಿಸಿಕೊಳ್ಳಲಾಗಲಿಲ್ಲ. ಇದು ಒಂದರ್ಥದಲ್ಲಿ ಮತದಾರರ ಮೌನ ತಿರಸ್ಕಾರ. ಜನತಾದಳ(ಎಸ್) ನ ಅಭ್ಯರ್ಥಿ ಮಾರುತಿ ರಾವ್ ಪವಾರ್ ಒಮ್ಮೆ ಶಾಸಕರಾಗಿದ್ದರು. ಬಿಜೆಪಿಯನ್ನು ತೊರೆದವರು. ಈಗ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಿದೆ. ಒಂದರ್ಥದಲ್ಲಿ ಸಿಪಿಐ(ಎಂ) ಬೆಂಬಲಿತ ಜನತಾದಳ(ಎಸ್) ಪರ್ಯಾಯವಾಗಿ ಕಂಡಿದೆ. ಇನ್ನು ಬಿಜೆಪಿಗೆ ಜನ ಸುತಾರಾಂ ಒಪ್ಪಲು ಸಿದ್ದರಿಲ್ಲ. ತಿರಸ್ಕಾರಕ್ಕೆ ಯೋಗ್ಯವೆಂದೇ ಜನರ ನಿರ್ಧಾರ.

ಇಷ್ಟೆಲ್ಲಾ ಆದರೂ ಮಂಗಳೂರು ನರಸಿಂಹರಾಜ ಕ್ಷೇತ್ರದ ಆಘಾತಕಾರಿ ಸೋಲಿನ ಬಗ್ಗೆ ಧನಂಜಯ ಕುಮಾರ್, ಬಸವರಾಜ ಪಾಟೀಲ ಸೇಡಂ ಆದಿಯಾಗಿ ಏನೂ ಆಗಿಲ್ಲವೆಂಬಂತೆ ತಣ್ಣಗಿರುವುದು. ವಿವರ ಮಾಹಿತಿಯ ವರದಿ ಸಲ್ಲಿಸಲು ಒಬ್ಬರಿಗೆ ಆಜ್ಞೆ ನೀಡಿ ಕಾಲು ಚಾಚಿರುವುದು. ಮೇಲಾಗಿ ಎಲ್ಲಾ ನಾಚಿಕೆ, ಜನಕಾಳಜಿ ಬಿಟ್ಟು ರಾಜ್ಯಾಧ್ಯಕ್ಷ ಸೇಡಂ ನಂತಹವರು ಪೆಟ್ರೋಲ್, ಡೀಸೆಲ್ ದರಗಳ ಹೆಚ್ಚಳವನ್ನು ಕಿವುಡರೂ ಕಿವಿ ಮುಚ್ಚಿಕೊಳ್ಳುವಂತೆ ಸಮರ್ಥಿಸಿಕೊಳ್ಳುತ್ತಿರುವುದು! ಅತ್ತ ಅನಂತ ಕುಮಾರ್ ಗುಂಪು ಈ ಸೋಲುಗಳನ್ನು ತಮ್ಮ ವಿರೋಧಿ ಗುಂಪುಗಳ ತಲೆಗೆ ರವಾನಿಸಲು ಬಲೆ ಹಾಕಿ ಕಾಯುತ್ತಿರುವುದು.

ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸತತ ಜನರ ಸಮಸ್ಯೆಗಳಿಗೆ ಹೋರಾಡುತ್ತಾ, ಮಿಡಿಯುತ್ತಾ ಬಂದಿರುವ ಸಿಪಿಐ(ಎಂ) ಐದು ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. ಜಪ್ಪಿನ ಮೊಗರು, ಬಜಾಲುಗಳಲ್ಲಿ ಕಮ್ಯುನಿಸ್ಟ್ ಚಳುವಳಿ ಪ್ರಬಲ. ಉಳಿದೆಡೆ ಸಂಘಟನೆ ಬೆಳೆಯುತ್ತಿರುವ ಪ್ರದೇಶಗಳು. ಮೇಲಿನ ಆ ಎರಡು ಪ್ರದೇಶಗಳಲ್ಲಿ ಗೆಲವು ನಿಶ್ಚಿತವೆಂಬುದು ಜನಜನಿತ ವಿಷಯ. ಆದರೆ ಚುನಾವಣೆಯಲ್ಲಿನ ಮಾತು ಮತಗಳಾಗಬೇಕಲ್ಲ! ಅದರಲ್ಲೂ ಈ ಸ್ಥಳೀಯ ಚುನಾವಣೆಗಳೆಂದರೂ ಅದಕ್ಕಿರುವ ಬಿರುಸು, ಬಲ ಕಮ್ಮಿಯೇನಲ್ಲ. ಬೂರ್ಷ್ವಾ ಪಕ್ಷಗಳ ಕುತಂತ್ರ, ಹಣ-ಬಲದ ಆರ್ಭಟದಲ್ಲಿ ಅತ್ಯಂತ ಕಡಿಮೆ ಅಂತರದಲ್ಲಿ ಸೋಲಬೇಕಾಯಿತು. ಜಪ್ಪಿನ ಮೊಗರಿನ ಜಯಂತಿ ಬಿ.ಶೆಟ್ಟಿಯವರು 14 ಮತಗಳಿಂದ, ಬಜಾಲ್‌ನ ಯುವ ಮುಖಂಡ ಸುರೇಶ್ ಬಜಾಲು 271 ಮತಗಳ ಅಂತರದಿಂದ ಸೋತಿದ್ದಾಯಿತು. ಹೀಗೆ ದುಡಿವ ವರ್ಗವೇ ವ್ಯಾಪಕವಾಗಿರುವ ಪ್ರದೇಶಗಳ ಮಂಗಳೂರು ಮ.ನ.ಪಾಲಿಕೆಯಲ್ಲಿ ದುಡಿವ ವರ್ಗದ ಪ್ರತಿನಿಧಿ ಇಲ್ಲದಂತಾಯಿತು. ದುಡಿವ ವರ್ಗ ತನ್ನ ರಾಜಕೀಯ ಶಕ್ತಿಯ ವಿಸ್ತರಣೆ, ಅದರ ಕ್ರೋಢೀಕರಣ-ಜನತೆಯ ಸಮಸ್ಯೆಗಳ ಪರಿಹಾರಕ್ಕೆ ಸತತ ಮಧ್ಯಪ್ರವೇಶ, ಹೋರಾಟಗಳ ಮೂಲಕ ನಿಜವಾದ ಪರ್ಯಾಯ ರೂಪಿಸಲು ಸನ್ನದ್ಧಗೊಳ್ಳಬೇಕಿದೆ.

ಜನರ ಸುಲಿಯಲು ಒಂದಾದ ಬಿಜೆಪಿ-ಕಾಂಗ್ರೆಸ್

ಕೇಂದ್ರ ಸರ್ಕಾರ ಪೆಟ್ರೋಲ್-ಡೀಸೆಲ್ ದರಗಳನ್ನು ವಂಚನಾತ್ಮಕವಾಗಿ ಹೆಚ್ಚಿಸಿದ್ದೇ ಆ ಎಲ್ಲಾ

ಪುಟ 8 ಕ್ಕೆ

ಮಂಗಳೂರು ಮ.ಪಾಲಿಕೆಯ ಚುನಾವಣೆಯಲ್ಲಿ ಸಿಪಿಐ(ಎಂ)ಗೆ ಬಿದ್ದ ಮತಗಳು

	ಜಪ್ಪಿನಮೊಗರು	ಪದವು	ಬೋಳಾರ	ಬಜಾಲ್	ಡೇರೆಬೈಲು
ಕಾಂಗ್ರೆಸ್	1,574	2,750	1,104	1,644	1,024
ಸಿಪಿಐ(ಎಂ)	ಜಯಂತಿ ಬಿ ಶೆಟ್ಟಿ	ಶಿಧರ್ ಕೆ	ಯಾದಶೆಟ್ಟಿ	ಸುರೇಶ್ ಬಜಾಲ್	ಬಾಬು ದೇವಾಡಿಗ
	1,560	404	338	1373	211
ಬಿಜೆಪಿ	708	788	1,120	776	1,401

ಇದು ಕೋಮುವಾದವನ್ನು ಎದುರಿಸುವ ಪರಿ

'ಸಂಘ ಪರಿವಾರದಲ್ಲಿರುವವರೆಲ್ಲ ಕೋಮುವಾದಿಗಳಲ್ಲ. ಅಲ್ಲಿ ಸೌಮ್ಯವಾದಿಗಳೂ ಇದ್ದಾರೆ. ಜಾತ್ಯಾತೀತವಾದಿಗಳಲ್ಲಿ ಕೋಮುವಾದ ಕೆರಳಿಸುವವರೂ ಇದ್ದಾರೆ" ಇಂತಹ ವಿಚಿತ್ರ ವಿಶ್ಲೇಷಣೆ ಮಾಡಿದವರು ನ್ಯಾಯಮೂರ್ತಿ ಎ.ಜಿ.ಸದಾಶಿವರವರು. ಅವರದು ಉದ್ಘಾಟನಾ ಭಾಷಣ. ಅದೂ ಕೋಮುವಾದದ ಅಟ್ಟಹಾಸ-ಗುಜರಾತ್ ಹತ್ಯಾಕಾಂಡದಿಂದ ತಲ್ಲಣಗೊಂಡು ಆ ಕೃತ್ಯಗಳನ್ನು ವಿರೋಧಿಸಿ ಕೋಮುವಾದ ವಿರೋಧಿ ಆಂದೋಲನ ಸಮಿತಿಯ ದಿನವಿಡೀ ಕಾರ್ಯಕ್ರಮದಲ್ಲಿ. ಸಂಘ ಪರಿವಾರದಲ್ಲಿ ಜಾತ್ಯಾತೀತರನ್ನು, ಜಾತ್ಯಾತೀತರಲ್ಲಿ ಕೋಮುವಾದಿಗಳನ್ನು ಗುರುತಿಸುವಂತಹ ಸಂಶೋಧನೆಗಳನ್ನು ಹಲವು ವರ್ಷಗಳಿಂದ ಅವರು ಮಾಡುತ್ತಾ ಬಂದಿದ್ದಾರೆ. ಇದನ್ನು ಮುಗ್ಧ ವಿಶ್ಲೇಷಣೆ ಎನ್ನಬೇಕೋ ಅಥವಾ ಸ್ಥಾನ-ಮಾನಗಳನ್ನು ಹೆಚ್ಚಿಸಿಕೊಳ್ಳುವ ಪ್ರಬುದ್ಧ ಪ್ರಜ್ಞಾ ಚಪಲವೆನ್ನಬೇಕೋ?

ಇಂತಹ ಅಡ್ಡಗೋಡೆ ಮೇಲೆ ದೀಪವಿಟ್ಟು ಬೆಳಕು ತೋರಿಸುವುದನ್ನು ಅರಗಿಸಿಕೊಳ್ಳುವುದು ಕಷ್ಟ. ಸಂಘ ಪರಿವಾರದೊಳಗಿನ ಸೌಮ್ಯವಾದಿಗಳನ್ನು ಬಳಸಿ ಪರಿವರ್ತನೆ ತರಬಹುದೆಂಬ ವಿಚಾರಲಹರಿ ಬೇರೆ. ಇಂತಹ ವಿಶ್ಲೇಷಣೆಗಳು ಸಂಘ ಪರಿವಾರದ ಸಮರ್ಥನೆಯ 'ಸೌಮ್ಯ' ಧಾಟಿಯವು. ಈ ವ್ಯಾಖ್ಯಾನಗಳನ್ನು ವಾಸ್ತವ ಚಿಂತವರು ಒಪ್ಪಲಾಗದು. ಆದರೆ ಸಂಘ ಪರಿವಾರ ಮೆಚ್ಚಿ ಹೌದೆನ್ನಲು ಯಾವುದೇ ಅಡ್ಡಿ ಬರಲಿಕ್ಕಿಲ್ಲ! ಗೌರವಾನ್ವಿತ ನ್ಯಾಯಮೂರ್ತಿಗಳು ಸಂಘ ಪರಿವಾರದ ಇತಿಹಾಸವನ್ನು ಫ್ಯಾಸಿಸ್ಟ್ ಸ್ವರೂಪ, ಅದರ ಎರಡು ನಾಲಿಗೆಯ ಸಿದ್ಧಾಂತವನ್ನು ಅದು ಜಾರಿಯಾದ ವಾಸ್ತವದ ಪರಿಸ್ಥಿತಿಯನ್ನು ನೋಡಬೇಕಿತ್ತು. ಹಿಂದೆ ನಡೆದ ಅನೇಕ ಕೋಮು ಘರ್ಷಣೆಗಳ ತನಿಖೆಯನ್ನೂ ನಡೆಸಿದ ಆಯೋಗಗಳು ನೀಡಿದ ವರದಿಗಳನ್ನು ನ್ಯಾಯಮೂರ್ತಿಗಳು ಪರಿಶೀಲಿಸಬೇಕಿತ್ತು. ಅಲ್ಲದೇ ಸೆಕ್ಯುಲರಿಸಂ ಬಗೆಗಿನ ಸುಪ್ರೀಂಕೋರ್ಟ್ ನ ತೀರ್ಪನ್ನು ಅವಗಾಹನೆಗೆ ತೆಗೆದುಕೊಳ್ಳಬೇಕಿತ್ತು. ಇಲ್ಲವಾದರೆ ಗುಜರಾತ್‌ನ ಹತ್ಯಾಕಾಂಡದ ನರಮೇಧದ ದಳ್ಳುರಿಯ ನಡುವೆ ನಿಂತು ಇಂತಹ ಮಾತುಗಳನ್ನು ಆಡಬೇಕೆಂದರೆ ಮನೋಸ್ಥಿತಿ ಏನಿರಬಹುದು ಎಂದು ಊಹಿಸುವುದು ಕಷ್ಟವೇನಲ್ಲ.

ಹಾಗೆಯೇ 'ಸೌಹಾರ್ದತೆಯ ವೈರಿಗಳು ಆರ್‌ಎಸ್‌ಎಸ್, ಮುಸ್ಲಿಂಲೀಗ್ ಅಲ್ಲ, ಅವರು ರಾಜಕಾರಣಿಗಳು" ಎಂಬಂತಹ ದಿಕ್ಕೆಡಿ ಪಾಠ ಪ್ರವಚನವನ್ನು ಇ.ಪಿ.ಮೆನನ್ ನೀಡಿದ್ದಾಗಿ ವರದಿಯಿದೆ. ಕೋಮುವಾದವನ್ನು ವಿರೋಧಿಸುವ ಮೆನನ್‌ರ ಇಂತಹ ವಾದಗಳಿಂದ ಕೋಮುವಾದವನ್ನು ಹಿಮ್ಮೆಟ್ಟಿಸುವುದಾಗಲೀ, ಸೌಹಾರ್ದತೆ(ಯಾರೊಂದಿಗೆ) ಸಾಧಿಸುವುದಾದರೂ ಹೇಗೆ ಎಂದು ಚಿಂತಿಸಬೇಕಿದೆ.

'ಎಡ'ವದ ಹೆಜ್ಜೆಯು 'ಬೆಳ್ಳಿ' ಗೆಜ್ಜೆನಾದ

ಪಶ್ಚಿಮ ಬಂಗಾಳ 25 ವರ್ಷಗಳ ಎಡರಂಗ ಸರ್ಕಾರ

ಜನರು ಸೃಷ್ಟಿಸಿದ ಇತಿಹಾಸ

ಜ್ಯೋತಿ ಬಸು

ಸಂಭ್ರಮದಲ್ಲಿ ಪ.ಬಂಗಾಳದ ಜನತೆ



ಪ.ಬಂಗಾಳದ ಎಡರಂಗಕ್ಕೀಗ 25 ವರುಷಗಳು ತುಂಬಿದ ಸಂಭ್ರಮ. ಸಂಸದೀಯ ಪ್ರಜಾಪ್ರಭುತ್ವದಲ್ಲಿ ಅತ್ಯಂತ ಸೀಮಿತ ಅಧಿಕಾರಗಳಿರುವ ರಾಜ್ಯ ಸರ್ಕಾರವೊಂದು ಕೇಂದ್ರ ಮತ್ತು ವಿದೇಶಿ ಪ್ರತಿಗಾಮಿಗಳ ಧಾಳಿ, ದಬ್ಬಾಳಿಕೆ ಎದುರಿಸುತ್ತಾ, ಚುನಾಯಿತವಾಗುತ್ತಾ, ಮುನ್ನಡೆಯುತ್ತಿರುವುದು ವಿಶ್ವದಲ್ಲೇ ದಾಖಲೆ. ದೇಶದಲ್ಲಿ ಆಳುವ ಭೂಮಾಲಕ, ಬಂಡವಾಳಶಾಹಿ ಆಡಳಿತಕ್ಕೆ ಭಿನ್ನವಾಗಿ ದುಡಿವ ಜನರ ಪರ್ಯಾಯ ಸಾಬೀತು ಮಾಡಿದ್ದು ಅವರ್ಣನೀಯ. ಇಂತಹ ಅಪೂರ್ವ ಸಾಧನೆ ಸಾಧ್ಯವಾದದ್ದು ಹೇಗೆ? ಸಾಗಿ ಬಂದ ಹಾದಿ ಎಂತಹದ್ದು ಎಂಬುದನ್ನು ಹಿರಿಯ ನಾಯಕ ಪರ್ಯಾಯದ ಹಾದಿಯ ರೂವಾರಿಯಲ್ಲೊಬ್ಬರಾದ ಕಾಂ. ಜ್ಯೋತಿಬಸು ವಿವರಿಸಲಿದ್ದಾರೆ. ಮುಂದಿನ ಸಂಚಿಕೆಗಳಲ್ಲಿ ಅಗಾಧ ಅನುಭವಗಳ ಇನ್ನೂ ಹಲವು ಲೇಖನಗಳನ್ನು ಪ್ರಕಟಿಸಲಾಗುವುದು.

ಪಶ್ಚಿಮ ಬಂಗಾಳದಲ್ಲಿ ಸತತ 25 ವರ್ಷಗಳಿಂದ ಎಡರಂಗ ಸರಕಾರ ಅಧಿಕಾರದಲ್ಲಿದೆ ಆರನೆ ಎಡರಂಗ ಸರಕಾರ 2001ಮೇ 18ರಂದು ಅಧಿಕಾರದ ಪ್ರಮಾಣ ಸ್ವೀಕರಿಸಿತು. ಈ ಬಾರಿ ಒಟ್ಟು 294 ಸ್ಥಾನಗಳಲ್ಲಿ 199ರಲ್ಲಿ ಗೆದ್ದು ಮೂರನೇ ಎರಡು ಬಹುಮತದಿಂದ ಸರಕಾರ ರಚಿಸಿದೆ. ಇದು ಕಳೆದ ಬಾರಿಯಲ್ಲಿದ್ದಕ್ಕಿಂತ ನಾಲ್ಕು ಸ್ಥಾನ ಕಡಿಮೆಯೇ ಹೌದು. ತೃಣಮೂಲ ಕಾಂಗ್ರೆಸ್ ಹಾಗೂ ಕಾಂಗ್ರೆಸ್ ಪಕ್ಷ ಒಟ್ಟಾಗಿ 86 ಸ್ಥಾನಗಳನ್ನು ಗೆದ್ದಿದ್ದವು. ಇದರಲ್ಲಿ ತೃಣಮೂಲ 60 ಹಾಗೂ ಕಾಂಗ್ರೆಸ್ ಪಕ್ಷದ್ದು 26. ಇದಕ್ಕೂ ಹಿಂದಿನ 1996ರ ಚುನಾವಣೆಗಳಲ್ಲಿ ಕಾಂಗ್ರೆಸ್ 85 ಕ್ಷೇತ್ರಗಳಲ್ಲಿ ಗೆದ್ದಿತ್ತು. ಭಾರತೀಯ ಜನತಾಪಕ್ಷ ಇದ್ದ ಒಂದು ಸ್ಥಾನವನ್ನು ಕಳೆದುಕೊಂಡಿತು. ರಾಜ್ಯದ ಒಟ್ಟು 59 ಪರಿಶಿಷ್ಟ ಜಾತಿ ಶಾಸಕರಲ್ಲಿ 44 ಜನರು ಎಡರಂಗಕ್ಕೆ ಸೇರಿದವರು; ಉಳಿದವರು ಪ್ರತಿಪಕ್ಷದವರು. ಪರಿಶಿಷ್ಟ ಪಂಗಡದ 17 ಶಾಸಕರಿದ್ದು ಆ ಪೈಕಿ 16 ಮಂದಿ ಎಡರಂಗದವರು. ಒಬ್ಬರು ಮಾತ್ರ ಪ್ರತಿಪಕ್ಷದವರು. ಒಟ್ಟು 41 ಮುಸ್ಲಿಂ ಶಾಸಕರಲ್ಲಿ 27 ಮಂದಿ ಎಡರಂಗದವರು 10 ಜನ ಕಾಂಗ್ರೆಸ್‌ನವರು, ಒಬ್ಬರು ತೃಣಮೂಲದವರು, ಉಳಿದ ಮೂರು ಜನ ಪಕ್ಷೇತರರು. ಇತರ ಎರಡು ಸಣ್ಣಪಕ್ಷಗಳು ಐದು ಶಾಸಕರನ್ನು ಹೊಂದಿವೆ.

ಎಡರಂಗದಲ್ಲಿ ಜನರ ಮರುವಿಶ್ವಾಸ

ವಿಜಯ ಅತ್ಯಂತ ಮಹತ್ವದ್ದು ಯಾಕೆಂದರೆ ವಿಶೇಷವಾಗಿ ಎರಡು ಇಂಗ್ಲಿಷ್ ಹಾಗೂ ಎರಡು ಬಂಗಾಳಿ, ಹೀಗೆ ಒಟ್ಟು ನಾಲ್ಕು ದಿನಪತ್ರಿಕೆಗಳು ವಾಸ್ತವ ಹಾಗೂ ಸತ್ಯವನ್ನು ಆದರಿಸಿ ಎಡರಂಗ ಸರಕಾರದ ವಿರುದ್ಧ ಟೀಕೆ ಮಾಡುವ ಬದಲು ವರ್ಷಗಟ್ಟಲೆ ಸುಳ್ಳು ಹಾಗೂ ಅಪಪ್ರಚಾರದ ಅಲೆಯನ್ನೇ ಹರಿಸಿದವು. ಈ ಬಾರಿ ದಾಳಿ ಇನ್ನೂ ತೀಕ್ಷ್ಣವಾಗಿತ್ತು. ಎಡರಂಗ ಸರಕಾರ ತನ್ನ ಸೀಮಿತ ಅಧಿಕಾರಗಳ ಮಿತಿಯಲ್ಲಿಯೇ ಬಹುತೇಕ ಎಲ್ಲಾ ಕೇಂದ್ರ ಸರಕಾರಗಳ ಪಕ್ಷಪಾತಿ ಧೋರಣೆಗಳನ್ನು ಎದುರಿಸಬೇಕಾಗಿತ್ತು. ಆದರೆ ಜನತೆಯ ದೃಢ ಬೆಂಬಲದಿಂದಾಗಿ ಅದು ಅನೇಕ ಸಂಕಷ್ಟಗಳನ್ನು ಎದುರಿಸಿ ಪಾರಾಯಿತು. ಹಾಗೂ ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುತ್ತಿದೆ. ಇಂಥ ಸನ್ನಿವೇಶದಲ್ಲಿ ಮೂಲಭೂತ ಬದಲಾವಣೆಗಳನ್ನು ತರಲು ನಮಗೆ ಸಾಧ್ಯವಿಲ್ಲ; ಆದರೆ ಜನರಿಗೆ ಸ್ವಲ್ಪ ಪರಿಹಾರ ಒದಗಿಸಬಲ್ಲೆವು, ಪ್ರಜಾಪ್ರಭುತ್ವವನ್ನು ಸ್ಥಾಪಿಸಬಲ್ಲೆವು ಹಾಗೂ ಉತ್ತಮ ಆಡಳಿತ ನೀಡಬಲ್ಲೆವು ಎಂದು ನಾವು ಜನರಿಗೆ ಸ್ಪಷ್ಟವಾಗಿ ಹೇಳಿದೆವು.

ಕಳೆದ ವಿಧಾನಸಭೆ ಚುನಾವಣೆ ವೇಳೆ ಮಾಧ್ಯಮದಲ್ಲಿ ದೊಡ್ಡ ರೀತಿಯ ಗುಲ್ಲೆಬ್ಬಿಸಲಾಯಿತು. ಟಿವಿ ಜಾಲದ ಒಂದು ವಿಭಾಗವಂತೂ ಎಡರಂಗ ಸರಕಾರ ಪತನಗೊಳ್ಳಲಿದೆ ಎಂದು 'ಭವಿಷ್ಯ' ನುಡಿಯಿತು! ದಿನವೂ ಎಡಬಿಡದೆ ಎಡರಂಗ ಸರಕಾರ, ಅದರಲ್ಲೂ ಮುಖ್ಯವಾಗಿ ಸಿಪಿಐ(ಎಂ) ವಿರುದ್ಧ ಭಾರೀ ಅಪಪ್ರಚಾರ ನಡೆಸಲಾಯಿತು. ಕೆಲವು ರಾಜಕೀಯ ಪಕ್ಷಗಳು ಕೂಡ ರಾಜ್ಯದ ಕೆಲವು ಭಾಗಗಳಲ್ಲಿ ಭಯದ ವಾತಾವರಣ ಸೃಷ್ಟಿಸುವ ತಂತ್ರವನ್ನು ಅನುಸರಿಸಿದವು. ಮಾಹಿತಿಯ ಕೊರತೆಯಿಂದಾಗಿ ಆರಂಭದಲ್ಲಿ ಇದನ್ನು ಪರಿಣಾಮಕಾರಿಯಾಗಿ ಎದುರಿಸಲು ನಮಗೆ ಸಾಧ್ಯವಾಗಲಿಲ್ಲ. ತೃಣಮೂಲ ಮತ್ತು ಕಾಂಗ್ರೆಸ್ ಪಕ್ಷಗಳ ಸಮಯಸಾಧಕ ಮೈತ್ರಿಕೂಟ ಸುಳ್ಳು ಆಶ್ವಾಸನೆಗಳು ಹಾಗೂ ಎಡರಂಗ ಸರಕಾರದ ವಿರುದ್ಧ ಹೀನವಾದ ಅಪಪ್ರಚಾರ ನಡೆಸಿ ಜನರನ್ನು ತಪ್ಪುದಾರಿಗೆಳೆಯಲು ಪ್ರಯತ್ನಿಸಿತು. ತಾತ್ಕಾಲಿಕವಾಗಿ ಚುನಾವಣೆ ಲಾಭಗಳಿಸುವ ಏಕೈಕ ಉದ್ದೇಶದಿಂದ ಛಿದ್ರಕಾರಿ ಕಾಮಾಟಪುರ ಹಾಗೂ ಜಾರ್ಖಂಡ್ ಚಳವಳಿಗಾರರು ಮೊದಲಾದವರ ಜತೆ ಮೈತ್ರಿ ಸಾಧಿಸಲು ಕಾಂಗ್ರೆಸ್ ಹಾಗೂ ತೃಣಮೂಲ ಯತ್ನಿಸಿದವು. ಆದರೆ ನಮ್ಮ ರಾಜ್ಯದ ಪ್ರಜ್ಞಾವಂತ ಜನರು ಎಡರಂಗದಲ್ಲಿ ಹಾಗೂ ಹಿಂದಿನ ಐದು ಬಾರಿ ನಿರಂತರವಾಗಿ ಆಡಳಿತ ನಡೆಸಿದ ಸರಕಾರಗಳ ನೀತಿ ಅನುಷ್ಠಾನದ ಯಶಸ್ಸಿನಲ್ಲಿ ಪುನಃ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದರು.



1977 ರ ಐತಿಹಾಸಿಕ ಕ್ಷಣಗಳು - ಬಸುರವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವುದು

27 ವರ್ಷಗಳ ಕಾಂಗ್ರೆಸ್ ಅಧಿಕಾರವಿದ್ದಾಗ ಗೃಹಿಣಿಯರು ಹಾಗೂ ಇತರ ಮಹಿಳೆಯರು, ರೈತರು, ಮಧ್ಯಮ ವರ್ಗದವರು, ಯುವಜನರು, ಶಿಕ್ಷಕರು ಇತ್ಯಾದಿಯಾಗಿ ನಾನಾ ವಿಭಾಗಗಳ ಜನರು ಕಹಿ ಅನುಭವವನ್ನು ಉಂಡಿದ್ದರು. ಆಗ ನಾವು ಪ್ರತಿಪಕ್ಷವಾಗಿದ್ದೆವು ಹಾಗೂ ಜನತೆಯ ಎಲ್ಲಾ ಹೋರಾಟಗಳಲ್ಲಿ ಅವರಿಗೆ ಬೆಂಬಲವಾಗಿ ನಿಂತಿದ್ದೆವು. 1972ರಿಂದ 1976ರವರೆಗಿನ ಅವಧಿಯಲ್ಲಿನ ಹತಾಶ ಅರೆಫ್ಯಾಸಿಸ್ಟ್ ದಬ್ಬಾಳಿಕೆಯಲ್ಲಿ ನಮ್ಮ ಪಕ್ಷದ 1100 ಸದಸ್ಯರು ಹಾಗೂ ಬೆಂಬಲಿಗರನ್ನು ಕಾಂಗ್ರೆಸ್ ಗೂಂಡಾಗಳು ಕೊಂದು ಹಾಕಿದ್ದನ್ನು ಜನರು ನೋಡಿದ್ದರು. ಈ ಸಂದರ್ಭದಲ್ಲಿ ಒಬ್ಬನೇ ಒಬ್ಬನನ್ನೂ ಬಂಧಿಸಲಿಲ್ಲ. ಆದರೆ ಜನತೆಯ ಶತ್ರುಗಳಿಗೆ ನಾವೆಂದೂ ಶರಣಾಗಲಿಲ್ಲ. ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಜನರ ಪ್ರಜಾಸತ್ತಾತ್ಮಕ ಹಕ್ಕುಗಳು ಮೊಟಕುಗೊಂಡಿದ್ದವು. 1972ರ ವಿಧಾನಸಭೆ ಚುನಾವಣೆ ಪೂರ್ಣವಾಗಿ ಅಕ್ರಮದಿಂದ (ರಿಗ್ಗಿಂಗ್) ಕೂಡಿತ್ತು. ಅಷ್ಟೇ ಅಲ್ಲದೇ, ಬೀದಿಗಳಲ್ಲಿ ಕಾವಲು ಕಾಯಲು ಸೈನ್ಯವನ್ನು ಕರೆಸಲಾಗಿತ್ತು. ರಿಗ್ಗಿಂಗ್‌ನಿಂದ ಕಾಂಗ್ರೆಸ್‌ನಿಂದಲೇ ತುಂಬಿಹೋದ ವಿಧಾನಸಭೆಯನ್ನು ಐದು ವರ್ಷ ಕಾಲ ಬಹಿಷ್ಕರಿಸುವ ಸಿಪಿಐ(ಎಂ) ನಿರ್ಧಾರಕ್ಕೆ ಜನತೆಯ ಅಪೂರ್ವ ಬೆಂಬಲ ದೊರಕಿತು. ಪಶ್ಚಿಮ ಬಂಗಾಳದ ಜನರು 1972ರಿಂದಲೇ ಅಘೋಷಿತ ತುರ್ತುಪರಿಸ್ಥಿತಿ ಹಾಗೂ ಭಯೋತ್ಪಾದನೆಯನ್ನು ಎದುರಿಸುತ್ತಿದ್ದರು. ಅದಾದ ಮೇಲೆ 1975ರಲ್ಲಿ ತುರ್ತುಪರಿಸ್ಥಿತಿಯೇ ಜಾರಿಗೊಂಡಿತು. ಜೀವಿಸುವ ಹಕ್ಕು ಸಹಿತ ಎಲ್ಲಾ ಪ್ರಜಾಸತ್ತಾತ್ಮಕ ಹಕ್ಕುಗಳು ಮೊಟಕುಗೊಂಡವು. ಸಾವಿರಾರು ಜನರನ್ನು ಬಂಧಿಸಿ ವಿಚಾರಣೆಯಿಲ್ಲದೇ ಸೆರೆಮನೆಗಳಿಗೆ ಅಟ್ಟಿದ್ದನ್ನು ಜನರು ಕಂಡರು. ತೀವ್ರ ಪ್ರತಿಕೂಲ ಸನ್ನಿವೇಶಗಳ ನಡುವೆಯೂ ಜನಪರ ಹಾಗೂ



ಪ್ರಜಾಪ್ರಭುತ್ವ ಹಕ್ಕುಗಳ ಮರುಸ್ಥಾಪನೆಗಾಗಿನ ನಮ್ಮ ಚಟುವಟಿಕೆಗಳು ಮುಂದುವರೆದವು. 1977ರಲ್ಲಿ ತುರ್ತುಪರಿಸ್ಥಿತಿಯನ್ನು ಹಿಂತೆಗೆದುಕೊಂಡ ಮೇಲೆ ಪಶ್ಚಿಮ ಬಂಗಾಳ ಸಹಿತ ದೇಶಾದ್ಯಂತದ ಜನರು ಕಾಂಗ್ರೆಸ್ ಪಕ್ಷಕ್ಕೆ ಸರಿಯಾದ ಉತ್ತರ ಕೊಟ್ಟರು. ಪಶ್ಚಿಮ ಬಂಗಾಳದಲ್ಲಿ ಎಡರಂಗದ ಯಶಸ್ಸು ಮುಂದುವರಿದಿದೆ; ಇದಕ್ಕಾಗಿ ನಾವು ಜನತೆಗೆ ಕೃತಜ್ಞರು. ಆದರೆ ಸಂತೋಷದಿಂದ ಹಿಗ್ಗುವ ಹೊತ್ತಿನಲ್ಲೇ, ನಮ್ಮ ಸೀಮಿತ ಅಧಿಕಾರಗಳನ್ನು ಬಳಸಿ ಉತ್ತಮ ಆಡಳಿತ ನೀಡಲು ನಾವು ಬದ್ಧರಾಗಿದ್ದೇವೆ. ಈ ವಿಚಾರದಲ್ಲಿ ನಾವು ಯಶಸ್ಸಿನಿಂದ ಮಾತ್ರವೇ ಅಲ್ಲದೇ ವೈಫಲ್ಯಗಳಿಂದಲೂ ಪಾಠ ಕಲಿಯುತ್ತೇವೆ. ಪಶ್ಚಿಮ ಬಂಗಾಳದ ಜನರು ತಮ್ಮ ರಾಜ್ಯಕ್ಕಾಗಿ ಮಾತ್ರ ಕೆಲಸ ಮಾಡುತ್ತಿಲ್ಲ; ಆದರೆ ಇಡೀ ಭಾರತದ ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಜನರಿಗಾಗಿ ಕೆಲಸ ಮಾಡುತ್ತಿದ್ದೇವೆ ಎಂಬುದನ್ನು ರಾಜ್ಯದ ಜನಕ್ಕೆ ಮನವರಿಕೆ ಮಾಡಿಕೊಡಲು ನಾವು ಯತ್ನಿಸಿದ್ದೇವೆ. ಪ್ರತಿಗಾಮಿ, ಕೋಮುವಾದಿ, ಮೂಲಭೂತವಾದಿ ಹಾಗೂ ಜನವಿರೋಧಿ ಶಕ್ತಿಗಳು ಭಾರತವನ್ನು ಹೆಚ್ಚೆಚ್ಚಾಗಿ ಅಮೇರಿಕ ಸಾಮ್ರಾಜ್ಯಶಾಹಿಯ ಗುಲಾಮಗಿರಿಗೆ ತಳ್ಳುತ್ತಿವೆ ಹಾಗೂ ವಿಶ್ವಬ್ಯಾಂಕ್ ಮತ್ತು ಐಎಂಎಫ್‌ನ ಎಲ್ಲಾ ನಿರ್ದೇಶನಗಳನ್ನು ಕುರುಡಾಗಿ ಪಾಲಿಸುತ್ತಿವೆ. ಇಂಥ ಶಕ್ತಿಗಳ ವಿರುದ್ಧ ಹೋರಾಡಲು ಭಾರತದ ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಜನರ ನೆರವು ನಮಗೆ ಅಗತ್ಯ.

ನಮ್ಮ ಸೀಮಿತ ಅಧಿಕಾರಗಳ ಮಿತಿಯಲ್ಲಿ ನಾವು

ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳ ಸಾಧನೆಯ ಸಂಕ್ಷಿಪ್ತ ನೋಟವನ್ನು ಇಲ್ಲಿ ಕೊಡಲಾಗಿದೆ.

ಕೃಷಿ ಮತ್ತು ಭೂಸುಧಾರಣೆಗಳು

ಜಮಿನ್ದಾರಿ ಪದ್ಧತಿಯನ್ನು ರದ್ದುಮಾಡುವ ಒಂದು ಕಾನೂನನ್ನು ಕಾಂಗ್ರೆಸ್ ಸರಕಾರ ರೂಪಿಸಿತ್ತು. ಆದರೆ ಆ ಕಾನೂನನ್ನು ಜಾರಿ ಮಾಡಿ ಭೂಮಾಲೀಕರ ವಿರೋಧವನ್ನು ಕಟ್ಟಿಕೊಳ್ಳುವ ಎದೆಗಾರಿಕೆ ಕಾಂಗ್ರೆಸ್ ಪಕ್ಷಕ್ಕೆ ಇರಲಿಲ್ಲ. ಯಾಕೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಭೂಮಾಲಿಕರು ಆ ಪಕ್ಷದ ಮೂಲಾಧಾರ. ಹೀಗಾಗಿ, ಅಪೂರ್ಣವಾದ ಈ ಕೆಲಸವನ್ನು ಪೂರ್ಣಗೊಳಿಸುವ ಹೊಣೆ ಎಡರಂಗ ಸರಕಾರದ್ದಾಯಿತು. 1967-69ರಲ್ಲಿದ್ದ ಸಂಯುಕ್ತರಂಗ ಸರಕಾರದ ಮೂಲಕವೇ ಈ ಕೆಲಸವನ್ನು ಮಾಡಿಸಲು ನಮ್ಮ ಪಕ್ಷ ಪ್ರಯತ್ನಿಸಿತ್ತು ಎನ್ನುವುದನ್ನು ಗಮನಿಸಬೇಕು. ನಾವು ಇದುವರೆಗೆ ಸರಕಾರದ ವಶದಲ್ಲಿರುವ 13 ಲಕ್ಷ ಎಕರೆ ಜಮೀನನ್ನು ಗ್ರಾಮೀಣ ಬಡವರು ಹಾಗೂ ಭೂರಹಿತರಿಗೆ ವಿತರಿಸಿದ್ದೇವೆ. 1992-93ರವರೆಗೆ ಇಡೀ ದೇಶದಲ್ಲಿ ಸರಕಾರದ ವಶದಲ್ಲಿದ್ದ ಒಟ್ಟು 70 ಲಕ್ಷ ಎಕರೆ ಜಮೀನಿನ ಪೈಕಿ ಕೇವಲ 45 ಲಕ್ಷ ಎಕರೆಯನ್ನು ಮರುವಿತರಣೆ ಮಾಡಲಾಗಿದೆ. ಆದರೆ ದೇಶದಲ್ಲಿ ವಶಪಡಿಸಿಕೊಳ್ಳಲಾದ ಒಟ್ಟು ಜಮೀನಿನ ಪೈಕಿ ಪಶ್ಚಿಮ ಬಂಗಾಳದ ಪಾಲು ಕೇವಲ ಶೇಕಡ 3.5. ಆದರೂ ವಿತರಣೆ ವಿಚಾರದಲ್ಲಿ ಇದು ಶೇಕಡ 20 ಆಗಿದೆ. ಎಡರಂಗ ಸರಕಾರದ ಈ ಕ್ರಾಂತಿಕಾರಿ ಹೆಜ್ಜೆಯಿಂದಾಗಿ ಪಶ್ಚಿಮ ಬಂಗಾಳದಲ್ಲಿ 20 ಲಕ್ಷಕ್ಕಿಂತ ಹೆಚ್ಚು ಭೂರಹಿತ ಕೃಷಿಕರಿಗೆ ಪ್ರಯೋಜನವಾಗಿದೆ. ಶೇಕಡ 37 ಪರಿಶಿಷ್ಟ ಜಾತಿಯವರು, ಶೇಕಡ 10 ಪರಿಶಿಷ್ಟ ಪಂಗಡದವರು ಹಾಗೂ ಗಣನೀಯ ಪ್ರಮಾಣದಲ್ಲಿ ಇತರೆ ಹಿಂದುಳಿದ ವರ್ಗದವರು ಭೂಸುಧಾರಣೆಯ ಲಾಭ ಪಡೆದವರಲ್ಲಿ ಸೇರಿದ್ದಾರೆ.

ಬರ್ಗಾದಾರರನ್ನು (ಅಂದರೆ ಬೆಳೆ ಪಾಲುದಾರರು) ಅವರ ಹಿಡುವಳಿ ಜಮೀನಿನಿಂದ ಒಕ್ಕಲೆಬ್ಬಿಸುವುದನ್ನು ತಡೆಯುವ ದೃಷ್ಟಿಯಿಂದ ಬರ್ಗಾದಾರಿ ಹಕ್ಕನ್ನು ದಾಖಲಿಸುವ ಕ್ರಮವನ್ನು ಜಾರಿಗೆ ತಂದದ್ದು ಭೂಸುಧಾರಣೆಯ ಇನ್ನೊಂದು ಪ್ರಮುಖ ಅಂಶವಾಗಿದೆ. 1947ರಿಂದ 1977ರವರೆಗೆ ಕೇವಲ 3 ಲಕ್ಷ 50 ಸಾವಿರ ಬರ್ಗಾದಾರರ ಹೆಸರು ದಾಖಲಾಗಿತ್ತು. ಎಡರಂಗ ಸರಕಾರದ ಆಡಳಿತದಲ್ಲಿ ಈ ಸಂಖ್ಯೆ 10 ಲಕ್ಷ 35 ಸಾವಿರಕ್ಕೆ ಏರಿತು. ಆ ಪೈಕಿ ಶೇಕಡ 30 ಮಂದಿ ಪರಿಶಿಷ್ಟ ಜಾತಿಯವರು, ಶೇಕಡ12 ಮಂದಿ ಪರಿಶಿಷ್ಟ ಪಂಗಡದವರು. 1977ರಲ್ಲಿ ಕೇವಲ ಶೇಕಡ 20 ಜಮೀನಿಗೆ ನೀರಾವರಿ ಸೌಲಭ್ಯ ಇತ್ತು. ಈಗ ಶೇಕಡ 62ರಷ್ಟು ಜಮೀನು ಕೃಷಿ ಪದ್ಧತಿಗೆ ಒಳಪಟ್ಟಿದೆ. ಈ ಕ್ರಮಗಳು ಕೃಷಿ ಉತ್ಪಾದನೆಯ ಹೆಚ್ಚಳಕ್ಕೆ ಉತ್ತಮ ಉತ್ತೇಜನ ನೀಡಿವೆ. ಈಗ ಪಶ್ಚಿಮ ಬಂಗಾಳದ ಕೃಷಿ ಉತ್ಪನ್ನ ವಿಚಾರದಲ್ಲಿ ಉತ್ತಮ ಸಾಧನೆಯ ರಾಜ್ಯಗಳಲ್ಲಿ ಒಂದಾಗಿದೆ. ತೋಟಗಾರಿಕೆ, ವಾಣಿಜ್ಯ ಬೆಳೆ, ಹಣ್ಣು ಮತ್ತು ಕೃಷಿ ಆಧಾರಿತ ಕೈಗಾರಿಕೆಗಳು ಬೆಳವಣಿಗೆಯ ಹೊಸ್ತಿಲಲ್ಲಿವೆ. ಇದು ಗ್ರಾಮೀಣ ಆರ್ಥಿಕತೆಯ ಇನ್ನಷ್ಟು ಸುಧಾರಣೆಗೆ ಇಂಬು ನೀಡಲಿದೆ. ಎಡರಂಗ ಸರಕಾರದ ಆಡಳಿತಾವಧಿಯಲ್ಲಿ ಕೃಷಿ ಕಾರ್ಮಿಕರ ದಿನಗೂಲಿ ಗಣನೀಯವಾಗಿ ಹೆಚ್ಚಿದೆ.

ಚೈತನ್ಯಪೂರ್ಣ ಕೈಗಾರಿಕೆ ಬೆಳವಣಿಗೆ

ದೇಶ ಸ್ವತಂತ್ರವಾಗುವ ವೇಳೆಗೆ ಪಶ್ಚಿಮ ಬಂಗಾಳ ಕೈಗಾರಿಕೀಕರಣಗೊಂಡ ರಾಜ್ಯಗಳಲ್ಲಿ ಮೊದಲ ಸ್ಥಾನದಲ್ಲಿತ್ತು. ಪಕ್ಷಪಾತದಿಂದ ಕೂಡಿದ freigt equalisation (ಸರಕುಸಾಗಾಟ ದರ ಸಮಾನೀಕರಣ) ನೀತಿಯಿಂದಾಗಿ ಪಶ್ಚಿಮ ಬಂಗಾಳ ಖನಿಜ ಸಂಪತ್ತಿನಿಂದ ಕೂಡಿದ ಪ್ರದೇಶಗಳ ಸಮೀಪವಿದ್ದರೂ ಅದರ ಅನುಕೂಲ ಪಡೆಯದಂತಾಯಿತು. ಪೂರ್ಣ ಭಾರತದ ಇತರ ರಾಜ್ಯಗಳು ಕೂಡ ಇದೇ ಕಾರಣದಿಂದ ತೊಂದರೆ ಅನುಭವಿಸಬೇಕಾಯಿತು. ರಾಜ್ಯದಲ್ಲಿ ಮಾಧ್ಯಮ ಹಾಗೂ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಲು ಲೈಸೆನ್ಸ್ ಅಗತ್ಯ ಎಂಬ ನೀತಿಯ ಹೆಸರಿನಲ್ಲಿ ಕೂಡ ಪಶ್ಚಿಮಬಂಗಾಳಕ್ಕೆ ಅನ್ಯಾಯವೆಸಗಲಾಯಿತು. ಸಾಲ್ಟ್‌ಲೇಕ್‌ನಲ್ಲಿ ಇಲೆಕ್ಟ್ರಾನಿಕ್ ಸಂಕೀರ್ಣ ನಿರ್ಮಿಸಬೇಕೆಂಬ ಮನವಿಯನ್ನು ಅಂದಿನ ಪ್ರಧಾನಿ ಇಂದಿರಾಗಾಂಧಿ ಕ್ಷುಲ್ಲಕ ಹಾಸ್ಯಾಸ್ಪದ ಕಾರಣವೊಡ್ಡಿ ತಿರಸ್ಕರಿಸಿದರು. ಅದೇ ರೀತಿ ಹಾಲ್ಡಿಯಾ ಪೆಟ್ರೋ ರಾಸಾಯನಿಕ ಸಂಕೀರ್ಣ ಸ್ಥಾಪನೆಗೆ ಅನುಮತಿ ನೀಡುವಲ್ಲಿ ಒಂದಲ್ಲ ಒಂದು ನೆಪವೊಡ್ಡಿ ವಿಳಂಬ ಮಾಡಲಾಯಿತು.

ಆದರೆ ನಮ್ಮ ಸರಕಾರ ಎದೆಗುಂದಲಿಲ್ಲ. ರಾಜ್ಯದ ಕೈಗಾರಿಕೀಕರಣಕ್ಕಾಗಿ ತೀವ್ರವಾದ ಪ್ರಯತ್ನಗಳನ್ನು ನಡೆಸಿತು. ರಾಜ್ಯ ಸರಕಾರದ ಉದಾರ ಬೆಂಬಲ ಪಡೆದು ಸಣ್ಣ ಕೈಗಾರಿಕೆಗಳು ಬೃಹತ್ ಪ್ರಮಾಣದಲ್ಲಿ ಬೆಳವಣಿಗೆ ಹೊಂದಿದ್ದವು. ನಮ್ಮ ಸ್ವತಃ ಪ್ರಯತ್ನದಿಂದಾಗಿ ಸಾಲ್ಟ್‌ಲೇಕ್‌ನಲ್ಲಿ ಇಲೆಕ್ಟ್ರಾನಿಕ್ ಸಂಕೀರ್ಣ ತಲೆಯೆತ್ತಿತು. ಚಟುವಟಿಕೆಗಳಿಂದ ಕೂಡಿರುವ ಈ ಸಂಕೀರ್ಣದಲ್ಲಿ ನೂರಾರು ತರುಣ-ತರುಣಿಯರು ಉದ್ಯೋಗದಲ್ಲಿದ್ದಾರೆ. 5000 ಕೋಟಿ ರೂಪಾಯಿ ವೆಚ್ಚದ ಹಾಲ್ಡಿಯಾ ಪೆಟ್ರೋ-ರಾಸಾಯನಿಕ ಸ್ಥಾವರ ಉತ್ಪಾದನೆ ಶುರು ಮಾಡಿದೆ. ಇದರಿಂದಾಗಿ ಅನೇಕ ಉಪಕೈಗಾರಿಕೆಗಳು ಆರಂಭವಾಗಲಿದ್ದು ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶ ಸೃಷ್ಟಿಸಲಿದೆ.

ಈ ನಡುವೆ, ಆಂತರಿಕ ಹಾಗೂ ಬಾಹ್ಯ ಒತ್ತಡಗಳಿಂದಾಗಿ ಹೊಸ ಆರ್ಥಿಕ ನೀತಿ ಜಾರಿಗೆ ಬಂದ ಹಿನ್ನೆಲೆಯಲ್ಲಿ freight equalisation ಹಾಗೂ ಲೈಸೆನ್ಸ್ ನೀತಿ ಸಡಿಲಗೊಂಡಿತು. ಈ ಹೊಸ ಸನ್ನಿವೇಶದಲ್ಲಿ ದೇಶ-ವಿದೇಶಗಳ ದೊಡ್ಡ ಕಂಪನಿಗಳು ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಉತ್ಸಾಹ ತೋರುತ್ತಿವೆ. ಒಟ್ಟು 19,775 20 ಕೋಟಿ ರೂಪಾಯಿಗಳ ಯೋಜನೆಗಳು ಈಗಾಗಲೇ ಉತ್ಪಾದನೆಯನ್ನು ಆರಂಭಿಸಿಯಾಗಿದೆ. 48,000 ಕೋಟಿ ರೂಪಾಯಿ ಮೊತ್ತದ ನಾನಾ ಕೈಗಾರಿಕೆ ಯೋಜನೆಗಳು ಅನುಷ್ಠಾನದ ಹಂತದಲ್ಲಿವೆ.

ಮಾಹಿತಿ ತಂತ್ರಜ್ಞಾನ (ಐಟಿ) ಕ್ಷೇತ್ರದಲ್ಲಿ ನಾವು ಅನೇಕ ರಾಜ್ಯಗಳಿಗಿಂತ ಹಿಂದೆ ಬಿದ್ದಿರುವುದು ನಿಜ. ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಸರಕಾರ ಕ್ರಮಕೈಗೊಂಡಿದೆ. ಮುಂದಿನ ದಿನಗಳಲ್ಲಿ ಪಶ್ಚಿಮ ಬಂಗಾಳ ಐಟಿ ಕ್ಷೇತ್ರದಲ್ಲಿ ಕೂಡ ಒಂದು ಪ್ರಮುಖ ಸ್ಥಾನವನ್ನು ಗಳಿಸಿಕೊಳ್ಳುತ್ತದೆಂಬ ಭರವಸೆ ಇದೆ. ಇಡೀ ದೇಶದ ಆರ್ಥಿಕ ಹಿಂಜರಿತದ ಪರಿಸ್ಥಿತಿಯನ್ನು ಅವಲೋಕಿಸಿದಾಗ, ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳಲ್ಲಿನ ಬಂಡವಾಳ ಹೂಡಿಕೆಯ ಬೆಳವಣಿಗೆ ನಿಜಕ್ಕೂ ಪ್ರೋತ್ಸಾಹದಾಯಕವಾದುದಾಗಿದೆ. ಕೈಗಾರಿಕೆ ಬಂಡವಾಳ ಹೂಡಿಕೆಯಲ್ಲಿ ಪಶ್ಚಿಮ ಬಂಗಾಳ ನಾಲ್ಕನೇ ಸ್ಥಾನದಲ್ಲಿದೆ.

ಕರ್ನಾಟಕದಲ್ಲೂ ಆಚರಣೆ

ಜೂನ್ 30 , 2002 ರಂದು ಎಡರಂಗ 25 ವರ್ಷಗಳ ಸಂಭ್ರಮದ ಆಚರಣೆ ಬೆಂಗಳೂರಿನ ಎಡಿಎ ರಂಗಮಂದಿರದಲ್ಲಿ, ಮುಖ್ಯ ಅತಿಥಿಗಳು ಪ್ರೊ. ಸತ್ಯಸದನ ಚಕ್ರವರ್ತಿ. ಬೆಳಗ್ಗೆ 10. 30 ಕ್ಕೆ

ವಿದ್ಯುತ್ ಉತ್ಪಾದನೆಯಲ್ಲಿ ಕೂಡ ರಾಜ್ಯ ಅಪೂರ್ವ ಯಶಸ್ಸನ್ನು ಸಾಧಿಸಿದೆ. ಕಾಂಗ್ರೆಸ್ ಆಡಳಿತ ವೇಳೆ ತೀವ್ರ ವಿದ್ಯುತ್ ಅಭಾವದಿಂದ ನಲುಗುತ್ತಿದ್ದ ಪಶ್ಚಿಮ ಬಂಗಾಳ ಇದೀಗ ಹೆಚ್ಚುವರಿ ವಿದ್ಯುತ್ ಉತ್ಪಾದಿಸುವ ರಾಜ್ಯವಾಗಿದೆ. ಏನಿದ್ದರೂ ಕೈಗಾರಿಕೆಗಳು ಹೆಚ್ಚಾಗುತ್ತಿರುವುದರಿಂದ ವಿದ್ಯುತ್ತಿಗೆ ಬೇಡಿಕೆಯೂ ಬರಲಿದೆ. ಎಡರಂಗ ಸರಕಾರಕ್ಕೆ ಇದರ ಅರಿವಿದೆ. ಆ ನಿಟ್ಟಿನಲ್ಲಿ ಅಗತ್ಯ ಕ್ರಮಕೈಗೊಳ್ಳುತ್ತಿದೆ. ಗ್ರಾಮೀಣ ವಿದ್ಯುದೀಕರಣಕ್ಕೂ ಅಗತ್ಯವಾದ ಯೋಜನೆಗಳನ್ನು ರೂಪಿಸುತ್ತಿದೆ.

ಯಾವುದೇ ಒಂದು ಉದ್ಯಮ ಮೂರು ವರ್ಷ ಕಾಲ ಮುಚ್ಚಿದ್ದರೆ (ಲಾಕೌಟ್) ಅದರ ಪ್ರತಿಯೊಬ್ಬ ಕಾರ್ಮಿಕ ತಿಂಗಳಿಗೆ 500 ರೂಪಾಯಿ ಪಡೆಯುವಂಥ ಯೋಜನೆಯನ್ನು ಎಡರಂಗ ಸರಕಾರ ಅನುಷ್ಠಾನಗೊಳಿಸಿತು. ಮುಚ್ಚಿರುವ ಫ್ಯಾಕ್ಟರಿಗಳನ್ನು ತೆರೆಯಲು ಸರಕಾರ ಮುತುವರ್ಜಿ ವಹಿಸಿತು. ಅಸಂಘಟಿತ ವಲಯದ ಕಾರ್ಮಿಕರಿಗೆ ಕೂಡ ಭವಿಷ್ಯನಿಧಿ (ಪ್ರಾವಿಡೆಂಟ್ ಫಂಡ್) ಯೋಜನೆಯನ್ನು ರಾಜ್ಯ ಸರಕಾರ ಆರಂಭಿಸಿತು.

ನಿರುದ್ಯೋಗಿ ಯುವಜನರಿಗೆ ಉದ್ಯೋಗ ನೀಡಲು ದೊಡ್ಡ ಕೈಗಾರಿಕೆಗಳಿಂದಷ್ಟೇ ಸಾಧ್ಯವಿಲ್ಲ ಎಂಬುದು ಎಡರಂಗ ಸರಕಾರಕ್ಕೆ ಚೆನ್ನಾಗಿ ಅರಿವಿದೆ. ಕೇಂದ್ರ ಸರಕಾರದ ತಪ್ಪು ನೀತಿಗಳಿಂದಾಗಿ ನಿರುದ್ಯೋಗ ನಮ್ಮ ದೇಶದ ಅತಿ ದೊಡ್ಡ ಸಮಸ್ಯೆಯಾಗಿದೆ. ಕೇಂದ್ರ ಸರಕಾರದ ನೀತಿಗಳನ್ನು ಹಿಮ್ಮೆಟ್ಟಿಸುವುದೇ ನಿರುದ್ಯೋಗ ಸಮಸ್ಯೆಗೆ ಕಾಯಂ ಪರಿಹಾರವಾಗಿದೆ. ಆದರೆ ಅಲ್ಪಕಾಲೀನ ಪರಿಹಾರವನ್ನು ಗಮನದಲ್ಲಿಟ್ಟುಕೊಂಡು ಸ್ವಯಂ ಉದ್ಯೋಗ ಯೋಜನೆಗಳು ಹಾಗೂ ಸ್ವಸಹಾಯ ಗುಂಪುಗಳಿಗೆ ಎಡರಂಗ ಸರಕಾರ ಆದ್ಯತೆ ನೀಡುತ್ತಿದೆ. ಇದಕ್ಕೆ ಇದುವರೆಗೆ ದೊರೆತ ಫಲಿತಾಂಶ ಉತ್ತೇಜನದಾಯಕವಾಗಿದೆ.

ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಎಡರಂಗ ಸರಕಾ ಹಲವು ಕ್ರಮಗಳಿಂದಾಗಿ ರಾಜ್ಯದಲ್ಲಿ ಬಡತನ ಗಣನೀಯವಾ ಕಡಿಮೆಯಾಗಿದೆ. ಸರ್ವೇ ಸಾಧಾರಣವಾಗಿ ನಮ್ಮನ್ನು ಮೆಚ್ಚದಿರುವ ವಿಶ್ವಬ್ಯಾಂಕ್ ಕೂಡ ಈ ಅಂಶವನ್ನು ಗಮನಿಸಿದೆ. 1980ರ ದಶಕದಲ್ಲಿ ಬಡತನ ರೇಖೆಗಿಂತ ಕೆಳಗೆ ಇದ್ದ ಜನರ ಪ್ರಮಾಣ ಶೇಕಡ 53ರಿಂದ ಶೇಕಡ 26ಕ್ಕೆ ಇಳಿದಿದೆ ಎಂದು 'ಬಡತನ 2000' ಎಂಬ ವರದಿಯಲ್ಲಿ ವಿಶ್ವಬ್ಯಾಂಕ್ ಹೇಳಿದೆ. ಬಡತನ ಕುಸಿತದ ದರ ಇತರ ಎಲ್ಲಾ ರಾಜ್ಯಗಳಿಗಿಂತಲೂ ಪಶ್ಚಿಮಬಂಗಾಳದಲ್ಲಿ ಹೆಚ್ಚು ವೇಗವಾಗಿದೆ ಎಂದು ವರದಿ ದಾಖಲಿಸಿದೆ.

ಪ್ರಜಾಸತ್ತಾತ್ಮಕ ಹಾಗೂ ಟ್ರೇಡ್ ಯೂನಿಯನ್ ಚಳವಳಿಗಳು


ಕಾರ್ಮಿಕರು, ರೈತರು ಹಾಗೂ ಇತರ ದುಡಿಯುವ ಜನಸಮುದಾಯಗಳ ಪ್ರಜಾಸತ್ತಾತ್ಮ ಹಾಗೂ ಟ್ರೇಡ್ ಯೂನಿಯನ್ ಹಕ್ಕುಗಳಿ ಎಡರಂಗ ಸರಕಾರ ಖಾತರಿ ನೀಡಿದೆ. ಅವ ತಮ್ಮ ಹಕ್ಕುಗಳ ರಕ್ಷಣೆಗಾಗಿ ಮುಷ್ಕರ ಹೂಡು ಸಂಪೂರ್ಣ ಸ್ವಾತಂತ್ರ್ಯ ಪಡೆದಿದ್ದಾರೆ. ಆದರೆ ಇದನ ಅಂತಿಮ ಅಸ್ತ್ರವನ್ನಾಗಿ ಬಳಸಿಕೊಳ್ಳಬೇಕು, ಅಷ್ಟೆ ಈಗಿನ ಸನ್ನಿವೇಶದಲ್ಲಿ ಉತ್ಪಾದನೆ, ಉತ್ಪಾದಕ ಹಾಗೂ ಕೈಗಾರಿಕೆಯ ರಕ್ಷಣೆಗೆ ಕಾರ್ಮಿಕರು ಆಸ ತೋರಿಸಬೇಕು ಎಂದೂ ಎಡರಂಗ ಸರಕಾ ಕಾರ್ಮಿಕರಿಗೆ ಸಲಹೆ ಮಾಡುತ್ತದೆ.

ಈ ಅವಧಿಯಲ್ಲಿ, ಕೇಂದ್ರ ಸರಕಾರ ಮತ ಕೆಲವು ರಾಜ್ಯ ಸರಕಾರಗಳು ಪ್ರಜಾಸತ್ತಾತ್ಮಕ ಹಾಗ ಟ್ರೇಡ್‌ಯೂನಿಯನ್ ಹಕ್ಕುಗಳನ್ನು ಮುರಿಯ ದಮನಕಾರಿ ಕಾನೂನು, ಸುಗ್ರೀವಾಜ್ಞೆಗಳನ ಬಳಸಲು ಯತ್ನಿಸಿದ್ದನ್ನು ನಾವು ನೋಡಿದ್ದೇ ಎಡರಂಗ ಸರಕಾರ ಯಾವತ್ತೂ ಇಂ ಪ್ರಜಾಪ್ರಭುತ್ವವಿರೋಧಿ ಕರಾಳ ಕ್ರಮಗಳ ಜಾರಿಗೊಳಿಸುವುದಿಲ್ಲ, ಅದು ಜನತೆಯ ಹಕ್ಕುಗಳನ್ನು ಸಂರಕ್ಷಿಸುತ್ತದೆ.


ಶಿಕ್ಷಣ ಮತ್ತು ಆರೋಗ್ಯ

1977ರಲ್ಲಿ ನಾವು ಅಧಿಕಾರಕ್ಕೆ ಬಂದಾ

ಪುಟ 8



ರಜತಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಬುದ್ಧದೇವ್, ಬಸು ಮತ್ತು ಬಿಮನ್ ಬಸು



ಉಳುವವನೇ ಭೂಮಿಯೊಡೆಯ - ರೈತರಿಗೆ ಭೂ ಹಂಚಿಕೆ

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ದೇಶವನ್ನಿಂದು ವಿಚಿತ್ರ ಪರಿಸ್ಥಿತಿಗೆ ತಂದಿಟ್ಟದೆ ಮುಂದಿನ ರಾಷ್ಟ್ರಪತಿ ಯಾರು ಎಂಬುದರ ಬಗ್ಗೆ ಎಲ್ಲರ ಸಮ್ಮತಿ ಪಡೆದೇ ಪ್ರಕಟಿಸಲಾಗುವುದು ಎಂದು ನಂಬಿಸಿತ್ತು. ಆದರೆ ಏಕಾಏಕಿಯಾಗಿ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಅವರ ಹೆಸರನ್ನು ರಾಷ್ಟ್ರಪತಿ ಹುದ್ದೆಗೆ ಅಭ್ಯರ್ಥಿಯಾಗಿ ಪ್ರಕಟಿಸುವುದರ ಮೂಲಕ ತನ್ನ ಮಾತಿಗೆ ತಾನೇ ತಿಲಾಂಜಲಿ ಕೊಟ್ಟಿತು. ಈ ಹುದ್ದೆಗೆ ಮುಂದಿನ ತಿಂಗಳು ಚುನಾವಣೆ ನಡೆಯಲಿದೆ.

ಸರ್ವಸಮ್ಮತಿ ನಾಟಕ

ಬಿಜೆಪಿ ಹೇಳಿದ್ದೇ ದಾರಿ!

ಇದು ಹೊಸತೇನಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಈ ರೀತಿಯ ತಂತ್ರವನ್ನು ಒಂದಕ್ಕಿಂತ ಹೆಚ್ಚು ಬಾರಿ ಅಳವಡಿಸಿದೆ. ಉದಾಹರಣೆಗೆ ಭಯೋತ್ಪಾದನೆ ಸಂವಿಧಾನ ಪರಾಮರ್ಶೆ, ವಿಶ್ವವ್ಯಾಪಾರ ಸಂಸ್ಥೆ ಸಂಧಾನಗಳು ಮತ್ತಿತರ ಇದೇ ರೀತಿಯ ಪ್ರಶ್ನೆಗಳ ಮೇಲೆ, ಈ ಎಲ್ಲಾ ಸಂದರ್ಭಗಳಲ್ಲೂ ಬಿಜೆಪಿಯು ತನ್ನ ನಿಜವಾದ ಬಣ್ಣವನ್ನು ಮುಚ್ಚಿಕೊಳ್ಳಲು "ಸರ್ವಸಮ್ಮತದ ನಾಟಕ ಮಾಡುತ್ತಿರುವುದೆಂಬ ವಿಚಾರ ಮೇಲ್ನೋಟಕ್ಕೇ ಕಾಣುತ್ತದೆ. ದುಃಖದ ಅದೇ ಸಮಯದಲ್ಲಿ ಆಶ್ಚರ್ಯಕರ ಸಂಗತಿಯೆಂದರೆ ಎನ್‌ಡಿಎ ಪಾಲುದಾರರು ಹಾಗೂ ಅದರ ಮಿತ್ರರು ಪ್ರತಿಬಾರಿಯೂ ಅದೇ ದಾರಿ ಹಿಡಿಯ ಬೇಕಾಯಿತು. ಈಗಿನ ವಿಚಾರದಲ್ಲೂ ಕೂಡ ಎನ್‌ಡಿಎ ಪಾಲುದಾರರು ಇರಲಿ, ತೆಲುಗುದೇಶಂ. ಪಕ್ಷ ಕೂಡ, ವಾರಗಟ್ಟಲೆ ಶ್ರೀಕೃಷ್ಣಕಾಂತ್ ಹೆಸರನ್ನು ಓದಿಸುತ್ತಿದ್ದವರು ಕೂಡ, ಡಾ.ಕಲಾಂ ಹೆಸರನ್ನು ಒಪ್ಪಲೇಬೇಕಾಯಿತು.

ಈ ಮೂಲಕ ಎನ್‌ಡಿಎ ಮತ್ತು ಹೊರಗಿನ ಮಿತ್ರರಿಗೆ ಬಿಜೆಪಿ ಸ್ಪಷ್ಟವಾಗಿ ಸೂಚಿಸಿರುವು ದೇನೆಂದರೆ ಬಿಜೆಪಿ ಹೇಳಿದ ಮಾತೇ ಕೊನೆಗೆ ಜಾರಿಯಾಗುತ್ತದೆ ಎಂದು.

ಸನ್ನಿವೇಶದ ಗಂಭೀರತೆ

ಬಿಜೆಪಿಯ ಈ ಇತ್ತೀಚಿನ ಕ್ರಮವು ಎಂಥಾ ಗಂಭೀರ ಪರಿಸ್ಥಿತಿ ಉಂಟುಮಾಡಿದೆಯೆಂಬುದನ್ನು ಎರಡು ಶಬ್ದಗಳಲ್ಲಿ ಹೇಳುವುದು ಕಷ್ಟ. ರಾಷ್ಟ್ರಪತಿ ಚುನಾವಣೆ ಇಂದಿನಂತೆ ಹಿಂದೆಂದೂ ಇಂತಹ ಪ್ರಾಮುಖ್ಯತೆ ಪಡೆದಿರಲಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಪ್ರತಿಯೊಂದು ರಂಗದಲ್ಲೂ ವಿಫಲವಾಗಿದೆ ಹಾಗೂ ದೇಶವನ್ನು ವಿನಾಶದಂಚಿಗೆ ತಂದು ನಿಲ್ಲಿಸಿದೆ. ಐಎಂಎಫ್, ವಿಶ್ವಬ್ಯಾಂಕ್, ವಿಶ್ವ ವ್ಯಾಪಾರ ಸಂಸ್ಥೆ- ಈ ತ್ರಿಮೂರ್ತಿಗಳ ಆ ದೇಶದ ಮೇಲೆ ಜಾರಿಯಾಗುತ್ತಿರುವ ವಿನಾಶಕಾರಿ ಆರ್ಥಿಕ ನೀತಿಗಳು ಕೋಟ್ಯಾಂತರ ದುಡಿಯುವ ಜನರ ಮೇಲೆ ಹಿಂದೆಂದೂ ಕಾಣದ ಸಂಕಷ್ಟಗಳನ್ನು ಮತ್ತು ಹೊರೆಯನ್ನು ಹೊರಿಸುತ್ತಿರುವಾಗಲೇ ದೇಶೀಯ ಹಾಗೂ ವಿದೇಶಿ ಶ್ರೀಮಂತರಿಗೆ ಭರ್ಜರಿ ರಿಯಾಯಿತಿಯನ್ನು ನೀಡುತ್ತಿದೆ. ಇದರಿಂದಾಗಿ ಬಿಜೆಪಿ ಸರ್ಕಾರದ ವಿರುದ್ಧ ವ್ಯಾಪಕ ಅತೃಪ್ತಿಯ

> ***ಈ ಲಕ್ಷ್ಮಿ ಸೆಹಗಲ್ ಯಾರು ಎಂದು ಬಿಜೆಪಿ ನಾಯಕರು ಕೇಳುತ್ತಿದ್ದಾರೆ? ಅವರು ಹಾಗೇ ಕೇಳುವುದು ಸಹಜವೇ ಅವರೆಂದೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದವರೇ ಅಲ್ಲ, ಹೀಗಾಗಿ ಇಂತಹ ಸ್ವತಂತ್ರ ಸೇನಾನಿಯನ್ನು ಭೇಟಿ ಮಾಡುವದಾದರೂ ಹೇಗೆ? ಅದೂ ಬ್ರಿಟಿಷರೊಂದಿಗೆ ರಾಜಿಯಲ್ಲಿ ಮಗ್ನರಾಗಿದ್ದಾಗ?***
>
> \- ಎ.ಬಿ. ಬರ್ಧನ್
>
> ಸಿಪಿಐ ಪ್ರಧಾನ ಕಾರ್ಯದರ್ಶಿ

ಅಲೆಗಳು ಎದ್ದಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಸುಮಾರು 20 ವಿಧಾನಸಭೆಗಳಿಗೆ ನಡೆದ ಚುನಾವಣೆಗಳಲ್ಲಿ ಬಿಜೆಪಿ ಮಣ್ಣು ಮುಕ್ಕಿರುವುದೇ ಇದಕ್ಕೆ ಸಾಕ್ಷಿ.


ಇದೇ ಸಮಯದಲ್ಲಿ ಹಿಂದಿನ ಯಾವುದೇ ಆಳುವ ಪಕ್ಷ ಅಥವಾ ಕೂಟಕ್ಕೆ ಭಿನ್ನವಾಗಿ, ಬಿಜೆಪಿ ನೇತೃತ್ವದ ಸರ್ಕಾರವು ರಾಷ್ಟ್ರೀಯ ಐಕ್ಯತೆಗೆ ಹಿಂದೆಂದೂ ಕಂಡು ಕೇಳರಿಯದಂಥಾ ಅಪಾಯವನ್ನು ತಂದೊಡ್ಡಿದೆ.

ಈ ಅವಧಿಯಲ್ಲಿ ಕ್ರಿಶ್ಚಿಯನ್ನರ ಮೇಲೆ ಅವ್ಯಾಹತವಾಗಿ ನಡೆದ ಧಾಳಿಗಳು ಮತ್ತು ಈಗ ರಾಜ್ಯ ಸರ್ಕಾರದ ಉಸ್ತುವಾರಿಯಲ್ಲೇ 15 ವಾರಗಳ ನಂತರವೂ ನಡೆಯುತ್ತಿರುವ ಗುಜರಾತ್‌ನ ನರಮೇಧಗಳು ನಮ್ಮ ರಾಷ್ಟ್ರೀಯ ಐಕ್ಯತೆ ಮತ್ತು ಕೋಮು ಸಾಮರಸ್ಯದ ದಾರುಣ ಚಿತ್ರವನ್ನು ನೀಡುತ್ತದೆ.

ಜನಸಂಘದ ಕಾಲದಿಂದಲೂ ಅದು ಒಕ್ಕೂಟ ರಚನೆ (FEDERATION)ಗೆ ಹಾಗೂ ಬಾಷಾವಾರು ಪ್ರಾಂತಗಳ ರಚನೆಗೆ ಮತ್ತು ಧರ್ಮ ನಿರಪೇಕ್ಷತೆ ಹಾಗೂ ಬಹುಧರ್ಮೀಯ ಸಂಸ್ಕೃತಿಯ ವಿರುದ್ಧವೇ ತನ್ನ ನಿಲುವನ್ನು ಹೊಂದಿತ್ತು. ಆದರೆ, ಒಕ್ಕೂಟ ರಚನೆ ಹಾಗೂ ಧರ್ಮನಿರಪೇಕ್ಷತೆಗಳೇ ನಮ್ಮ ದೇಶದ ಐಕ್ಯತೆಯ ಆಧಾರ ಸ್ತಂಭಗಳಾಗಿದ್ದು, ಅವುಗಳ ಮೇಲಿನ ಯಾವುದೇ ಧಾಳಿಗಳು ದೇಶದ ಐಕ್ಯತೆಯ ಮೇಲಿನ ಧಾಳಿಯೇ ಆಗುತ್ತದೆ. ಕಳೆದ ನಾಲ್ಕು ವರ್ಷಗಳು ಈ ಆಧಾರ ಸ್ತಂಭಗಳ ಮೇಲಿನ ಧಾಳಿಯನ್ನೇ ಕಂಡಿವೆ. ಧರ್ಮನಿರಪೇಕ್ಷತೆ ಮತ್ತು ಒಕ್ಕೂಟರಚನೆಯನ್ನು ಮೂಲ ಚೌಕಟ್ಟು ಎಂದು ವರ್ಣಿಸುವ ಭಾರತೀಯ ಸಂವಿಧಾನದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿರುವ ಜನರಿಂದಲೇ ಇಂದು ಅದಕ್ಕೆ ಅಪಾಯ ಒದಗಿದೆ.

ಬದಲಾದ ವಿದೇಶಾಂಗ ನೀತಿ

ಈ ಅವಧಿಯಲ್ಲಿ ನಮ್ಮ ವಿದೇಶಾಂಗ ನೀತಿ ಕೂಡ ಆಮೂರಾಗ್ರ ಬದಲಾವಣೆ ಕಂಡಿದೆ. ಆಲಿಪ್ತ ನೀತಿ, ವಿಮೋಚನಾ ಹೋರಾಟಗಳಿಗೆ ಬೆಂಬಲ ನೀಡುವ ಹಾಗೂ ಸಾಮ್ರಾಜ್ಯಶಾಹಿಗೆ ವಿರೋಧವಾದ, ವಿಶ್ವಶಾಂತಿ ರಕ್ಷಣೆಗಾಗಿ ಚಳುವಳಿ ಹಾಗೂ ಸಂಪೂರ್ಣ ಅಣು ನಿಶ್ಶಸ್ತ್ರೀಕರಣ ಇವುಗಳ ಆಧಾರದ ಮೇಲೆ ಇಡೀ ದೇಶವೇ ಸರ್ವಸಮ್ಮತ ನೀಡಿರುವ ವಿದೇಶಾಂಗ ನೀತಿಯನ್ನು ಕೆಲವೇ ವರ್ಷಗಳ ಹಿಂದಿನವರೆಗೆ ನಾವು ಪಾಲಿಸಿಕೊಂಡು ಬಂದಿದ್ದೆವು. ಅಂತರಾಷ್ಟ್ರೀಯ ರಾಜಕೀಯದಲ್ಲಿ ಅದರಲ್ಲೂ ಮುಖ್ಯವಾಗಿ ಆಲಿಪ್ತ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಲು ಭಾರತ ದೇಶಕ್ಕೆ ಸಹಾಯವಾಗಿದ್ದ ಅಂತಹ ವಿದೇಶಾಂಗ ನೀತಿಯ ಆಧಾರ ಸ್ತಂಭಗಳನ್ನು ಒಂದೊಂದಾಗಿ ಈ ಬಿಜೆಪಿ ನೇತೃತ್ವದ ಸರ್ಕಾರ ನಾಶಮಾಡಿದೆ. ಸೂಯೇಜ್



ಕಾಲುವೆ ಬಿಕ್ಕಟ್ಟು, ಇಂಡೋನೇಶಿಯಾದ ವಿಮೋಚನೆ, ವಿಯೆಟ್ನಾಮ್ ಸಾಮ್ರಾಜ್ಯಶಾಹಿಗಳ ಮಧ್ಯ ಪ್ರವೇಶದ ವಿರುದ್ಧ, ದಕ್ಷಿಣ ಆಫ್ರಿಕಾದಲ್ಲಿನ ಕಾಂಗೋ ಹಾಗೂ ಇತರ ದೇಶಗಳಲ್ಲಿ ಜನಾಂಗದ್ವೇಷದ ವಿರುದ್ಧ ಮತ್ತು ನಮೀಬಿಯಾದ ವಿಮೋಚನೆಗಾಗಿ ಈ ಸಂದರ್ಭಗಳಲ್ಲಿ ಭಾರತ ವಹಿಸಿದ ಪಾತ್ರ ಕೆಲವು ಉದಾಹರಣೆಗಳಷ್ಟೆ. ಆದರೆ ವಾಜಪೇಯಿ ಸರ್ಕಾರ ಈ ಎಲ್ಲಾ ವಿಷಯಗಳಲ್ಲೂ ಹಿಂದೆ ಸರಿದಿದೆ. ಸಹಾರಾವಿ ಅರಬ್ ಡೆಮೊಕ್ರಾಟಿಕ್ ರಿಪಬ್ಲಿಕ್‌ಗೆ ನೀಡಿದ್ದ ಮಾನ್ಯತೆಯನ್ನು ವಾಜಪೇಯಿ ಸರ್ಕಾರ ಹಿಂದಕ್ಕೆ ಪಡೆದಿದೆ ಮತ್ತು ತಮ್ಮ ತಾಯಿನಾಡಿಗಾಗಿ ಹೋರಾಡುತ್ತಿರುವ ಹಾಗೂ ಅತ್ಯಂತ ಕ್ರೂರವಾದ ಇಸ್ರೇಲ್(ಜಿಯೊನಿಸ್ಟ್) ಧಾಳಿಗಳನ್ನು ಎದುರಿಸುತ್ತಿರುವ ಪ್ಯಾಲೆಸ್ತೀನಿಯರ ಬೆಂಬಲಕ್ಕೆ ನಿಲ್ಲಲು ವಾಜಪೇಯಿ ಸರ್ಕಾರ ನಿರಾಕರಿಸುತ್ತಿದೆ.

ಅಮೆರಿಕಾ ಓಲೈಕೆ

ಭಾರತದಲ್ಲಿನ ಅತ್ಯಂತ ನಾಚಿಕೆಗೇಡಿನ ಸಾಮ್ರಾಜ್ಯಶಾಹಿಪರ ಪಕ್ಷವಾಗಿದ್ದ ಜನಸಂಘದ ಕಾಲದಿಂದಲೂ ಅವರ ಈ ನೀತಿಗಳು ಎಲ್ಲರಿಗೂ ತಿಳಿದೇ ಇತ್ತು. ಅಮೇರಿಕನ್ ಸಾಮ್ರಾಜ್ಯ ಶಾಹಿಗಳನ್ನು ಖುಷಿಪಡಿಸಲು / ತುಷ್ಟೀಕರಿಸಲು ಎಂತಹ ಕೆಳಮಟ್ಟಕ್ಕೂ ಈ ವಾಜಪೇಯಿ ಸರ್ಕಾರ ಹೋಗುತ್ತದೆ ಎನ್ನುವುದು ಈ ನಾಲ್ಕು ವರ್ಷಗಳಲ್ಲಿ ಸ್ಪಷ್ಟವಾಗಿದೆ. ಹಿಂದಿನದಿರಲಿ, ಇತ್ತೀಚಿನ ಅಂತಹ ಕೃತ್ಯವಾವುದೆಂದರೆ ಉತ್ತರ ಅರಬ್ಬೀ ಸಮುದ್ರದಲ್ಲಿ ಕೆಲಸದಲ್ಲಿ ನಿರತವಾಗಿದ್ದ ಭಾರತೀಯ ಯುದ್ಧನೌಕೆಗಳನ್ನು ತಮ್ಮ ನೆಲೆಗಳಿಗೆ ಹಿಂತಿರುಗಲು ಆದೇಶ ನೀಡಿದ್ದು. ಯುದ್ಧದ ನಿರರ್ಥಕತೆಯ ಬಗ್ಗೆ ಅಥವಾ ಯುದ್ಧದಲ್ಲಿ ಪರಸ್ಪರರಿಗೆ ಉಂಟಾಗಿದ್ದ ಹಾನಿಯ ಬಗ್ಗೆ ವಾಜಪೇಯಿ ಸರ್ಕಾರಕ್ಕೆ ಜ್ಞಾನೋದಯವಾಗಿ ಹಾಗೆ ಮಾಡಿದ್ದಲ್ಲ ಒಂದೊಮ್ಮೆ ಹಾಗೆ ಮಾಡಿದ್ದರೆ ಅದು ಖಂಡಿತಾ ಸ್ವಾಗತಾರ್ಹವೆ. ಆದರೆ ನಿಜ ಸಂಗತಿಯೇನೆಂದರೆ, ಈ ಉಪಖಂಡಕ್ಕೆ ಆರ್ಮಿಟೇಜ್ ಮತ್ತು ರಮ್ಸ್‌ಫೀಲ್ಡ್ ಭೇಟಿ ನೀಡಿದ ನಂತರ ಅಮೇರಿಕಾದ ಒತ್ತಡಕ್ಕೆ ಮಣಿದು ಯುದ್ಧ ನೌಕೆಗಳನ್ನು ಹಿಂದಕ್ಕೆ ಕಳಿಸಲಾಯಿತು.

ಭ್ರಷ್ಟಾಚಾರ

'ತತ್ವಾಧಾರಿತ ಪಕ್ಷ' ದಡಿಯಲ್ಲಿನ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಕಡಿಮೆ ಮಾತನಾಡುವುದೇ ಲೇಸು. ಬಿಜೆಪಿಯ "ರಾಜಕೀಯ ನೈತಿಕತೆ" ಎಂದು ಬೊಗಳೆ ಹಿಂದೆಂದಿಗಿಂತ ಇಂದು ಬಟ್ಟಬಯಲಾಗಿದೆ. ಬೇರೆ ಪಕ್ಷಗಳಿಂದ ಪಕ್ಷಾಂತರ

ರಾಷ್ಟ್ರಪತಿ ಯಾಕೀ

ರಾಷ್ಟ್ರಪತಿ ಚುನಾವಣೆಯ ಹಣಾಹಣಿ ಹೋ
ಮಣ್ಣುಗೂಡಿಸಿ ಅಬ್ದುಲ್ ಕಲಾಂರವರನ್ನೇ
ಎನ್‌ಡಿಎ ಕೂಟದ ಆಟವನ್ನು ಒಪ್ಪಲು ಹೇ
ಹಾಗೂ ಅದಕ್ಕೆ ಸಹವರ್ತಿಯಾಗಿರುವ
ಧಾಳಿಗಳನ್ನು ಎಲ್ಲರೂ ಬೆಂಬಲಿಸಬೇಕೆಂಬ
ಸನ್ನಿವೇಶದಲ್ಲಿ ಭಾರತವನ್ನು ಉಳಿಸಲು ಎಡ
ಸ್ಪರ್ಧಿಸುವ ನಿರ್ಧಾರದ ಮಹತ್ವ

ಮಾಡಿಸಿದ್ದಲ್ಲದೇ ಕುದುರೆ ವ್ಯಾಪಾರಕ್ಕೂ ಬಿಜೆಪಿ ಮುಂದಾಗಿದೆ. ಹಲವಾರು ರಾಜ್ಯಗಳಲ್ಲಿ ಅನೇಕ ಖದೀಮರಿಗೆ ಆ ಪಕ್ಷ ತಂಗುದಾಣವಾಗಿದೆ ಕೂಡ. ಚುನಾವಣೆಗೆ ನಿಲ್ಲುವುದಕ್ಕೆ ಅನುಮತಿ ನೀಡುವ ಮೊದಲು ಅಭ್ಯರ್ಥಿಗಳ ಪೂರ್ವಾಪರಗಳನ್ನು ಅಥವಾ ಪಾತಕಗಳನ್ನು ಪರಿಕ್ಷಿಸಬೇಕೆಂದು ಚುನಾವಣಾ ಆಯೋಗಕ್ಕೆ ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಿದಾಗ ಅದನ್ನು ಅತ್ಯಂತ ಕಟುವಾಗಿ ಬಿಜೆಪಿ ವಿರೋಧಿಸಿದ್ದು ಸುಮ್ಮನೆ ಅಲ್ಲ.

ಕೆ.ಆರ್.ನಾರಾಯಣನ್ ಜತೆ

ಬಿಜೆಪಿ ಇರುಸುಮುರುಸು


ಈ ಸನ್ನಿವೇಶದಲ್ಲಿ ರಾಷ್ಟ್ರಪತಿ ಭವನದಲ್ಲಿ

ಮೌಲ್ಯಗಳ ಮರೆತ ಕಾಂಗ್ರೆಸ್.....

ಆಂಗ್ಲರ ಸರ್ಕಾರ 1946ರಲ್ಲಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಮತ್ತವರ ಐ.ಎನ್.ಎ ಸಂಗಾತಿಗಳ ಮೇಲೆ ದೇಶದ್ರೋಹದ ಆರೋಪ ಹೊರಿಸಿ ಬಂಧಿಸಿದಾಗ 'ಐಎನ್‌ಎ ವಿಚಾರಣೆಗಳೆಂದೇ ಪ್ರಖ್ಯಾತವಾದ ಆ ವಿಚಾರಣೆಯಲ್ಲಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಮತ್ತು ಇತರರ ಪರವಾಗಿ ಭಾರತ ರಾಷ್ಟ್ರೀಯ ಕಾಂಗ್ರೆಸ್ (ಐ.ಎನ್.ಸಿ)ನ ಜವಾಹರ್‌ಲಾಲ್ ನೆಹರುರವರೇ ಭೂಲಾಭಾಯ್ ದೇಸಾಯಿ ಮತಿತ್ತರರೊಂದಿಗೆ ಸೇರಿ ವಾದಿಸಿದ್ದರೆಂಬುದು ಇಂದಿನ ಕಾಂಗ್ರೆಸ್ ಮುಖಂಡರಿಗೆ ತಿಳಿದಿರಲಿಕ್ಕಿಲ್ಲಾ. ತಿಳಿದವರೂ ಸಹಾ ಮರೆತಂತಿದೆ!.

ಸೋನಿಯಾಗಾಂಧಿ ಮತ್ತಿತರೆ ಕಾಂಗ್ರೆಸ್ ಮುಖಂಡರು, ರಾಜೀವ್ ಗಾಂಧಿಯವರ ತಾತ ರಾಷ್ಟ್ರದ ಪ್ರಥಮ ಪ್ರಧಾನಿ ನೆಹರುವರು 'ಧೀಮಂತ ದೇಶಭಕ್ತಿ ಹಾಗೂ ಸ್ವತಂತ್ರ ಸಂಗ್ರಾಮದ ವೀರ ಸೇನಾನಿ' ಎಂದು ಬಣ್ಣಿಸಿದ್ದ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್‌ರವರ ವಿರುದ್ಧ ಮತ ಚಲಾಯಿಸಲು ಹೊರಟಿದ್ದಾರೆ. ಸ್ವತಂತ್ರ ನಂತರದ ಭಾರತದಲ್ಲಿ ಕಾಂಗ್ರೆಸ್ ಹೇಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಮೂಡಿಬಂದ ರಾಷ್ಟ್ರೀಯ ಮೌಲ್ಯಗಳಿಂದ ಅಂದಿನ ಐ.ಎನ್.ಎ. ನಿರ್ಮಿಸಿದ ಮೌಲ್ಯಗಳಿಂದ ವಿಮುಖರಾಗಿದ್ದಾರೆ ಎಂಬುದಕ್ಕೆ ಇದು ಮತ್ತೊಂದು ಉದಾಹರಣೆಯಾಗಿದೆ.

ಎ. ಕೃಷ್ಣ ಅನಂತ್
ಖ್ಯಾತ ಅಂಕಣಕಾರ.
19.2.2002ರ 'ದಿ ಹಿಂದೂ' ಪತ್ರಿಕೆಯ ಲೇಖನದಲ್ಲಿ.



ಭಾರತದ ಆತ್ಮವಿಶ್ವಾಸದ ಮುಗುಳು ನಗು

ಎಂದಿನಂತೆ ಕಛೇರಿಗೆ ಬಂದ ಉದ್ಯೋಗಿಗಳಿಗೆ ಕಂಡದ್ದು ಅಚ್ಚರಿ. ವೇತನ ಸೇವಾ ಸಮಸ್ಯೆ, ಆಡಳಿತ ಮಂಡಳಿ ನಿರ್ದೇಶನ ಸಭೆ ಇತ್ಯಾದಿ ನೋಟೀಸ್‌ಗಳೇ ತುಂಬಿದ್ದ ಬೋರ್ಡ್‌ನಲ್ಲಿ ಹೊಸದಾದ ಸಂಗತಿ ಗೋಚರ. 'ಪ್ರಜಾಪ್ರಭುತ್ವದ ಅಚ್ಚರಿಗಳು' ಎಂಬ ಮುಖ್ಯ ತಲೆಬರಹ, ಅದರಲ್ಲಿ ವಿವಿಧ ಫೋಟೋಗಳು ಅದೂ ಬದುಕು ಭಾವ ಬಿಂಬಿಸುವ ಕ್ಯಾ. ಲಕ್ಷ್ಮಿ ಸೆಹಗಲ್‌ರವರದ್ದು. ಕೆಳಗೊಂದು ಶಿರ್ಷಿಕೆ - **'ಭಾರತದ ಆತ್ಮವಿಶ್ವಾಸದ ಮುಗುಳು ನಗು ಕ್ಯಾ. ಲಕ್ಷ್ಮಿ ಸೆಹಗಲ್'**. ಸಹಜವಾಗಿ ಅಲ್ಲಿಂದ ಹಾದು ಹೋಗುವ ಎಲ್ಲರನ್ನು ಆಕರ್ಷಿಸಿ ಮನಗೆದ್ದು ಮಾತನಾಡಿತು ಈ ಪೋಸ್ಟರ್. ರಾಷ್ಟ್ರಪತಿ ಸ್ಥಾನಕ್ಕೆ ಎಡರಂಗದ ಅಭ್ಯರ್ಥಿ ಎಂದು ಪ್ರಕಟವಾದ ಕೂಡಲೇ ಹೃದಯದಿಂದ ದುಮುಕ್ಕಿದ ಭಾವ ಪ್ರಕಟವಾದದ್ದು ಹೀಗೆ. ಹಾಸನದ ಜೀವ ವಿಮಾ ನೌಕರ ರವಿಕುಮಾರ್‌ರವರಿಂದ

ರುವನೇ ಒಬ್ಬನನ್ನು ಕೂರಿಸಲು ಬಿಜೆಪಿ
ರಣಿಸುತ್ತಿದೆ. ನಮ್ಮ ಸಂಸದೀಯ ವ್ಯವಸ್ಥೆಯ
ಕ್ಷೆಯಲ್ಲಿ ನಮ್ಮ ಸಂವಿಧಾನವು ರಾಷ್ಟ್ರಪತಿಗೆ
ಚ್ಚಿನ ಅಧಿಕಾರವನ್ನು ನೀಡಿರದಿದ್ದಾಗ್ಯೂ. ಕೆಲವು
ಂದರ್ಭಗಳಲ್ಲಿ ಸರ್ಕಾರದ ಕ್ರಮಗಳು ರಾಷ್ಟ್ರಪತಿಗೆ
ವನ್ನು ಅನಿಸಿಕೆಗಳನ್ನು ಹೇಳಬೇಕಾದ
ನಿವಾರ್ಯತೆಯನ್ನು ಉಂಟುಮಾಡಿದೆ. ಒಂದು
ಂದರ್ಭದಲ್ಲಿ, ಒಂದು ಸ್ವಾತಂತ್ರ್ಯೋತ್ಸವದ ದಿನ
ರ್ಕಾರ ಸಿದ್ಧಪಡಿಸಿದ ಭಾಷಣವನ್ನು ಬದಿಗಿಟ್ಟು

...ಚುನಾವಣೆ ...ಸ್ಪರ್ಧೆ?

...ಂಭ. ಸಹಮತದ ಎಲ್ಲಾ ಪ್ರಯತ್ನಗಳನ್ನು ...ಸಬೇಕೆಂಬ ಸಂಘ ಪರಿವಾರ, ಬಿಜೆಪಿ, ... ಜಾಗತಿ ಸಾಮ್ರಾಜ್ಯಶಾಹಿಯ ಆಕ್ರಮಣ ...ಳುವವರ, ಆಂತರಿಕ ಪ್ರತಿಗಾಮಿಗಳ ...ರ ಬಯಕೆ. ದೇಶದ ಇಂದಿನ ಗಂಭೀರ ...ಮತ್ತು ಪೀಪಲ್ಸ್ ಫ್ರಂಟ್‌ನ ಭಾಗಿದಾರರು ... ಸುರ್ಜಿತ್ ವಿವರಿಸಿದ್ದಾರೆ.

ನೇರವಾಗಿ ದೇಶವನ್ನು ಉದ್ದೇಶಿಸಿ ಮಾತನಾಡ ಬೇಕಾಯಿತು. ಭಾರತ ಅಂತಹ ಪರಿಸ್ಥಿತಿ ಹಿಂದೆ ಕಂಡಿರಲಿಲ್ಲ. ಈಗ ನಿರ್ಗಮಿಸುತ್ತಿರುವ ಅಧ್ಯಕ್ಷ ಡಾ.ಕೆ.ಆರ್. ನಾರಾಯಣನ್ - ವಿಜ್ಞಾನಿ ಹಾಗೂ ರಾಜತಾಂತ್ರಿಕ ಎರಡೂ ಒಟ್ಟುಗೂಡಿದ್ದ ಮಹಾವ್ಯಕ್ತಿ - ಶಿಕ್ಷಣದ ಕೇಸರೀಕರಣದಂತಹ ವಿಷಯಗಳ ಮೇಲೆ ಸ್ಪಷ್ಟ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಇತ್ತೀಚಿನ ಭಾರತೀಯ ಇತಿಹಾಸ ಸಮಾವೇಶಕ್ಕೆ ಅವರು ನೀಡಿದ ಶುಭಾಶಯದ ಸಂದೇಶವು ಒಂದು ಧರ್ಮನಿರಪೇಕ್ಷ, ವೈಜ್ಞಾನಿಕ ಶಿಕ್ಷಣ ವ್ಯವಸ್ಥೆ ಹಾಗೂ ಒಂದು ನಾಗರೀಕ ದೇಶವಾಗಿ ನಮ್ಮ ಭವಿಷ್ಯ ರೂಪಿಸುವ ಬಗ್ಗೆ ಅವರು ತೋರಿದ ಭಾವಪೂರ್ಣ ಕಾಳಜಿಯೇ ಅದಕ್ಕೆ ಸಾಕ್ಷಿ.

ಪ್ರಧಾನಿಗಳು ಡಾ. ನಾರಾಯಣನ್‌ರವರನ್ನು ಭೇಟಿ ಮಾಡಿ, ಅವರಿಗೆ ಎರಡನೇ ಅವಕಾಶ ನೀಡುವ ಪರವಾಗಿ ಎನ್‌ಡಿಎ ಇಲ್ಲ ಎಂಬುದನ್ನು ತಿಳಿಸಿದ ಮಾತುಗಳೇ ರಾಷ್ಟ್ರಪತಿ ಭವನದಲ್ಲಿ ಅಂತಹ ವ್ಯಕ್ತಿಗಳು ಇರುವುದರಿಂದ ಬಿಜೆಪಿಗೆ ಉಂಟಾದ ಮುಜುಗರವನ್ನು ತೋರುತ್ತದೆ. ಒಂದು ವೇಳೆ ಬಿ.ಜೆ.ಪಿಗೆ ಡಾ|| ನಾರಾಯಣನ್‌ರವರು ರಾಷ್ಟ್ರಪತಿ ಭವನದಲ್ಲಿರುವುದು ಇಷ್ಟವಿಲ್ಲವೆಂದಿದ್ದರೆ, ಭಾರತ-ಪಾಕ್ ಸಂಬಂಧ ಕುರಿತು ಮಾತನಾಡುವ ನೆಪದಲ್ಲಿ ರಾಷ್ಟ್ರಪತಿಗಳನ್ನು ಪ್ರಧಾನಿಗಳು ಬೇಟಿ ಮಾಡುವ ಮುನ್ನವೇ ಬಿಜೆಪಿ ತನ್ನ ಅಭ್ಯರ್ಥಿಯನ್ನು ಘೋಷಿಸಬೇಕಿತ್ತು. ಯಾರು ಅವರನ್ನು ತಡೆದಿರಲಿಲ್ಲ. ಆದರೆ ಯಾವುದೇ ರಾಷ್ಟ್ರಪತಿಗೆ ಎರಡನೇ ಅವಧಿ ನೀಡದಿರುವ ಸಂಪ್ರದಾಯದ

ಪುಟ 10 ಕ್ಕೆ

ರಾಷ್ಟ್ರಪತಿ ಸ್ಥಾನಕ್ಕೆ ಎಡರಂಗದ ಅಭ್ಯರ್ಥಿ

ಡಾ. ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್

ಅದು 1946ರ ಆರಂಭದ ದಿನಗಳು, ಬ್ರಿಟೀಷರಿಂದ ಭಾರತದ ವಿಮೋಚನೆಗಾಗಿ ಬದ್ಧವಾಗಿದ್ದ ಭಾರತ ರಾಷ್ಟ್ರೀಯ ಸೇನೆ (I.N.A)ಗೆ ಅತ್ಯಂತ ಕಷ್ಟದ ಕಾಲ. ವಿಜಯದ ಮತ್ತಿನಲ್ಲಿದ್ದ ಬ್ರಿಟೀಷರ ಸೈನಿಕ ಪಡೆಗಳು ಭಾರತ ರಾಷ್ಟ್ರೀಯ ಸೇನಾ ಪಡೆಗಳನ್ನೂ ಮುತ್ತಿ ಬೇಟೆಯಾಡುತ್ತಿದ್ದ ಸಂಕಷ್ಟದ ಸಮಯವದು. ಸೆರೆಸಿಕ್ಕ INA ಸೈನಿಕರು ಬ್ರಿಟೀಷ್ ಪಡೆಗಳ ಕ್ರೂರ ದಾಳಿಗೆ, ಮಾರಣ ಕಾಂಡಕ್ಕೆ ಬಲಿಯಾಗುತ್ತಿದ್ದರು.



ಅಂತಹ ಸಮರಾಂಗಣದಲ್ಲೊಬ್ಬಳು 32ರ ಯುವತಿ. ಬರೀ ಯುವತಿಯಲ್ಲ ಭಾರತ ರಾಷ್ಟ್ರೀಯ ವಿಮೋಚನಾ ಸೈನ್ಯದ ಪರಾಕ್ರಮದ ಸಂಕೇತ. ಭಯಾನಕ-ಬ್ರಿಟೀಷ್ ಪಡೆಗಳನ್ನೂ ಎದುರಿಸಿ ಹಿಮ್ಮೆಟ್ಟಿಸುವುದು ಸೆರೆಯಾಳುಗಳನ್ನು ಬಿಡಿಸಿ ಲೊರಾರಾ ಹೋಮದಿಂದ ಸಂರಕ್ಷಿಸು ವುದು ಅವರ ಕರ್ತವ್ಯ. ಅತ್ಯಂತ ಕಠಿಣ ಪರಿಸ್ಥಿತಿ ಯಲ್ಲೂ ಎದೆಗುಂದದೆ, ಹಿಮ್ಮೆಟ್ಟದೇ ಅತ್ಯಂತ ಚಾಕಚಕ್ಯತೆಯಿಂದ - ಅಮಿತ ಧೈರ್ಯ ಸಾಹಸಗಳಿಂದ; ಅಪ್ರತಿಮ ತ್ಯಾಗ-ಬಲಿದಾನ ಗಳಿಂದ ಜೀವದ ಹಂಗು ತೊರೆದು ಹಲವು ನೂರು ಜೀವಗಳನ್ನೂ ರಕ್ಷಿಸಿದರು. ಅಂತಿಮವಾಗಿ 04 ಮಾರ್ಚ್ 1946ರಂದು ಬ್ರಿಟೀಷರು ಸೆರೆ ಹಿಡಿದು ಭಾರತಕ್ಕೆ ಕರೆ ತಂದರೆ ದೇಶದ ಜನತೆ ಮಹಾನ್ ನಾಯಕಿಗೆ ಅಭೂತಪೂರ್ವ ಸ್ವಾಗತ ನೀಡಿತು.

ಧೀರ ನಾಯಕಿ

ಕೆಲವೇ ದಿನಗಳಲ್ಲಿ ಬ್ರಿಟೀಷರು ಈ ಪರಾಕ್ರಮಿ ಯುವತಿಯನ್ನೂ ಸರಳುಗಳೊಳಗೆ ಬಂಧಿಸಿಡುವುದು ಅತ್ಯಂತ ಅಪಾಯಕರವೆಂದು ಬೇಗನೆ ಅರಿತರು. ಅವರ ಪ್ರಕಾರ ಇವರನ್ನೂ ಸೆರೆಯಲ್ಲಿಡುವುದೆಂದರೆ ದೇಶದೊಳಗಿನ ವಿಮೋಚನಾ ಸಮರಕ್ಕೆ ವೇಗ ನೀಡುವುದೇ ಆಗಿತ್ತು. ಇದರಿಂದ ಭಯಭೀತರಾದ ಬ್ರಿಟೀಷರು ಬಿಡುಗಡೆ ಮಾಡಿದರು.

ಹೌದು ಬ್ರಿಟೀಷರಿಗೆ ಹೆದರಿ ಮುಚ್ಚಳಿಕೆ ಬರೆದುಕೊಟ್ಟು ಬಿಡುಗಡೆಯಾದುದಲ್ಲ; ಬಿಟ್ಟರೆ ಓಡಿಹೋಗಿ ಮನೆಯ ಮೂಲೆಯಲ್ಲಿ ಮುದುರಿ ಕೂಡಲಿಲ್ಲ. ಭಾರತ ರಾಷ್ಟ್ರೀಯ ಸೇನೆಯ ಸೆರೆಯಾಳುಗಳನ್ನೂ ಬಿಡುಗಡೆ ಮಾಡಲು, ಪುನರ್‌ವಸತಿ ಕಲ್ಪಿಸಲು ಹಾಗೂ ದೇಶದ ವಿಮೋಚನಾ ಹೋರಾಟವನ್ನೂ ಮನ್ನಡೆಸಲು ಅನ್ನಾಹಾರಗಳಿಲ್ಲದೆ, ನಿದ್ರೆ ನೀರಡಿಕೆ ಬಳಲಿಕೆಯನ್ನದೇ ಹಗಲಿರುಳು ದೇಶದ ಉದ್ದಗಲಕ್ಕೆ ಸಂಚರಿಸಿ ಪ್ರಚಾರ ಪ್ರಕ್ಷೋಭೆಯಲ್ಲಿ ನಿರತರಾದರು. ಹೌದು, ಯಾರೀ ಧೀಮಂತಮಹಿಳೇ? ಅವರೇ ಡಾ. ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್.

INA ಸೈನಿಕರಿಗಾಗಿ ದೊಡ್ಡ ರೀತಿಯಲ್ಲಿ ನಿಧಿ ಸಂಗ್ರಹ ಮಾಡಿದರು. ಕ್ಯಾ. ಲಕ್ಷ್ಮಿ ಜನತೆಯನ್ನು ಬ್ರಿಟೀಷರ ವಸಾಹತು ಆಡಳಿತ ವಿರುದ್ಧ ಅಣಿನೆರೆಸಿದರು. ಕರ್ನಲ್ ಸೆಹಗಲ್ ಸೇರಿದಂತೆ INA ಸೈನಿಕ- ಬಂಧಿಗಳ ಬಿಡುಗಡೆಯ ನಂತರವೂ ಕೆಂಪುಕೊಂಡಿಯಿಂದ ಸ್ವಾತಂತ್ರ್ಯ ಹೋರಾಟ ಮುಂದುವರೆಯಿತು. 1947 ಮಾರ್ಚ್‌ನಲ್ಲಿ ಕರ್ನಲ್ ಸೆಹಗಲ್‌ರೊಂದಿಗೆ ಲಾಹೋರ್‌ನಲ್ಲಿ ಕ್ಯಾಪ್ಟನ್‌ಲಕ್ಷ್ಮಿ ವಿವಾಹವಾದರು.


ಪರಿಚಯ-ಹಿನ್ನೆಲೆ

ಲಕ್ಷ್ಮಿ ಸೆಹಗಲ್ 24.10.1914ರಂದು ಮದ್ರಾಸ್‌ನಲ್ಲಿ ಡಾ|| ಸ್ವಾಮಿನಾಥನ್ ಎ.ವಿ, ಅಮ್ಮುಕುಟ್ಟಿ ದಂಪತಿಗಳಿಗೆ ಜನಿಸಿದರು. ತಂದೆ ಡಾ|ಸ್ವಾಮಿನಾಥನ್ ಮದ್ರಾಸ್ ಹೈಕೋರ್ಟಿನಲ್ಲಿ ಆ ಕಾಲದ ಕ್ರಿಮಿನಲ್-ಲಾ ನಿರ್ವಹಣೆ ಮಾಡುತ್ತಿದ್ದ ಅದ್ಭುತ ಪ್ರೌಢಿಮೆ ಹೊಂದಿದ್ದ ಜನಪ್ರಿಯ ಪ್ರಮುಖ ವಕೀಲರಾಗಿದ್ದರು. ಅವರ ತಾಯಿ ಅಮ್ಮುಕುಟ್ಟಿಯವರು ಸಮಾಜ ಸೇವಕರು, ಸ್ವಾತಂತ್ರ್ಯ ಹೋರಾಟಗಾರರು; ಮಹಿಳೆಯರ ಹಕ್ಕುಗಳಿಗಾಗಿ ನಿರಂತರ ಶ್ರಮಿಸಿದ ಪ್ರಕ್ಷೋಭೆಗಾರರು; ಮದ್ರಸ್ ಮುನ್ಸಿಪಾಲ್ ಕಾರ್ಪೋರೇಶನ್ ಸದಸ್ಯರು ಶಾಸನಸಭೆ, ಲೋಕಸಭೆ-ರಾಜ್ಯಸಭೆ ಸದಸ್ಯರಾದವರು. ಮತ್ತು ಅಖಿಲಭಾರತ ಮಹಿಳಾ ಸಮ್ಮೇಳನದ ಅಖಿಲಭಾರತ ಅಧ್ಯಕ್ಷರು ಆಗಿದ್ದವರು ಎಳೆಯ ವಯಸ್ಸಿನಲ್ಲಿಯೇ ಲಕ್ಷ್ಮೀಯವರು ಅತ್ಯಂತ ಉತ್ಸಾಹದಿಂದ ವಿದೇಶಿ ವಸ್ತ್ರಗಳ ದಹನ ಮದ್ಯಪಾನದ ಅಂಗಡಿ ಪಿಕೇಟಿಂಗ್ ಮುಂತಾದ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿದ್ದರು. ವಿದೇಶಿ ವಸ್ತ್ರಗಳ ಬಹಿಷ್ಕಾರದಲ್ಲಿ ಸ್ವತಃ ಬಟ್ಟೆಗಳನ್ನು ಸುಟ್ಟು ಹಾಕಿದರು.

ಮಹಾನ್‌ತ್ಯಾಗ ಬಲಿದಾನಗಳ ಒಂದು ಕ್ರಾಂತಿಕಾರಿ ಜೀವನ

ಅತ್ಯಂತ ಕಡುಬಡವರು-ಅದರಲ್ಲೂ ಮಹಿಳೆಯರ ಸೇವೆಗೈಯ್ಯುವ ಉದ್ದೇಶದಿಂದ ಎಂ.ಬಿ.ಬಿ.ಎಸ್ ಓದಲು ನಿರ್ಧರಿಸಿ ಮದ್ರಾಸ್ ಮೆಡಿಕಲ್ ಕಾಲೇಜಿನಿಂದ 1938ರಲ್ಲಿ ಪದವಿಯನ್ನು ಪಡೆದರು. ಒಂದು ವರ್ಷದ ನಂತರ ಹೆರಿಗೆ ಹಾಗೂ ಪ್ರಸೂತಿ ವಿಭಾಗದಲ್ಲಿ ಡಿಪ್ಲೋಮಾ ಪಡೆದರು.

1940ರಲ್ಲಿ ಸಿಂಗಾಪುರಕ್ಕೆ ಬಂದ ಡಾ|| ಲಕ್ಷ್ಮಿಯವರು ಕೆಲವೇ ದಿನಗಳಲ್ಲಿ ಬಡವರಲ್ಲಿ ಕಡುಬಡವರಾದ ಭಾರತದಿಂದ ವಲಸೆಬಂದ ಕಾರ್ಮಿಕರ ನಡುವೆ ಆಸ್ಪತ್ರೆ ಯೊಂದನ್ನೂ ತೆರೆದರು. ಉತ್ತಮ ವೈದ್ಯೆಯಾಗಿ ಹೆಸರು ಗಳಿಸಿದರು.



ಬೋಸರೊಂದಿಗೆ ಕ್ಯಾ. ಲಕ್ಷ್ಮಿ ಸೆಹಗಲ್

ಬರೀ ವೈದ್ಯೆಯಲ್ಲ ಯೋಧ ಕೆಲಸಕ್ಕೂ ಸಿದ್ಧ

ಅದು 1942 ಬ್ರಿಟೀಷ್ ವಸಾಹತು ಸಿಂಗಾಪುರವು ಜಪಾನೀಯರ ವಶವಾಯಿತು. ಈ ಐತಿಹಾಸಿಕ ಘಟನೆಯ ಸಂಘರ್ಷದಲ್ಲಿ ಗಂಭೀರವಾಗಿ ಗಾಯಗೊಂಡ ಗಾಯಾಳುಗಳನ್ನೂ, ಅಪಘಾತಕ್ಕೀಡಾದವರನ್ನೂ ಶುಶ್ರೂಷೆಗೊಳಪಡಿಸಲು ಡಾ|| ಲಕ್ಷ್ಮೀಯವರು ಗಂಭೀರವಾಗಿ ಹಗಲಿರುಳು ತೊಡಗಿಸಿ ಕೊಂಡಿದ್ದರು. ಇದೇ ಸಂದರ್ಭದಲ್ಲಿ ಭಾರತೀಯ ಯುದ್ಧ ಕೈದಿಗಳ ಸಂಪರ್ಕ ಬೆಳೆಯಿತು. ಅವರ ನಡುವೆ 'ಭಾರತದ ವಿಮೋಚನಾ ಸೈನ್ಯ' ರಚಿಸಬೇಕೆಂಬ ಚರ್ಚೆ ಅವರನ್ನು ಅತ್ಯಂತ ಉತ್ಸಾಹಭರಿತಳನ್ನಾಗಿಸಿತು. ಆ ಚರ್ಚೆಯಲ್ಲಿ ವಿಮೋಚನಾ ಸೈನ್ಯ ರಚನೆಯಾಗಬೇಕೆಂದು ಆ ಕೂಡಲೇ ಅಲ್ಲಿದ್ದ ಶ್ರೀ ಮೆನನ್ ಡಾ|| ಲಕ್ಷ್ಮಿಯವರ ಹೆಸರನ್ನೂ ಸೂಚಿಸಿದರು. ಅಂದು ರಾತ್ರಿ ಡಾ. ಲಕ್ಷ್ಮಿಯವರನ್ನೂ ನೇತಾಜಿಯವರಿಗೆ ಭೇಟಿ ಮಾಡಿಸಿದರು. ನೇತಾಜಿಯವರು ಝಾನ್ಸಿರಾಣಿ ರೆಜಿಮೆಂಟ್ ಸ್ಥಾಪನೆ ಕುರಿತು ವಿವರಿಸಿ ಅದರ ರಚನೆಗೆ ನಾಯಕತ್ವ ವಹಿಸುವ ಕುರಿತು ತಿಳಿಸಿದ ಕೂಡಲೇ, ತಾನೊಂದು ಆಲೋಚಿಸದೇ, ಹಿಂದು-ಮುಂದು ನೋಡದೇ ನೇರ ಒಪ್ಪಿಗೆಯನ್ನು ನೀಡಿದರು. ಹಾಗೂ ಮಾರನೇ ದಿನದಿಂದಲೇ ಆಸ್ಪತ್ರೆಯನ್ನು ಮುಚ್ಚಿಬಿಟ್ಟು ಝಾನ್ಸಿರಾಣಿ ರೆಜಿಮೆಂಟ್ ಸ್ಥಾಪನೆಯ ಕೆಲಸದಲ್ಲಿ ತಮ್ಮನ್ನೂ ತೊಡಗಿಸಿಕೊಂಡರು, ಮಾತ್ರವಲ್ಲ ಅತ್ಯಂತ ಕಡಿಮೆ ಅವಧಿಯಲ್ಲಿ ತರಬೇತುಗೊಂಡು ಮಹಿಳಾ ಯೋಧರ ಪಡೆಯನ್ನು ಸಜ್ಜುಗೊಳಿಸಿದರು.

21 ಅಕ್ಟೋಬರ್ 1943ರಂದು ಅಜಾದ್ ಹಿಂದ್ ಹಂಗಾಮಿ ಸರ್ಕಾರವನ್ನು ಪ್ರಕಟಿಸಲಾಯಿತು. ಅದರ ಕೆಬಿನೆಟ್‌ನ ಮಹಿಳಾ ಸದಸ್ಯರಾಗಿ ಡಾ. ಲಕ್ಷ್ಮಿಯವರು ಆಯ್ಕೆಗೊಂಡರು.

ಸ್ವಾತಂತ್ರ್ಯ ನಂತರವೂ ಕೂಡ

ಅದೇ ರೀತಿಯಲ್ಲಿ ಸ್ವಾತಂತ್ರ್ಯ ನಂತರ 1971ರಲ್ಲಿ ಪೂರ್ವ ಪಾಕಿಸ್ತಾನದಿಂದ ಪಶ್ಚಿಮ ಬಂಗಾಳಕ್ಕೆ ವಲಸೆಬಂದ ದೊಡ್ಡ ಸಂಖ್ಯೆಯ ನಿರಾಶ್ರಿತರ ಸೇವೆಯಲ್ಲಿ ಹಲವು ತಿಂಗಳ ಕಾಲ ಡಾಕ್ಟರರಾಗಿ ತಮ್ಮನ್ನೂ ತೊಡಗಿಸಿಕೊಂಡರು.

ಪದ್ಮ ವಿಭೂಷಣ

1998ರಲ್ಲಿ ಭಾರತ ಸರ್ಕಾರ ಪದ್ಮವಿಭೂಷಣ ಪ್ರಶಸ್ತಿಯನ್ನು ರಾಷ್ಟ್ರಪತಿಗಳ ಮೂಲಕ ನೀಡಿ ಗೌರವಿಸಿದರು. 87ರ ಇಳಿವಯಸ್ಸಿನಲ್ಲಿ ಬೆಳಿಗ್ಗೆ 9 ಗಂಟೆಗೆಲ್ಲಾ ಅವರ ಹೆರಿಗೆ ಆಸ್ಪತ್ರೆಯಲ್ಲಿ ಹಾಜರಿದ್ದು ವಾರದ 7 ದಿನವೂ ಮದ್ಯಾಹ್ನದ 2-3 ಗಂಟೆಯವರೆಗೂ ವೈದ್ಯರಾಗಿ ಕಾರ್ಯ ನಿರ್ವಹಿಸುತ್ತಾರೆ.

ಪ್ರಥಮ ಮಹಿಳಾ ಅಭ್ಯರ್ಥಿ

ಹೊಗಳಿಕೆ- ಪ್ರಶಸ್ತಿಗಳನ್ನು ಅಷ್ಟಾಗಿ ಹಚ್ಚಿಕೊಳ್ಳದ ಮತ್ತು ಮಾನವೀಯತೆಗಾಗಿ - ದೇಶದ ಜನತೆಯ ಸೇವೆಗಾಗಿ ಸದಾ ದುಡಿಯುತ್ತಿರುವ - ಆ ಬಗ್ಗೆ ತೀವ್ರ ತುಡಿತ-ಕಾಳಜಿ ಮಾಡುವ ಅಪರೂಪದ ವ್ಯಕ್ತಿ. ಹೌದು ಇದೀಗ ದೇಶದ ಗಮನ ಸೆಳೆದ ಎಡಪಕ್ಷಗಳ ರಾಷ್ಟ್ರಪತಿಯಂತಹ ಉನ್ನತ ಸ್ಥಾನಕ್ಕೆ ಸ್ಪರ್ಧಿಸಿದ ಪ್ರಥಮ ಮಹಿಳಾ ಅಭ್ಯರ್ಥಿ.

ಜುಲೈ 7 ರಂದು ಬೆಂಗಳೂರಿಗೆ ಕ್ಯಾ. ಲಕ್ಷ್ಮಿ ಸೆಹಗಲ್

ಎಡರಂಗದ ಅಭ್ಯರ್ಥಿ ಕ್ಯಾ. ಲಕ್ಷ್ಮಿ ಸೆಹಗಲ್‌ರವರು ಚುನಾವಣಾ ಪ್ರಚಾರಾರ್ಥ ಜುಲೈ 7 ರಂದು ಬೆಂಗಳೂರಿಗೆ ಆಗಮಿಸಲಿದ್ದಾರೆ. ಅವರನ್ನು ಸಂಭ್ರಮದಿಂದ ಸ್ವಾಗತಿಸಲು ಬೆಂಗಳೂರು ನಾಗರಿಕರುಳ್ಳ ವಿಶಾಲವಾದ ಸ್ವಾಗತ ಸಮಿತಿಯನ್ನು ರಚಿಸಲಾಗುತ್ತಿದೆ. ಅವರು ಮೊಟ್ಟಮೊದಲು ಜೂನ್ 29 ರಂದು ಗುಜರಾತ್ ಹತ್ಯಾಕಾಂಡದಲ್ಲಿ ಬೆಂದು ನಲುಗಿದ ನಿರಾಶ್ರಿತರ ಶಿಬಿರಗಳಿಗೆ ಭೇಟಿ ನೀಡುವ ಮೂಲಕ ಪ್ರವಾಸ ಆರಂಭಿಸಲಿದ್ದಾರೆ.

25 ವರ್ಷಗಳ ಎಡರಂಗ ಸರಕಾರ........



ಜನತೆಗಾಗಿ ಎಡೆಗುಂದದ ನಿರಂತರ ಹೋರಾಟ

ಪುಟ 5 ರಿಂದ

ರಾಜ್ಯದ ಶಿಕ್ಷಣರಂಗ ಅಸ್ತವ್ಯಸ್ತಗೊಂಡಿತ್ತು. ವಿವಿಧ ಹಂತಗಳಲ್ಲಿ ಸಕಾಲದಲ್ಲಿ ಪರೀಕ್ಷೆಗಳನ್ನು ನಡೆಸುವುದು ಗತಕಾಲದ ವಿಷಯವಾಗಿತ್ತು. ನಮ್ಮ ಸರಕಾರ ಕ್ಷಿಪ್ರ ಕ್ರಮಗಳನ್ನು ಕೈಗೊಂಡು ವ್ಯವಸ್ಥೆಯನ್ನು ನಿಯಂತ್ರಣಕ್ಕೆ ತಂದಿತು. 12ನೇ ತರಗತಿವರೆಗೆ ಶಿಕ್ಷಣವನ್ನು ಉಚಿತಗೊಳಿಸಲಾಯಿತು. 10,000ಕ್ಕೂ ಹೆಚ್ಚು ಹೊಸ ಪ್ರಾಥಮಿಕ ಶಾಲೆಗಳು ರೂಪುಗೊಂಡವು. 109 ಕಾಲೇಜ್ ಹಾಗೂ 38 ಹೊಸ ಇಂಜಿನಿಯರಿಂಗ್ ಕಾಲೇಜ್‌ಗಳನ್ನು ಸ್ಥಾಪಿಸಲಾಯಿತು.

ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರಕಾರದ ಆಡಳಿತಾವಧಿಯಲ್ಲಿ ಏಳು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಯಿತು. ದೇಶದಲ್ಲೇ ಅತ್ಯುತ್ತಮ ಎಂದು ಪರಿಗಣಿಸಬಹುದಾದ ಕಾನೂನು ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ಸಾಕ್ಷರತೆ ಪ್ರಮಾಣ 1977ರಲ್ಲಿ ಶೇಕಡ 57 ಇದ್ದದ್ದು ಈಗ 69ಕ್ಕೆ ಏರಿದೆ. ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಸರಕಾರ ಸದಾ ಗಮನಹರಿಸಿದೆ. ಈ ವಿಷಯದಲ್ಲಿ ಉತ್ತಮ ಫಲಿತಾಂಶವೂ ದೊರಕಿದೆ.

ಸರಕಾರಿ ರಂಗದಲ್ಲಿ ಶೇಕಡ 70ಕ್ಕಿಂತ ಹೆಚ್ಚು ಆಸ್ಪತ್ರೆ ಹಾಸಿಗೆಗಳನ್ನು ಹೊಂದಿರುವ ರಾಜ್ಯವೆಂಬ ಅಪರೂಪದ ಹೆಗ್ಗಳಿಕೆ ಪಶ್ಚಿಮ ಬಂಗಾಳದ್ದು. ಶೇಕಡ 70 ರೋಗಿಗಳಿಗೆ ಸರಕಾರಿ ಆಸ್ಪತ್ರೆಗಳಲ್ಲೇ ಚಿಕಿತ್ಸೆ ಸಿಗುತ್ತದೆ. ಸರಕಾರಿ ಆರೋಗ್ಯ ರಕ್ಷಣೆ ವ್ಯವಸ್ಥೆಯೊಂದೇ ರಾಜ್ಯದ ಬಡಜನರಿಗೆ ಲಭ್ಯವಿರುವ ಏಕೈಕ ಮಾರ್ಗವಾಗಿದೆ. ಏನಿದ್ದರೂ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸಬೇಕಿದೆ ಎನ್ನುವುದರಲ್ಲಿ ಅನುಮಾನವಿಲ್ಲ. 2000ನೇ ವರ್ಷಕ್ಕೆ ನಿಗದಿಪಡಿಸಿದ ಗುರಿಯನ್ನು ಪಶ್ಚಿಮ ಬಂಗಾಳ ಪೂರೈಸಿರುವುದು ಮಾತ್ರವೇ ಅಲ್ಲ ಅದನ್ನು ಮೀರಿ ಮುನ್ನಡೆದಿದೆ ಎಂದು ಕೇಂದ್ರ ಸರಕಾರದ ವರದಿ ತಿಳಿಸಿದೆ. (ನಿಗದಿಪಡಿಸಿದ ಗುರಿಗಳು: ಜನನ ನಿಯಂತ್ರಣ ದರ - 21/1000, ಮರಣಪ್ರಮಾಣ 9/1000 ಹಾಗೂ ಶಿಶು ಮರಣ - 60/1000)


ಜನರ ಕೈಗೆ ಅಧಿಕಾರ
ಸರ್ವಮಾನ್ಯ ಪಂಚಾಯತ್ ರಾಜ್ ವ್ಯವಸ್ಥೆ

ಅಧಿಕಾರ ವಿಕೇಂದ್ರೀಕರಣ

ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತವಿದ್ದಾಗ ದೊಡ್ಡ ಬಲಿಪಶು ಆಗಿದ್ದು ಪ್ರಜಾಪ್ರಭುತ್ವ. ನಾವು ಅದನ್ನು ಮರಳಿ ಸ್ಥಾಪಿಸಿದವು ಮಾತ್ರವಲ್ಲದೇ ತಳಮಟ್ಟಕ್ಕೆ ಕೊಂಡೊಯ್ದೆವು. ಮೂರು ಹಂತದ ಪಂಚಾಯತ ವ್ಯವಸ್ಥೆ ಜಾರಿಗೆ ಬಂತು. ಅದು ಜನಮನದಲ್ಲಿ ಅಚ್ಚಳಿಯದ ಪ್ರಭಾವ ಬೀರಿತು. ಹಣಕಾಸು ಹಾಗೂ ಶಾಸಕಾಂಗ ಬೆಂಬಲದೊಂದಿಗೆ ಸನ್ನದ್ಧವಾಗಿರುವ ಪಂಚಾಯತ ಸಂಸ್ಥೆಗಳು ರಾಜ್ಯ ಸರಕಾರದ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿವೆ. ಬಜೆಟ್‌ನ ಶೇಕಡ 50ರಷ್ಟು ಹಣವನ್ನು ಪಂಚಾಯತ್‌ಗಳ ಮೂಲಕ ಖರ್ಚು ಮಾಡಲಾಗುತ್ತಿದೆ. ಯೋಜನೆ ರೂಪಿಸುವುದರಿಂದ ಹಿಡಿದು ಅನುಷ್ಠಾನದವರೆಗೆ ಪಂಚಾಯತ್ ಸಂಸ್ಥೆಗಳು ಮುಂಚೂಣಿ ಪಾತ್ರ ನಿರ್ವಹಿಸುತ್ತವೆ. ತಳಮಟ್ಟದಲ್ಲಿ ಜನರು ಪಾಲ್ಗೊಳ್ಳುವಿಕೆಯ ಪ್ರಜಾಪ್ರಭುತ್ವದ ಅಪೂರ್ವ ಮಾದರಿಯನ್ನು ಇಡೀ ದೇಶಕ್ಕೆ ಇದು ಹಾಕಿಕೊಟ್ಟಿದೆ. ಎಡರಂಗ ಸರಕಾರಕ್ಕೆ ಮಸಿಬಳಿಯಲು ಸದಾ ತುದಿಗಾಲ ಮೇಲೆ ನಿಲ್ಲುತ್ತಿದ್ದ ದಿವಂಗತ ಪ್ರಧಾನಿ ರಾಜೀವ್‌ಗಾಂಧಿ ಅವರೇ ಪಶ್ಚಿಮ ಬಂಗಾಳದ ಪಂಚಾಯತ ವ್ಯವಸ್ಥೆಯನ್ನು ಕೊಂಡಾಡಿದ್ದಾರೆ.

ಇದಕ್ಕೂ ಮುಂಚೆ ರಾಜ್ಯದಲ್ಲಿ ಪಂಚಾಯತ್ ಚುನಾವಣೆಗಳು ಇರಲಿಲ್ಲ. ಸತತ 17 ವರ್ಷ ಮುನ್ಸಿಪಲ್ ಚುನಾವಣೆಗಳು ನಡೆಯಲಿಲ್ಲ. ರಾಜ್ಯ ಶಾಸನಸಭೆ, ಪಂಚಾಯತ್‌ಗಳು, ಪುರಸಭೆಗಳು ಹಾಗೂ ಮಹಾನಗರಪಾಲಿಕೆಗಳಿಗೆ ನಿಯಮಿತವಾಗಿ ಚುನಾವಣೆ ನಡೆಸುವುದು- ಇದು ಆಡಳಿತಕ್ಕೆ ಬಂದಾಗಿನಿಂದಲೂ ಪ್ರಜಾಪ್ರಭುತ್ವೀಕರಣ ವಿಚಾರದಲ್ಲಿ ಎಡರಂಗ ಸರಕಾರ ಅನುಸರಿಸಿಕೊಂಡು ಬಂದ ಧೋರಣೆಯಾಗಿದೆ.

ಚುನಾವಣೆಗಳು ಮುಂದಿರುವ ದೊಡ್ಡ ಸವಾಲುಗಳನ್ನು ಎದುರಿಸುವತ್ತ ಜನರ ಪ್ರಜ್ಞೆಯನ್ನು ಎತ್ತರಿಸುವ ದಿಸೆಯಲ್ಲಿ ಇನ್ನಷ್ಟು ಬೃಹತ್ ಆಂದೋಲನಗಳ ಭಾಗ ಎಂಬುದು ಎಡರಂಗದ ದೃಢ ನಂಬಿಕೆ.

ಕೋಮುಸೌಹಾರ್ದ

ರಾಜ್ಯದ ಜನಸಂಖ್ಯೆ ಶೇಕಡ 25ರಷ್ಟು ಮುಸ್ಲಿಮರಿರುವ ಪಶ್ಚಿಮ ಬಂಗಾಳ ಎಡರಂಗ ಸರಕಾರದ 25 ವರ್ಷಗಳ ಆಳ್ವಿಕೆಯಲ್ಲಿ ಕೋಮುಸೌಹಾರ್ದವನ್ನು ಕಾಪಾಡಿಕೊಂಡು ಬಂದ ಉಜ್ವಲ ದಾಖಲೆ ಹೊಂದಿದೆ. ಬಿಜೆಪಿಯಂಥ ಅತ್ಯಂತ ಕೋಮುವಾದಿ ಪಕ್ಷದ ನೇತೃತ್ವದ ಸರಕಾರವೊಂದು ಕೇಂದ್ರದಲ್ಲಿದ್ದು ನಮ್ಮ ರಾಜ್ಯ ಸಹಿತ ಅಲ್ಲಲ್ಲಿ ಎಲ್ಲಾ ಕಡೆ ಕೋಮುಗಲಭೆಗಳನ್ನು ಹುಟ್ಟುಹಾಕುವ ಪ್ರಯತ್ನಗಳನ್ನು ಅಲ್ಲಗಳೆಯಲು ಆಗದು. ಈ ಅತ್ಯಂತ ಅನಾಗರೀಕ ಹಾಗೂ ಬರ್ಬರ ಪಕ್ಷ ಯಾವ ಮಟ್ಟಕ್ಕೆ ಇಳಿದೀತು ಎನ್ನುವುದಕ್ಕೆ ಭಾರತದ ಸ್ವಾತಂತ್ರ್ಯದ 53 ವರ್ಷಗಳ ನಂತರ ಗುಜರಾತಿನಲ್ಲಿ ಏನು ನಡೆಯಿತು ಎನ್ನುವುದೇ ಸಾಕ್ಷಿಯಾಗಿದೆ. ತಿಂಗಳುಗಟ್ಟಲೇ ಕಾಲ ನಡೆದ ಮುಸ್ಲಿಂ ಅಲ್ಪಸಂಖ್ಯಾತರ ನರಮೇಧ, ಅದರ ಸೂತ್ರಧಾರ ಗುಜರಾತ್ ಸರಕಾರ ಹಾಗೂ ಮುಖ್ಯಮಂತ್ರಿ ನರೇಂದ್ರಮೋದಿಯನ್ನು ಪ್ರಧಾನಿ ವಾಜಪೇಯಿ ಹಾಗೂ ಅವರ ಸರಕಾರದ ಸಹದ್ಯೋಗಿಗಳು ನಾಚಿಕೆಯಿಲ್ಲದೆ ಬೆಂಬಲಿಸಿದವು. ರಾಜ್ಯದಲ್ಲಿ ನಾವು ಕೋಮುವಾದಿ ಸಂಘಟನೆಗಳ ಬಗ್ಗೆ ಸದಾ ಎಚ್ಚರದಿಂದ ಇರಬೇಕು. ಜನರನ್ನು ಒಡೆಯುವ ಯಾವುದೇ ಪ್ರಯತ್ನವನ್ನು ಮೊಳಕೆಯಲ್ಲೇ ಚಿವುಟಿ ಹಾಕಬೇಕು.

ಕೇಂದ್ರ- ರಾಜ್ಯ ಸಂಬಂಧ

ನಮಗಿದು ಯಾವಾಗಲೂ ಕಾಳಜಿಯ ವಿಷಯವಾಗಿದೆ. ನಿಧಿಯನ್ನು ಸಂಗ್ರಹಿಸುವ ಅಪಾರ ಅಧಿಕಾರ ಕೇಂದ್ರ ಸರಕಾರಕ್ಕೆ ಇದೆ. ಅದರ ಒಂದು ಭಾಗವನ್ನು ಶೇಕಡ 12 ಬಡ್ಡಿಯೊಂದಿಗೆ ರಾಜ್ಯ ಸರಕಾರಗಳಿಗೆ ನೀಡಲಾಗುತ್ತದೆ. ಈ ಇಡೀ ಪ್ರಕ್ರಿಯೆಯನ್ನು ಪರಿಶೀಲಿಸಬೇಕು ಹಾಗೂ ಕೇಂದ್ರ ಸರಕಾರ ವಿಧಿಸುವ ಬಡ್ಡಿದರವನ್ನು ಇಳಿಸಬೇಕು ಎಂದು ನಾವು ಒತ್ತಾಯಿಸಿದ್ದೇವೆ.

ನಮ್ಮ ಒತ್ತಡದ ಮೇರೆಗೆ ಇಂದಿರಾಗಾಂಧಿ ರಚಿಸಿದ್ದ ಸರ್ಕಾರಿಯಾ ಆಯೋಗದ ಕೆಲವು ಶಿಫಾರಸುಗಳು ರಾಜ್ಯ ಸರಕಾರಗಳಿಗೆ ಸ್ವಲ್ಪ ನೆರವಾಗಲಿದ್ದವು. ಆದರೆ ಅವುಗಳನ್ನು ಅನುಷ್ಠಾನಗೊಳಿಸಿಲ್ಲ. ರಾಜ್ಯಗಳ ಹಿತದೃಷ್ಟಿಯಿಂದ ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನರ್‌ರಚಿಸಬೇಕೆಂಬ ನಮ್ಮ ಬೇಡಿಕೆಗೆ ಅನೇಕ ರಾಜ್ಯ ಸರ್ಕಾರಗಳು ನಮ್ಮ ಜತೆಗೂಡಿರುವುದು ಸಂತೋಷದ ಸಂಗತಿ.

ಜನರೇ ನಮ್ಮ ಶಕ್ತಿ

ಕಳೆದ 25 ವರ್ಷಗಳಲ್ಲಿ ನಾವು ಮಾಡಿದ ಕೆಲಸಗಳ ಬಗ್ಗೆ ನಮಗೆ ಹೆಮ್ಮೆಯಿದೆ. ನಾನಾ ಕ್ಷೇತ್ರಗಳಲ್ಲಿ ನಮ್ಮ ಯಶಸ್ಸು ಮನಮುಟ್ಟುವಂಥದ್ದು. ಆದರೆ ನಮ್ಮ ಬೆನ್ನನ್ನು ನಾವೇ ತಟ್ಟಿಕೊಂಡು ಸುಮ್ಮನೆ ಕುಳಿತುಕೊಳ್ಳಲಾಗದು. ನಾವು ಸಾಗಬೇಕಾದ ಹಾದಿ ಇನ್ನೂ ದೀರ್ಘವಿದೆ. ಭವಿಷ್ಯ ತುಂಬಾ ಸಂಕೀರ್ಣ ಹಾಗೂ ಕಠಿಣ ಆಗಲಿದೆ. ಸಾಂವಿಧಾನಿಕ ಅಡ್ಡಿ ಆತಂಕಗಳು, ಸಹಕರಿಸದ ಕೇಂದ್ರ ಸರಕಾರ ಮತ್ತು ವಿರೋಧಿ ಮಾಧ್ಯಮ ಈಗಾಗಲೇ ಇವೆ. ಇಡೀ ದೇಶ ಗಂಭೀರ ಆರ್ಥಿಕ ಬಿಕ್ಕಟ್ಟಿನಲ್ಲಿ ಮುಳುಗಿದೆ. ಪರಿಹಾರದ ಬೆಳ್ಳಿರೇಖೆ ಇನ್ನೂ ಗೋಚರಿಸಿಲ್ಲ. ಐಎಂಎಫ್, ವಿಶ್ವಬ್ಯಾಂಕ್ ಮತ್ತು ಡಬ್ಲ್ಯುಟಿಒ ನಿರ್ದೇಶಿತ ನೀತಿಗಳು ನಮ್ಮ ದೇಶದ ಮೇಲೆ ಬೀರುತ್ತಿರುವ ಅಘಾತಕಾರಿ ಪರಿಣಾಮಗಳು ಎದ್ದು ಕಾಣುವಂತಿವೆ. ನಮ್ಮ ದೇಶದ ಕೈಗಾರಿಕೆ ಮತ್ತು ಕೃಷಿ ತೀವ್ರ ಹಿಂಜರಿತ ಅನುಭವಿಸುತ್ತಿವೆ. ಈ ಅನಾಹುತಕಾರಿ ರಾಷ್ಟ್ರ ವಿರೋಧಿ ನೀತಿಗಳಿಗೆ ಎದುರಾಗಿ ಇತರ ದೇಶಪ್ರೇಮಿ ಶಕ್ತಿಗಳನ್ನು ಸೇರಿಸಿಕೊಂಡು ಸಾಮೂಹಿಕ ಆಂದೋಲನವನ್ನು ನಾವು ರೂಪಿಸಲೇಬೇಕು. ಅದೇ ಹೊತ್ತಿಗೆ, ತುಂಬಾ ಸಂಕೀರ್ಣ ಸನ್ನಿವೇಶದಲ್ಲಿ ರಾಜ್ಯದ ಜನರ ಕಲ್ಯಾಣಕ್ಕಾಗಿ ನಮ್ಮ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಲು ಕಾರ್ಯಪ್ರವೃತ್ತರಾಗಬೇಕು.

ನಮ್ಮ ಜನರೇ ನಮ್ಮ ಶಕ್ತಿ. ಜನರ ಕಷ್ಟಸುಖದಲ್ಲಿ ನಾವು ಭಾಗಿಯಾಗುವವರೆಗೂ ಎಂಥದ್ದೇ ಸನ್ನಿವೇಶ ಬಂದರೂ ಅದನ್ನು ಎದುರಿಸಲು ನಾವು ಹೆದರುವುದಿಲ್ಲ. ನಾವು ನಮ್ಮ ಯಶಸ್ಸುಗಳು ಹಾಗೂ ವೈಫಲ್ಯಗಳಿಂದ ಪಾಠ ಕಲಿಯಬೇಕು. ಜನರೊಂದಿಗೆ ಜೀವಂತ ಸಂಪರ್ಕ ಸಾಧಿಸಲು ನಾವು ಪ್ರಯತ್ನಿಸಬೇಕು. ಸ್ವಯಂಟೀಕೆಗೆ ನಾವು ಹಿಂಜರಿಯಬಾರದು. ಜನಸಮೂಹದಲ್ಲಿ ನಮ್ಮ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳಲು ಅದು ಪರಿಣಾಮಕಾರಿ ಮಾರ್ಗ. ಎಷ್ಟೇ ಆದರೂ, ಹಲವು ಬಿಕ್ಕಟ್ಟಿನ ಪರಿಸ್ಥಿತಿಗಳಲ್ಲಿ ಎಡರಂಗವನ್ನು ಪಾರು ಮಾಡಿದ್ದು ಜನರೇ ತಾನೆ. ಜನರು ಕಾರ್ಯಪ್ರವೃತ್ತರಾಗಬೇಕು. ಕೆಲವು ವೇಳೆ ತಾತ್ಕಾಲಿಕವಾಗಿ ಹಾದಿ ತಪ್ಪುವುದಾದರೂ ಜನರೇ ಇತಿಹಾಸದ ಸೃಷ್ಟಿಕರ್ತರು. ಭಾರತದಲ್ಲಿ ಕೂಡ, ಸ್ವಾತಂತ್ರ್ಯಕ್ಕೆ ಮುನ್ನ ಹಾಗೂ ನಂತರ, ಜನರು ಇತಿಹಾಸ ಸೃಷ್ಟಿಸಿದ್ದಾರೆ. ಅವರು ಕೇಂದ್ರದಲ್ಲಿ ಪರ್ಯಾಯ ಸರಕಾರಗಳನ್ನು ರಚಿಸಿದ್ದಾರೆ. ಆದರೆ ಇದರಲ್ಲಿ ನಿರಂತರತೆ ಇಲ್ಲ. ಜನಸಾಮಾನ್ಯರ ಅಸಂಖ್ಯಾತ ಹೋರಾಟಗಳು ನಡೆದಿದೆ. ಆದರ ಅನೇಕ ಕ್ಷೇತ್ರಗಳಲ್ಲಿ ದೌರ್ಬಲ್ಯಗಳು ಇನ್ನೂ ಇವೆ. ಕೇಂದ್ರದಲ್ಲಿ ಆಡಳಿತ ನಡೆಸಿದವರು ಅನೈತಿಕತೆ, ಸಮಯಸಾಧಕತನ ಮೆರೆದಿದ್ದಾರೆ ಮತ್ತು ಜನರಿಗೆ ಅವಮಾನ ಮಾಡಿದ್ದಾರೆ. ದೆಹಲಿಯ ಹಿಂದಿನ ಹಾಗೂ ಇಂದಿನ ಆಳರಸರಿಗೆ ಜನರು ಸವಾಲೆಸೆಯದೇ ಇರಲಾರರು. ಅಂತಿಮವಾಗಿ, ಕೊನೆಯ ಮಾತು ಜನರಿಗೇ ಸೇರಿದ್ದು.

ಕನ್ನಡಕ್ಕೆ : ವಿಶ್ವ ಕುಂದಾಪುರ

ನೆಲ ಕಚ್ಚಿದ ಬಿಜೆಪಿ.....

ಪುಟ 3 ರಿಂದ

ಹೊರೆಯನ್ನು ಜನರ ತಲೆಗೆ ಹೇರಲು ಕಾಂಗ್ರೆಸ್‌ಸರ್ಕಾರ ತರಾತುರಿಯಲ್ಲಿ ಸಿದ್ದಗೊಳ್ಳತೊಡಗಿತು. ಕನಿಷ್ಟ ಜನತೆಯು ಸಮಸ್ಯೆಗಳ ಹೊರೆಯಿಂದ ತತ್ತರಿಸುತ್ತಿರು ವಾಗ ಈ ಧಾಳಿಯನ್ನು ತಡೆದು, ರಕ್ಷಿಸಲು ಮುಂದಾಗಬೇಕಿತ್ತು. ಬದಲಾಗಿ ಇದಕ್ಕೆ ಕಾದಿದ್ದರೋ ಎಂಬಂತೆ ಬಸ್ ಪ್ರಯಾಣ ದರಗಳನ್ನು ಹೆಚ್ಚಿಸಿ, ಲಾಭ ನಷ್ಟದ ಲೆಕ್ಕಾಚಾರ ಮಂಡಿಸಿ, ಮುಂದಿನ ವರುಷದಲ್ಲಿ ನೂರಾರು ಕೋಟಿ ಲಾಭ ಮಾಡುವ ಯೋಜನೆಯನ್ನು ಸಚಿವ ಸಗೀರ್ ಅಹ್ಮದ್ ಪ್ರಕಟಿಸಿದ್ದು ಬೆಂದ ಮನೆಯ ಗಳ ಹಿರಿಯುವ ಬೇಜವಾಬ್ದಾರಿತನದ್ದು. ಕೇಂದ್ರದ ಎನ್‌ಡಿಎ ಸರ್ಕಾರಕ್ಕೆ ತಾವೇ ಪರ್ಯಾಯವೆಂದು ದೇಶಾದ್ಯಂತ ಡಂಗುರ ಹೊಡೆಯುವ ಈ ಕಾಂಗ್ರೆಸ್ಸಿಗರು ತಾವು ಹೇಗೆ ಬಿನ್ನವೆಂಬುದನ್ನು ತೋರಿಸಬೇಕಿತ್ತು, ಪ್ರತಿಭಟಿಸಬೇಕಿತ್ತು. ಹಾಗಾಗದೆ ಇರಲು ಬಿಜೆಪಿಯ ಆರ್ಥಿಕ (ಎಲ್‌ಪಿಜಿ) ನೀತಿಗೂ ತಮ್ಮ ಸಹಮತಿ ಇದೆ ಎಂದು ಮತ್ತೆ ಸಾಬೀತು ಮಾಡಿದ್ದಾರೆ. ಜನರನ್ನು ಸುಲಿಯುವ, ಹೊರೆ ಹೇರಲು ಮುಂದಾಗಿರುವ ಇವರು ಇದನ್ನೇ 'ರಾಷ್ಟ್ರೀಯ ಸಹಮತ (ವಿಶ್ವ ಬ್ಯಾಂಕ್ ನೀತಿ ಜಾರಿಗೊಳಿಸಲು) ವೆಂದು ಕರೆದುಕೊಳ್ಳುತ್ತಾರೋ? ಕೇವಲ ಕೋಮುವಾದದ ಭೂತ ತೋರಿಸಿ ಅಧಿಕಾರಕ್ಕೆ ಬರುವ ಕಾಂಗ್ರೆಸ್‌ನ ದುರಾಡಳಿತ ಅರ್ಥವಾಗು ವಂತಹದ್ದು. ಬಿಜೆಪಿ-ಕಾಂಗ್ರೆಸ್ ಸರ್ಕಾರಗಳು ಈ ಧಾಳಿ ವಿರುದ್ಧ ಎಲ್ಲರೂ ಪ್ರತಿಭಟಿಸಬೇಕಿದೆ.

ಹಿಂದುತ್ವವನ್ನು ದೇಶದೆಲ್ಲೆಡೆ ಹರಡಿ ಜನತೆಯ ನಿಜವಾದ ಸಮಸ್ಯೆಗಳನ್ನು ಮರೆಮಾಚುವ ಹುನ್ನಾರ ನಡೆಸುತ್ತಿರುವ ಸಂಘ ಪರಿವಾರ ತನ್ನ ಸಿದ್ಧಾಂತಕ್ಕೆ ಬುನಾದಿ ಹಾಕಿದ ವಿ.ಡಿ. ಸಾವರ್ಕರನನ್ನು ಹೆಗಲಮೇಲೆ ಹೊತ್ತುಕೊಂಡು ಮೆರೆದಾಡುತ್ತಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಸಾವರ್ಕರ್, ಹತ್ತಾರು ಕ್ರಾಂತಿಕಾರಿಗಳ ಸಮರ್ಥ್ಯವನ್ನು ಮೇಳೈಸಿಕೊಂಡಿದ್ದ ವ್ಯಕ್ತಿ ಎಂದು ಹಾಡಿ ಹೊಗಳುತ್ತಿದೆ. ಆದರೆ ಸರ್ವಧರ್ಮ ಸಮನ್ವಯ ಕೋಮುಸೌಹಾರ್ದ ಸಾರಿದ ಮಹಾತ್ಮಾಗಾಂಧಿ ಮೇಲೆಯೇ ವೈಷಮ್ಯದ ಮಾತುಗಳನ್ನು ಕಾರಿದ ಈ ಸಾವರ್ಕರ್ ತನ್ನನ್ನು ಸೆರೆಮನೆಯಿಂದ ಬಿಡುಗಡೆ ಮಾಡುವಂತೆ ಬ್ರಿಟಿಷ್ ಆಳರಸರನ್ನು ದೈನೇಶಿಯಂತೆ ಬೇಡಿದ ಗುಲಾಮಿ ಮನೋಭಾವವನ್ನು ಇಲ್ಲಿ ವಿವರಿಸಿದ್ದಾರೆ.

ಸಾವರ್ಕರ್ ವೀರನೋ.... ರಣಹೇಡಿಯೋ...

ಸಾವರಿಸಿಕೊಂಡು ಹೇಳಿ ಮನುಷ್ಯವಿರೋಧಿ ಮನುವಾದಿಗಳೇ

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಅವಧಿಯ ಎರಡು ಸನ್ನಿವೇಶಗಳು.

ದೃಶ್ಯ1 : ಬ್ರಿಟಿಷರ ವಿರುದ್ಧ ಸಮರ ಸಾರಿದ ಯುವಕನೊಬ್ಬ ವಸಾಹತುಶಾಹಿಗಳ ಪೊಲೀಸರ ಕೈಗೆ ಸಿಕ್ಕಿ ಹಾಕಿಕೊಳ್ಳುತ್ತಾನೆ 1910 ಮಾರ್ಚ್ 13 ರಂದು. ಅದೇ ವರ್ಷ ಜುಲೈ ಒಂದರಂದು ಆತನನ್ನು ಮುಂಬಯಿಗೆ ಕರೆ ತರಲು ಪೊಲೀಸರು ಹಡಗಿನಲ್ಲಿ ಕೂರಿಸಿಕೊಂಡು ಬರುತ್ತಾರೆ. ಮಾರ್ಗಮಧ್ಯದಲ್ಲಿ ಹಡಗು ಮರ್‌ಸೇಯ್ಲ್ಸ್ ಬಂದರಿನಲ್ಲಿ ಲಂಗರು ಹಾಕುವ ಸಮಯದಲ್ಲಿ ಈ ಯುವಕ ತಪ್ಪಿಸಿಕೊಂಡು ಸಮುದ್ರಕ್ಕೆ ಹಾರಿ ಪರಾರಿಯಾಗಲು ಯತ್ನಿಸುತ್ತಾನೆ. ಆದರೆ ಆತನ ಈ ಸಾಹಸ ಫಲಿಸುವುದಿಲ್ಲ. ಫ್ರೆಂಚ್ ಪೋಲೀಸರ ನೆರವಿನಿಂದ ಬ್ರಿಟಿಷರು ಆತನನ್ನು ಮತ್ತೆ ಹಿಡಿಯುತ್ತಾರೆ.

ಈ ಯುವಕನ ಈ ಸಾಹಸ ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದ ಸಂದರ್ಭದಲ್ಲಿ ರೋಮಾಂಚನಕಾರಿಯಾಗಿ ವರ್ಣನೆಗೊಂಡಿದೆ.

ದೃಶ್ಯ2. ನನ್ನನ್ನು ಬಂಧನದಿಂದ ಬಿಡುಗಡೆ ಮಾಡಿದರೆ ಬ್ರಿಟಿಷ್ ಸಾಮ್ರಾಜ್ಯದ ದಾಸಾನುದಾಸನಾಗಿ ನಾನು ಬಾಳುತ್ತೇನೆ...... ನಾನು ಯಾವ ಹುದ್ದೆಯಲ್ಲಾದರೂ ಸರಕಾರಕ್ಕೆ ಸೇವೆ ಸಲ್ಲಿಸಲು ಸಿದ್ಧ........ ಬ್ರಿಟಿಷ್ ಸಾಮ್ರಾಜ್ಞೆ ಕೃಪೆತೋರಿ ನನ್ನನ್ನು ಬಂಧಮುಕ್ತಗೊಳಿಸಿದರೆ ಭಾರತದ ಈ ಪುತ್ರ ಸರಕಾರದ ಬಾಗಿಲು



ಬಡಿಯದೆ ಇನ್ನೆಲ್ಲಿಗೆ ತಾನೆ ಹೋಗಲು ಸಾಧ್ಯ.

ಹೌದು, ಓದುಗ ಬಂಧುಗಳೆ, ನಿಮ್ಮ ಊಹೆ ಸರಿಯಾದುದು, ಇದು ದಯಾ ಭಿಕ್ಷೆ ಕೋರಿ ಬ್ರಿಟಿಷ್ ಸರಕಾರಕ್ಕೆ ಬರೆದ ಪತ್ರದ ಸಾರಾಂಶ.

ಮೊದಲ ದೃಶ್ಯದಲ್ಲಿ ವರ್ಣಿಸಿದ ಸಾಹಸ ಕೃತ್ಯಕ್ಕೂ ಸಾಮ್ರಾಜ್ಯಶಾಹಿ ಸರಕಾರದ ಮುಂದೆ ಶರಣಾದ ಈ ಪ್ರಕರಣಕ್ಕೂ ಎಲ್ಲೆಲ್ಲಿಯೂ ಸಾಮ್ಯವಿಲ್ಲ. ಸಂಬಂಧವಿಲ್ಲ ಎಂದು ನೀವು ಹೇಳಬಹುದು. ಸಾಮ್ಯವಿರದು ಎಂಬುದು ಖಂಡಿತಕ್ಕೂ ನಿಜ. ಆದರೆ ಸಂಬಂಧವಿಲ್ಲ ಎನ್ನುವುದು ಮಾತ್ರ ಸರಿಯಲ್ಲ.

ಯಾಕೆಂದರೆ...

ಬ್ರಿಟಿಷರ ಎದೆಯಲ್ಲಿ ನಡುಕ ಹುಟ್ಟಿಸಿದ ಹಾಗೂ ಆನಂತರ, ದತ್ತಯ್ಯ - ದಮ್ಮಯ್ಯ ನನ್ನನ್ನು ಬಿಟ್ಟು ಬಿಡಿ ಎಂದು ಕೋರಿದ ಈ ಎರಡು ದೃಶ್ಯಗಳ ಪಾತ್ರಧಾರಿ ಒಬ್ಬನೇ.... ಆತನೇ ವಿನಾಯಕ ದಾಮೋದರ ಸಾವರ್ಕರ್ ಸಂಕ್ಷಿಪ್ತವಾಗಿ ವಿ.ಡಿ. ಸಾವರ್ಕರ್.

ವೀರ ಸಾವರ್ಕರ್ ಎಂದೇ ಇವರನ್ನು ಕರೆಯಲಾಗುತ್ತದೆ. ಆದರೆ ಈ 'ವೀರ' ವಿಶೇಷಣಕ್ಕೆ ಸಾವರ್ಕರ ಅರ್ಹ ಅಲ್ಲ ಎಂಬುದು ಅವರ ಜೀವನದ ಅನೇಕ ಪ್ರಕರಣಗಳಿಂದ ತಿಳಿದು ಬರುತ್ತದೆ. ಅದರಲ್ಲಿ ಅತಿ ಮುಖ್ಯವಾದುದು ತನ್ನನ್ನು ಬಂಧನದಿಂದ ಬಿಡುಗಡೆ ಮಾಡಬೇಕೆಂದು ಕೋರಿ ಬ್ರಿಟಿಷ್ ಸರಕಾರಕ್ಕೆ ಸಲ್ಲಿಸಿದ್ದ ದಯಾಭಿಕ್ಷೆ ಅರ್ಜಿ.

1883 ಮೇ 28 ರಂದು ಮಹಾರಾಷ್ಟ್ರದಲ್ಲಿ ಜನಿಸಿದ ವಿ.ಡಿ. ಸಾವರ್ಕರ್ ಬ್ಯಾರಿಸ್ಟರ್ ಆಗಲೆಂದು 1906ರಲ್ಲಿ ಲಂಡನ್‌ಗೆ ತೆರಳಿದರು. ಅಲ್ಲಿ ಅವರು ಕಾನೂನು ಪಾಂಡಿತ್ಯ ಪಡೆಯುವುದಕ್ಕೆ ಬದಲು ಭಾರತದಲ್ಲಿನ ಬ್ರಿಟಿಷ್ ಆಡಳಿತವನ್ನು ಕಿತ್ತೆಸೆಯುವುದಕ್ಕೆ ಆದ್ಯ ಗಮನಕೊಡುತ್ತಾರೆ. 'ಫ್ರೀ ಇಂಡಿಯಾ ಸೊಸೈಟಿ' ಆ ಛಲದ ಫಲ. ಬ್ರಿಟಿಷ ವಿರೋಧಿ ಚಟುವಟಿಕೆಗಳ ಕಾರಣಕ್ಕಾಗಿ ಅವರಿಗೆ ಬ್ಯಾರಿಸ್ಟರ್ ಪದವಿಯೂ ಸಿಗುವುದಿಲ್ಲ. ಆ ಮಟ್ಟಿಗೆ ಅವರ ದೇಶಪ್ರೇಮ-ದೃಢತೆ ಪ್ರಶ್ನಾತೀತವೇ. ಆದರೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದಕ್ಕಾಗಿ ಬ್ರಿಟಿಷರಿಂದ ಸೆರೆವಾಸದ ಶಿಕ್ಷೆಗೆ ಒಳಗಾದ ಸಾವರ್ಕರ್, ಬಹುಶಃ ಅಂಡಮಾನ್‌ನ ಸೆಲ್ಯುಲಾರ್ ಜೈಲಿನಲ್ಲಿನ ಕಷ್ಟವನ್ನು ತಾಳಲಾರದೆ,



ತನ್ನನ್ನು ಸೆರೆವಾಸದಿಂದ ಮುಕ್ತಗೊಳಿಸುವಂತೆ ಕೋರಿ ಸರಕಾರಕ್ಕೆ ಮನವಿ ಸಲ್ಲಿಸಿದ್ದು 'ಅಪ್ರತಿಮ ಹೋರಾಟಗಾರ' ಎಂದು ಹೇಳಿಸಿಕೊಳ್ಳುವ ವ್ಯಕ್ತಿಯೊಬ್ಬರ ಘನತೆಗೆ ತಕ್ಕುದಾದ ಕ್ರಮವಲ್ಲ ಎಂಬುದು ಕೂಡ ಅಷ್ಟೇ ಮುಖ್ಯ.

ಸಾವರ್ಕರ್, ಕ್ರಾಂತಿಕಾರಿಗಳಾದ ಭಗತ್‌ಸಿಂಗ್, ಚಂದ್ರಶೇಖರ ಆಜಾದ್, ರಾಜಗುರು, ಅಶ್ಫಾಕ್‌ಉಲ್ಲಾ, ಮುಂತಾದವರಷ್ಟೇ ಪ್ರಮುಖ ಸ್ವಾತಂತ್ರ್ಯ ಸೇನಾನಿ ಎಂದು ಇದುವರೆಗೆ ಬಿಂಬಿಸುತ್ತಾ ಬಂದಿರುವುದು ಒಂದು ಐತಿಹಾಸಿಕ ಪ್ರಮಾದ ಎಂಬುದು ಈಗ ಅರಿವಿಗೆ ಬರುತ್ತಿದೆ. ಮಹತ್ವದ ದಾಖಲೆ ಪತ್ರವೊಂದು ಸಾವರ್ಕರ್

ಪುಟ 10 ಕ್ಕೆ

ಫ್ಯಾಸಿಸ್ಟ್ ಹಲ್ಲೆಗೆ ಜಗ್ಗೆವು

ವಿ.ಡಿ.ಸಾವರ್ಕರ್ ಬಗ್ಗೆ ಇತ್ತೀಚೆಗೆ ಲೋಕಸಭೆಯಲ್ಲಿ ಟಿಪ್ಪಣಿ ಮಾಡಿದ ಸಿಪಿಐ(ಎಂ) ಉಪನಾಯಕ ಕಾ.ವಸುದೇವ ಆಚಾರ್ಯರ ಅಧಿಕೃತ ನಿವಾಸದ ಮೇಲೆ ಆರೆಸ್ಸೆಸ್ ಮತ್ತು ಬಿಜೆಪಿ ಕಾರ್ಯಕರ್ತರು ಹಲ್ಲೆ ನಡೆಸಿದರು. ಫ್ಯಾಸಿಸ್ಟರು 'ಸತ್ಯದ ಶತ್ರುಗಳು' ಎನ್ನುವುದನ್ನು ಸಾಬೀತುಪಡಿಸಿದರು.

ಇಂಥ ಆಕ್ರಮಣಗಳಿಂದ ಐತಿಹಾಸಿಕ ಸತ್ಯ ಹೇಳುವುದರಿಂದ ಮಾರ್ಕ್ಸ್‌ವಾದಿಗಳನ್ನು ಪಡೆಯಲು ಆಗುವುದಿಲ್ಲ ಎಂಬುದು ನೆನಪಿರಲಿ.

ತಂದೆಯನ್ನೇ ಖಂಡಿಸಿದ್ದ ಭಗತ್‌ಸಿಂಗ್

ಸಾವರ್ಕರ್‌ರನ್ನು ಭಗತ್‌ಸಿಂಗ್ ಮುಂತಾದ ಕ್ರಾಂತಿಕಾರಿಗಳಿಗೆ ಹೋಲಿಸುತ್ತಾರೆ ಕೇಸರಿ ಪಡೆಯವರು. ಆದರೆ 23ರ ಪೌರುಷ್ಯದಲ್ಲೇ ಬ್ರಿಟೀಷರ ನೇಣಿಗೆ ಕೊರಳೊಡ್ಡಿ ಕ್ರಾಂತಿಕಾರಿ ಪರಂಪರೆಯಲ್ಲಿ ಧ್ರುವನಕ್ಷತ್ರವಾಗಿ ಮಿನುಗುತ್ತಿರುವ ಧೀರ ಭಗತ್‌ಸಿಂಗ್ ಎಲ್ಲಿ? ಅದೇ ಬ್ರಿಟೀಷರಲ್ಲಿ ದಯಾಭಿಕ್ಷೆ ಬೇಡಿದ ಹೇಡಿ ಸಾವರ್ಕರ್ ಎಲ್ಲಿ?

ಸಾವರ್ಕರ್‌ಗ ಶಿಕ್ಷೆ ವಿಧಿಸಿದ ಲಾಗಾಯ್ತಿನಿಂದಲೂ ಸ್ವತಃ ಸಾವರ್ಕರ್ ಅಲ್ಲದೆ ಅವರ ಕುಟುಂಬ ವರ್ಗದವರೂ ಆಳದಾಸರಲ್ಲಿ ಕೈಯೊಡ್ಡಿ ಈತನಿಗೆ ದಯಾಭಿಕ್ಷೆ ಕೊಡುತ್ತಲೇ ಇದ್ದರು.

ಭಗತ್ ಸಿಂಗ್ ಬಿಡುಗಡೆಗೆ ದೇಶಾದ್ಯಂತ ಪ್ರಕ್ಷೋಭೆ ನಡೆದಿತ್ತೇ ಹೊರತು ಈ ತರುಣ ಕ್ರಾಂತಿಕಾರಿ ದಯಾಭಿಕ್ಷೆಯ ಅರ್ಜಿ ಗುಜರಾಯಿಸಿ ರಲಿಲ್ಲ. ವಾಸ್ತವವಾಗಿ, ಶಿಕ್ಷೆ ತಗ್ಗಿಸಲು ಕೋರಿ ಮನವಿ ಸಲ್ಲಿಸಬಹುದು ಎಂದು ತಂದೆ ತನ್ನ ಮಗನಿಗೆ ಸಲಹೆ ಮಾಡಿದಾಗ ತಂದೆಯನ್ನೇ ಖಂಡಿಸಿದ ವೀರ ಭಗತ್ ಸಿಂಗ್ ಎನ್ನುವುದನ್ನು ಬಿಡ್ಡಿ ವೀರರು ಅರಿಯಬೇಕು.

ಹಿಂದುತ್ವ ವಿಷಾನಿಲ ಫ್ಯಾಕ್ಟರಿಯ ಸ್ಥಾಪಕ

"ಸಾವರ್ಕರ್‌ಗೆ ಸ್ವಾತಂತ್ರ್ಯ ಹೋರಾಟಗಾರನಾಗಿ ಸಿಗಬೇಕಾದ ಸೂಕ್ತ ಸ್ಥಾನಮಾನ ಸಿಕ್ಕಿಲ್ಲ."

- ಗೃಹ ಸಚಿವ ಅಡ್ವಾಣಿಯವರ ಪ್ರಲಾಪ!

"ನನ್ನನ್ನು ಕ್ಷಮಿಸಿ' ಎಂದು ಸಾವರ್ಕರ್ ಯಾವತ್ತೂ ಕೇಳಿಯೇ ಇಲ್ಲವಪ್ಪಾ"

- ಗೋರಖ್‌ಪುರ ಲೋಕಸಭೆ ಕ್ಷೇತ್ರದ ಹಿಂದೂಮಹಾಸಭಾ ಸದಸ್ಯ ಮಹಂತ ಅವೈದ್ಯನಾಥರ ಪ್ರಲಾಪ!

ಬಹುಶ್ರುತ ಸಂಸ್ಕೃತಿಯ ವಿಶಾಲ ಭಾರತಕ್ಕೆ ಕೋಮುದ್ವೇಷದ ಕಿಚ್ಚು ಹಚ್ಚುತ್ತಿರುವ ಹಿಂದೂತ್ವ ಎಂಬ ವಿಷಾನಿಲ ಫ್ಯಾಕ್ಟರಿಯ ಮಾಲಿಕರು ಸಾವರ್ಕರ್ ಬಗ್ಗೆ ತೋರುತ್ತಿರುವ ಪ್ರೀತಿಯ ಹಿನ್ನೆಲೆ ಏನಿರಬಹುದು.

ಏನೆಂದರೆ, ವಿ.ಡಿ.ಸಾವರ್ಕರ್ ಹಿಂದೂತ್ವ ವಿಷಾನಿಲ ಕಾರ್ಖಾನೆಯ ಸಂಸ್ಥಾಪಕ!!

ಅಲ್ಪಸಂಖ್ಯಾತ- ಮುಸ್ಲಿಂ ವಿರೋಧಿ ದ್ವೇಷ ಪರಾಕಾಷ್ಠೆಗೇರಿ ಗುಜರಾತಿನಲ್ಲಿ ನರಮೇಧ ನಡೆದಿದೆ. ಹೃದಯವಂತರನ್ನು ತಲ್ಲಣಗೊಳಿಸಿದೆ. ಸಾವರ್ಕರ್ ಈ ಮುಸ್ಲಿಂ ವಿರೋಧಿ ಹಿಂದೂತ್ವ ಸಿದ್ಧಾಂತದ ಜನಕ ಎಂದೇ ಪರಿಗಣಿತರಾಗಿದ್ದಾರೆ. ಮತೀಯ ದ್ವೇಷವೇ ಬಂಡವಾಳವಾಗಿರುವ ಸಂಘಪರಿವಾರ ಕಂಪನಿಯ ಮೂಲವಾದ ಹಿಂದೂ ಮಹಾಸಭಾದ ಸಂಸ್ಥಾಪಕರಲ್ಲಿ ಒಬ್ಬ ಸಾವರ್ಕರ್ ಎನ್ನುವುದು ಗುಟ್ಟಿನ ವಿಚಾರವಲ್ಲ.

● ಸಾವರ್ಕರ್ ಬಿಡುಗಡೆಯಾಗುತ್ತಲೇ (ಆರೆಸ್ಸೆಸ್ ಸಂಸ್ಥಾಪಕ) ಡಾ.ಕೆ.ಬಿ ಹೆಡ್ಗೇವಾರ್ ರತ್ನಗಿರಿಗೆ ದೌಡಾಯಿಸಿ ಭೇಟಿ ಮಾಡಿದರು. ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಸ್ಥಾಪನೆಗೆ ಸಾವರ್ಕರರ ಹೃತ್ಪೂರ್ವಕ ಬೆಂಬಲ ಪಡೆದರು. 1925ರ ವಿಜಯದಶಮಿಯಂದು ಈ ರಾಷ್ಟ್ರೀಯ ಸರ್ವನಾಶಕ ಸಂಘ ಉದಯಿಸಿತು.

● ಸಾವರ್ಕರ್ ಬಿಡುಗಡೆಯಾಗಿ ಬ್ರಿಟೀಷ್ ಸರಕಾರ ವಿಧಿಸಿದ್ದ ಷರತ್ತುಗಳನ್ನು 1937ರಲ್ಲಿ ಪ್ರಾಂತೀಯ ಸರಕಾರಗಳು ರಚನೆಗೊಂಡಾಗ ರದ್ದುಪಡಿಸಲಾಯಿತು. ಆ ಕ್ಷಣವೇ ಸಾವರ್ಕರ್ ಹಿಂದೂ ಮಹಾಸಭಾದ ಅಧ್ಯಕ್ಷನಾದನು. ಹಾಗೂ ಮಹಾತ್ಮಾಗಾಂಧಿ ಮತ್ತು ಕಾಂಗ್ರೆಸ್ ಮೇಲೆ ಬಯ್ಗುಳದ ಸುರಿಮಳೆ ಸುರಿದನು. ಕಾಂಗ್ರೆಸ್‌ನ ಪ್ರಶ್ನಾತೀತ ನಾಯಕ ಹಾಗೂ ಭಾರತದ ಜನತೆಯ ಹೃದಯ ಸಾಮ್ರಾಟ ಮಹಾತ್ಮಾಗಾಂಧಿಯನ್ನು ಹೀಗಳೆದವರು ಯಾರೂ ಇಲ್ಲ. ಮಹಮದ್ ಅಲಿ ಜಿನ್ನಾ ಆಮೇಲೆ ಗಾಂಧಿಯನ್ನು ಟೀಕಿಸಿದರಾದರೂ ಅದು ನಾಗರೀಕತೆಯ ಎಲ್ಲೆಯನ್ನು ಮೀರಿರಲಿಲ್ಲ.

● ತಾವೇ ದೇಶಪ್ರೇಮದ ಗುತ್ತಿಗೆದಾರರು ಎಂದು ಈಗ ಬೊಗಳೆ ಕೊಚ್ಚಿಕೊಳ್ಳುತ್ತಿರುವವರು - ಬಿಜೆಪಿ ಆದಿಯಾಗಿ ಸಂಘಪರಿವಾರದ ಸದಸ್ಯರು- ಸಾಮ್ರಾಜ್ಯಶಾಹಿ ವಿರೋಧಿ, ಸ್ವಾತಂತ್ರ್ಯ ಸಂಗ್ರಾಮಕ್ಕೆ ನೀಡಿದ ಕೊಡುಗೆ ಶೂನ್ಯ. ಸಾವರ್ಕರ್‌ಗೆ 'ವೀರ' ಅಭಿದಾನ ಕೊಟ್ಟಿದ್ದು ಈ ಸಂಘಪರಿವಾರವೇ ಆದರೆ ಈ ವೀರನ ಕೊಡುಗೆ ಕೂಡ ಏನೆಂಬುದು ಈಗ ಬಟಾಬಯಲಾಗಿದೆ.

● ಅಂದರೆ ಹಿಂದೂತ್ವವಾದಿಗಳಿಗೂ ಸಾಮ್ರಾಜ್ಯಶಾಹಿಗಳಿಗೂ ಆಪ್ತ ನಂಟಿದೆ ಎಂದಾಯಿತು, ಅಲ್ಲವೇ. ಹಿಂದೂತ್ವವಾದ ಮತ್ತು ಸಾಮ್ರಾಜ್ಯವಾದ= ಶೋಷಣೆಗೆ ರಹದಾರಿ ಎಂದಾಯಿತಲ್ಲವೇ?

ಸಾವರ್ಕರ್ ವೀರನೋ.....

ಪುಟ 9 ರಿಂದ

ಕುರಿತ ಭ್ರಮೆಯ ಬಲೂನಿಗೆ ಸೂಜಿ ಚುಚ್ಚಿದೆ.

ರಾಷ್ಟ್ರೀಯವಾದಿ ಇತಿಹಾಸಕಾರ ಆರ್. ಸಿ. ಮಂಜುಂದಾರ್ ಅವರ 'ಹಿಸ್ಟರಿ ಆಫ್ ಪೀನಲ್ ಸೆಟ್ಲುಮೆಂಟ್' ಕೃತಿಯಲ್ಲಿ ಸಾವರ್ಕರ್‌ರ ದಯಾಭಿಕ್ಷೆ ಅರ್ಜಿಯ ಪೂರ್ಣಪಾಠ ಇದೆ. ನವದೆಹಲಿಯ ರಾಷ್ಟ್ರೀಯ ಪತ್ರಾಗಾರದಲ್ಲಿ ಲಭ್ಯವಿರುವ ಹಲವು ದಾಖಲೆಪತ್ರಗಳೂ ಸಾವರ್ಕರ್‌ರ ಸೋಲಾಡಿತನವನ್ನು ಬಯಲು ಮಾಡುತ್ತವೆ.

ನಾಸಿಕ್ ಜಿಲ್ಲಾಧಿಕಾರಿ ಜಾಕ್ಸನ್‌ರ ಹತ್ಯೆ ಮತ್ತು ಬ್ರಿಟಿಷ್ ಸರಕಾರವನ್ನು ಪದಚ್ಯುತಗೊಳಿಸಲು ನಡೆಸಿದ ಚಟುವಟಿಕೆಗಳ ಆರೋಪದ ಮೇಲೆ ನಾಸಿಕ್ ಹಾಗೂ ಮುಂಬಯಿಯಲ್ಲಿ ವಿಚಾರಣೆ ನಡೆದು ಎರಡೂ ಪ್ರಕರಣ ಸೇರಿ ಒಟ್ಟು ಐವತ್ತು ವರ್ಷದ ಜೈಲು ಶಿಕ್ಷೆಯನ್ನು ಸಾವರ್ಕರ್‌ಗೆ ವಿಧಿಸಲಾಗಿತ್ತು. 1911ರ ಜನವರಿ 30 ರಂದ ಆರಂಭಿಸಿ ಸಾವರ್ಕರ್ ಒಟ್ಟು 23 ವರ್ಷ ಸೆರೆಮನೆಯಲ್ಲಿ ಕಳೆದಿದ್ದಾರೆ. ಅದರಲ್ಲಿ ಬಹುಭಾಗ ಅಂಡಮಾನ್ ಜೈಲಿನಲ್ಲಿ ಕಳೆದರು.

ಕ್ರೂರ ಶಿಕ್ಷೆಗೆ ಪರ್ಯಾಯ ಪದವೇನ್ನೋ ಎಂಬ ರೀತಿಯಲ್ಲಿ ಅಂಡಮಾನ್ ಹೆಸರನ್ನು ಈಗಲೂ ಬಳಸುತ್ತೇವೆ. ಸ್ವಾತಂತ್ರ್ಯ ಹೋರಾಟಗಾರರು ಅಂಡಮಾನ್ ಸೆರೆಮನೆಯಲ್ಲಿ ಅನುಭವಿಸಿದ ರೌರವ ಯಾತನೆ ಎಂಥದ್ದೆಂಬುದನ್ನು ಇದರಿಂದಲೇ ಅರ್ಥಮಾಡಿಕೊಳ್ಳಬಹುದು. ಸಾವರ್ಕರ್ ತಮ್ಮ ಜೀವನ ಚರಿತ್ರೆಯಲ್ಲಿ ಅಂಡಮಾನ್ ಸೆಲ್ಯುಲಾರ್ ಜೈಲಿನ ಯಾತನಾಮಯ ಸನ್ನಿವೇಶಗಳನ್ನು ಎಳೆಎಳೆಯಾಗಿ ವಿವರಿಸಿದ್ದಾರೆ. ಅಲ್ಲಿನ ಆ ಪರಿಸ್ಥಿತಿಯಿಂದಾಗಿಯೇ ಸಾವರ್ಕರ್ ಕಾಡಿ ಬೇಡಿ ಷರತ್ತುಗಳ ಮೇಲೆ ಬಿಡುಗಡೆ ಹೊಂದಿದರು ಎಂದು ನಂಬಲಾಗಿದೆ.

ವಾಸ್ತವವಾಗಿ ಶಿಕ್ಷೆಗೆ ಒಳಗಾದ ಎರಡೇ ವರ್ಷಗಳಲ್ಲಿ ಅಂದರೆ 1913 ನವೆಂಬರ್ 14 ರಂದು ಭಾರತ ಸರಕಾರದ ಗೃಹ ಸದಸ್ಯರಿಗೆ ವಿ.ಡಿ ಸಾವರ್ಕರ್ (ಅಪರಾಧಿ ಸಂಖ್ಯೆ 32778) ಪತ್ರ ಬರೆದರು. ಈ ಅರ್ಜಿಯ ಪೂರ್ಣಪಾಠವನ್ನು ಪ್ರಕಟಿಸುವುದು ಸ್ಥಳಾಭಾವದಿಂದ ಸಾಧ್ಯವಾಗದು ಹೀಗಾಗಿ, ಸಾರಾಂಶವನ್ನಷ್ಟೇ ಇಲ್ಲಿ ನೀಡಲಾಗಿದೆ.

"ನನ್ನ ಪಕ್ಷದ ಇತರ ಕೈದಿಗಳ ಜತೆ 1911ರ ಜೂನ್‌ನಲ್ಲಿ ನಾನು ಇಲ್ಲಿಗೆ ಬಂದಾಗ ನನ್ನನ್ನು 'ಡಿ' ವಿಭಾಗದ ಕೈದಿ ಗುಂಪಿಗೆ ಸೇರಿಸಲಾಯಿತು. (ಡಿ ಅಂದರೆ ಅತ್ಯಂತ ಅಪಾಯಕಾರಿ ಕೈದಿ) ಉಳಿದವರನ್ನು ಡಿ ಗುಂಪಿಗೆ ಸೇರಿಸಲಿಲ್ಲ. ನನ್ನನ್ನು ಆರು ತಿಂಗಳ ಕಾಲ ಏಕಾಂತವಾಸಕ್ಕೆ ಒಳಪಡಿಸಲಾಯಿತು. ಜೈಲಿನ ಅತ್ಯಂತ ಕಷ್ಟಕರ ಕೆಲಸವಾದ ಎಣ್ಣೆಗಾಣದ ಕೆಲಸದಲ್ಲಿ ನನ್ನನ್ನು ತೊಡಗಿಸಲಾಯಿತು. ಈ ಅವಧಿ ಪೂರ್ತಾ ನನ್ನ ಗುಣನಡತೆ ಅತ್ಯಂತ ಉತ್ತಮವಾಗಿದ್ದರೂ ಆರುತಿಂಗಳ ಕೊನೆಯಲ್ಲಿ ನನ್ನನ್ನು ಸೆರೆಮನೆಯಿಂದ ಹೊರಗೆ ಕಳಿಸಲಿಲ್ಲ. ಆಗಿನಿಂದ ಈಗಿನವರೆಗೂ ನನ್ನ ನಡತೆಯನ್ನು ಆದಷ್ಟೂ ಉತ್ತಮವಾಗಿರಿಸಿ ಕೊಳ್ಳಲು ನಾನು ಪ್ರಯತ್ನಿಸಿದ್ದೇನೆ.

ನನಗೆ ಬಡ್ತಿ ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದಾಗ ನಾನೊಬ್ಬ ವಿಶೇಷ ದರ್ಜೆಯ ಕೈದಿಯಾಗಿರುವುದರಿಂದ ಬಡ್ತಿ ಅಸಾಧ್ಯ ಎಂದು ತಿಳಿಸಲಾಯಿತು. ಉತ್ತಮ ಆಹಾರ ಹಾಗೂ ಚಿಕಿತ್ಸೆ ಕೊಡುವಂತೆ ನಮ್ಮಲ್ಲಿ ಕೆಲವರು ಕೇಳಿದಾಗ ನೀವು ಕೇವಲ ಸಾಮಾನ್ಯ ಕೈದಿಗಳು ಉಳಿದವರು ಏನು ತಿನ್ನುತ್ತಾರೋ ಅದನ್ನೇ ತಿನ್ನಬೇಕು ಎಂದು ತಿಳಿಸಲಾಯಿತು. ಕೆಲವು ವಿಶೇಷ ಅನಾನುಕೂಲಗಳಿಗಾಗಿಯೇ ನಮ್ಮನ್ನು ವಿಶೇಷ ಕೈದಿಗಳಾಗಿ ವಿಂಗಡಿಸಲಾಗಿದೆ.

ಬಹಳಷ್ಟು ಜನರನ್ನು ಬಿಡುಗಡೆ ಮಾಡಿದಾಗ ನನ್ನನ್ನು ಬಿಡುವಂತೆ ಮನವಿ ಮಾಡಿಕೊಂಡರೂ ಅದನ್ನು ಪುರಸ್ಕರಿಸಿಲ್ಲ.

ನಾನು 1911ರಲ್ಲೇ ಕಳಿಸಿದ ದಯಾ ಭಿಕ್ಷೆ ಅರ್ಜಿಯನ್ನು ಪರಿಶೀಲಿಸುವ ಔದಾರ್ಯ ತೋರಿ ಅದನ್ನು ಭಾರತ ಸರಕಾರಕ್ಕೆ ರವಾನಿಸಿ ಎಂದು ಮನವಿ ಮಾಡಬಹುದೇ?

ಒಂದು ವೇಳೆ ಸರಕಾರ ಉದಾರವಾಗಿ ಉಪಕರಿಸಿ ದಯೆತೋರಿ ನನ್ನನ್ನು ಬಿಡುಗಡೆ ಮಾಡಿದರೆ ಸಂವಿಧಾನಿಕ ಪ್ರಗತಿಯ ಅತ್ಯಂತ ದೃಢ ಪ್ರತಿಪಾದಕನಾಗುತ್ತೇನೆ ಹಾಗೂ ಆ ಪ್ರಗತಿಗೆ ಅತ್ಯಗತ್ಯವಾದ ಬ್ರಿಟೀಷ್ ಸರಕಾರಕ್ಕೆ ನಿಷ್ಠನಾಗಿರುತ್ತೇನೆ.

ನಾನು ಸೆರೆಮನೆಯಲ್ಲಿ ಇರುವಷ್ಟು ಕಾಲವೂ ಬ್ರಿಟಿಷ್ ಸಾಮ್ರಾಜ್ಯದ ಭಾರತದ ಸಾವಿರಾರು ಪ್ರಜೆಗಳ ಮನೆಗಳನ್ನು ನಿಜವಾದ ಸಂತೋಷ ಇರಲಾರದು; ನಮ್ಮನ್ನು ಬಂಧಮುಕ್ತಗೊಳಿಸಿದರೆ ಜನರು ಖುಷಿ ಹಾಗೂ ಕೃತಜ್ಞತೆಯಿಂದ ಸರಕಾರಕ್ಕೆ ಜಯಘೋಷ ಹಾಕುತ್ತಾರೆ. ಶಿಕ್ಷಿಸುವುದು ಹಾಗೂ ಪ್ರತೀಕಾರಕ್ಕಿಂತ ಹೆಚ್ಚಾಗಿ ಕ್ಷಮಿಸುವುದು ಹಾಗೂ ಸರಿಪಡಿಸುವುದು ಹೇಗೆಂಬುದು ಸರಕಾರಕ್ಕೆ ಗೊತ್ತು. ಎಲ್ಲಕ್ಕಿಂತ ಹೆಚ್ಚಾಗಿ ಸಂವಿಧಾನಿಕ ತತ್ವವನ್ನು ನಾನು ಅಳವಡಿಸಿಕೊಂಡರೆ, ಒಂದು ಕಾಲದಲ್ಲಿ ಮಾರ್ಗದರ್ಶನಕ್ಕಾಗಿ ನನ್ನತ್ತ ನೋಡುತ್ತಿದ್ದ ಭಾರತ ಹಾಗೂ ವಿದೇಶಗಳಲ್ಲಿರುವ ದಾರಿತಪ್ಪಿದ ಎಲ್ಲಾ ಯುವಜನರನ್ನು ಸರಿದಾರಿಗೆ ತರಬಹುದು. ನನ್ನ ಪರಿವರ್ತನೆ **ನನ್ನ ಆತ್ಮಸಾಕ್ಷಿಗೆ ಅನುಗುಣವಾಗಿರುವುದರಿಂದ, ಯಾವುದೇ ಹುದ್ದೆಯಲ್ಲಾದರೂ ಸರಕಾರದ ಸೇವೆ ಮಾಡಲು ನಾನು ಸಿದ್ಧ. ನನ್ನ ಮುಂದಿನ ನಡತೆ ಕೂಡ ಹೀಗೆಯೇ ಇರುತ್ತದೆ ಎಂದು ಆಶಿಸುತ್ತೇನೆ.**

ನಾನು ಹೊರಗೆ ಇರುವುದರಿಂದ ಏನು ಸಾಧ್ಯವೋ ಅದಕ್ಕೆ ಹೋಲಿಸಿದರೆ ನನ್ನನ್ನು ಜೈಲಿನಲ್ಲಿ ಇರಿಸುವುದರಿಂದ ಏನನ್ನು ಸಾಧಿಸಲು ಆಗುವುದಿಲ್ಲ. ಸಾಮ್ರಾಜ್ಯ (MIGHTY) ಮಾತ್ರವೇ ನನಗೆ ದಯೆ ತೋರಬಲ್ಲದು. ಹಾಗೆ ಮಾಡಿದಲ್ಲಿ ಈ ಸುಪುತ್ರ ಸರಕಾರದ ಬಾಗಿಲು ತಟ್ಟದೆ ಇನ್ನೇನು ಮಾಡಿಯಾನು?

ಸನ್ಮಾನ್ಯರು ಈ ಅಂಶಗಳನ್ನೆಲ್ಲ ದಯವಿಟ್ಟು ಪರಿಗಣನೆಗೆ ತೆಗೆದುಕೊಳ್ಳುತ್ತೀರಿ ಎಂದು ಆಶಿಸುತ್ತೇನೆ.

ಅರ್ಜಿಯ ಒಕ್ಕಣೆಯನ್ನು ಓದಿದ ಯಾರಿಗೇ ಆದರೂ ಇದನ್ನು ಬರೆದವರು ವೀರನೋ ಹೇಡಿಯೋ ಎನ್ನುವುದು ಮನವರಿಕೆ ಆಗಲೂ ಹೆಚ್ಚು ಕಾಲಾವಕಾಶ ಬೇಕಾಗುವುದಿಲ್ಲ ಎಂದು ದೃಢವಿಶ್ವಾಸದಿಂದ ಹೇಳಬಹುದು.

ಅರ್ಜಿಸಲ್ಲಿಸಿದ ತಕ್ಷಣಕ್ಕೇ ಸಾವರ್ಕರರ ಬಿಡುಗಡೆ ಆಯಿತೆಂದೇನೂ ಭಾವಿಸಬೇಕಿಲ್ಲ. ವಸಾಹತುಶಾಹಿ ಸರಕಾರ ತನ್ನದೇ ಆದ ಕಾರಣಗಳಿಗಾಗಿ ಹಾಗೆ ಮಾಡಲಿಲ್ಲ. ಆದರೆ ಕೊನೆಗೆ, ಕೆಲವು ಷರತ್ತುಗಳ ಆಧಾರದಲ್ಲಿ ಅದು ಸಾವರ್ಕರ್‌ರನ್ನು ಬಿಡುಗಡೆ ಮಾಡಿತು. ಯಾವುದೇ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸುವುದಿಲ್ಲ ಎಂದು ಸಾವರ್ಕರ್ ಮುಚ್ಚಳಿಕೆ ಬರೆದುಕೊಟ್ಟರು. ಅಷ್ಟೇ ಅಲ್ಲದೆ ನನ್ನ ವಿಚಾರಣೆ ಸರಿಯಾಗಿ ನಡೆಯಿತು ಹಾಗೂ ಶಿಕ್ಷೆಯೂ ನ್ಯಾಯಸಮ್ಮತವಾಗಿತ್ತು ಎಂದೂ ಹೇಳಿಕೆ ನೀಡಿದರು. ಅಂತೂ 1924 ಜನವರಿ ಆರರಂದು ಮಹಾನ್ ದೇಶಪ್ರೇಮಿ ವೀರ ಸಾವರ್ಕರ್ ಬಂಧಮುಕ್ತರಾದರು.

ರಾಷ್ಟ್ರಪತಿ ಚುನಾವಣೆ......

ಪುಟ 7 ರಿಂದ

ಹೆಸರಿನಲ್ಲಿ ವಾಜಪೇಯಿ ಅಂದು ಮಾಡಿದ್ದಂತೂ ರಾಷ್ಟ್ರದ ಪ್ರಥಮ ಪ್ರಜೆಗೆ ತೋರಿದ ನೇರ ಅಗೌರವವಾಗಿದೆ. ಸೌಜನ್ಯದ ಕನಿಷ್ಠ ಪ್ರಜ್ಞೆಯ ಉಲ್ಲಂಘನೆ ಇದಾಗಿದೆ ಹಾಗೂ ರಾಷ್ಟ್ರಪತಿಗಳು ಮರು ಸ್ಪರ್ಧಿಸುವುದನ್ನು ನಿರುತ್ತೇಜಿಸುವ ಆಟದ ಯತ್ನವಾಗಿದೆ.

ವಾಜಪೇಯಿರವರು ಪದೇ ಪದೇ ಸರ್ವ ಸಮ್ಮತಿಗಾಗಿ ಆಡುತ್ತಿದ್ದ ಮಾತುಗಳಿಗೆ ವಿರೋಧ ಪಕ್ಷಗಳೊಂದಿಗೆ ಯಾವುದೇ ಗಂಭೀರ ಚರ್ಚೆ ನಡೆಸುವ ಉದ್ದೇಶವಿರಲಿಲ್ಲ ಮಾತ್ರವಲ್ಲ ಬದಲಿಗೆ ಜನತೆಯನ್ನು ದಾರಿತಪ್ಪಿಸುವುದಾಗಿತ್ತು ಎಂಬುದು ಈ ವೇಳೆಗೆ ಸ್ಪಷ್ಟವಾಗಿದೆ. ವಾಜಪೇಯಿ ರವರು ರಾಷ್ಟ್ರಪತಿಯವರನ್ನು ಅವಮಾನಿಸಿದ ನಂತರ ಇತರೇ ಹೆಸರುಗಳು ಚಾಲ್ತಿಗೆ ಬಂದವು. ಅದರಲ್ಲಿ ಒಂದು ಹೆಸರೆಂದರೆ ಉಪರಾಷ್ಟ್ರಪತಿ ಶ್ರೀ ಕೃಷ್ಣಕಾಂತ್‌ರವರು. ಅವರಿಗೆ ಬೆಂಬಲವಾಗಿ ಸರ್ವ ಸಮ್ಮತಿ ರೂಪಿಸಲು ಯತ್ನಿಸಲಾಯಿತು ಪ್ರಮುಖವಾಗಿ, ಎನ್.ಡಿ.ಎ. ಸರ್ಕಾರಕ್ಕೆ ಹೊರಗಿ ನಿಂದ ಬೆಂಬಲ ನೀಡುತ್ತಿರುವ ತೆಲುಗು ದೇಶಂ ಪಕ್ಷ ಅವರ ಹೆಸರನ್ನು ಪ್ರಸ್ತಾಪಿಸಿದ ನಂತರ ಒಂದು ಹಂತದಲ್ಲಿ ಶ್ರೀ ಕಾಂತ್‌ರವರೇ ನಮ್ಮ ಮುಂದಿನ ರಾಷ್ಟ್ರಪತಿ ಎನ್ನುವಂತೆ ತೋರ್ಪಡಿಸ ಲಾಯಿತು. ಆದರೆ ಇದ್ದಕ್ಕಿಂದಂತೆ, ಬಿಜೆಪಿ ತನ್ನ ವಂಚನೆಯ ತುಣುಕನ್ನು ತೋರುತ್ತಾ ಮಹಾರಾಷ್ಟ್ರದ ರಾಜ್ಯ ಪಾಲರಾದ ಶ್ರೀ ಪಿ.ಸಿ. ಅಲೆಕ್ಸಾಂಡರ್‌ರವರನ್ನು ಪ್ರಸ್ತಾಪಿಸಿತು.

ವಾಜಪೇಯಿರವರ ವಂಚನೆಯ ಜಾಲ

ಸುತ್ತುಹಾಕುತ್ತಿದ್ದ ಎಲ್ಲಾ ಹೆಸರುಗಳ ಪೈಕಿ, ವಿದ್ವಂಸರಾಗಿ ಮುತ್ಸದ್ದಿಗಳಾಗಿ ಉನ್ನತ ವ್ಯಕ್ತಿತ್ವವುಳ್ಳ ಡಾ। ನಾರಾಯಣನ್‌ರವರು ಉತ್ತಮ ಅಭ್ಯರ್ಥಿಯಾಗಿದ್ದರು ಎಂಬುದಂತೂ ಸ್ಪಷ್ಟ. ಹಾಗಾಗಿ ಅವರ ಹೆಸರಿನ ಹಿಂದೆ ವಿರೋಧ ಪಕ್ಷಗಳ ಸರಿಸುಮಾರು ಒಮ್ಮತ ಮಾಡಿ ಬಂತು, ಕಾಂಗ್ರೆಸ್‌ನೊಂದಿಗೆ ಕಣ್ಣಿಗೆ ಕಣ್ಣಿಟ್ಟು ನೋಡದ ಸಮಾಜವಾದಿ ಪಕ್ಷವು ಸಹಾ ನಾರಾಯಣನ್‌ರವರ ಪ್ರಸ್ತಾಪಕ್ಕೆ ಒಪ್ಪಿಗೆ ನೀಡಿತು.

ಆದರೆ ವಿರೋಧ ಪಕ್ಷಗಳ ಈ ಐಕ್ಯತೆಯ ಎನ್.ಡಿ.ಎ. ಪಕ್ಷಗಳಿಗೆ ಒಪ್ಪಿಗೆಯಾಗಲಿಲ್ಲ. ಆದರೆ ವಾಜಪೇಯಿರವರು ತಮ್ಮ ಕಸರತ್ತಿನ ಭಾಗವಾಗಿ ಪಿ.ಸಿ. ಅಲೆಕ್ಸಾಂಡರ್‌ರವರನ್ನು ಪಕ್ಕಸರಿಸಿ, ಡಾ। ಅಬ್ದುಲ್ ಕಲಾಂರನ್ನು ಅಭ್ಯರ್ಥಿಯನ್ನಾಗಿಸಿದರು.

ಡಾ। ಕಲಾಂ ರವರು ಒಬ್ಬ ಪ್ರಖ್ಯಾತ ವಿಜ್ಞಾನಿ ಹಾಗೂ ವಿಜ್ಞಾನದ ಆಡಳಿತಗಾರರು, ಹಾಗೂ ಈ ರಂಗದಲ್ಲಿನ ಅವರ ಸಾಮರ್ಥವನ್ನು ಯಾರು ಅಲ್ಲಗಳೆಯಲಾರರು. ಆದರೆ ಭಾರತದ ರಾಜಕೀಯದ ಸಂಕೀರ್ಣ ಸೂಕ್ಷ್ಮಗಳನ್ನು ಅರಿಯುವ ಯಾವುದೇ ವ್ಯಕ್ತಿಗೆ ರಾಷ್ಟ್ರಪತಿಗಳ ಹುದ್ದೆಗೆ ನ್ಯಾಯ ಒದಗಿಸಲು ಸಾಧ್ಯವಾಗದು. ನಮ್ಮ ರಾಜಕೀಯ ವ್ಯವಸ್ಥೆ ಅತ್ಯಂತ ಒಡಕುಗಳನ್ನು ಹೊಂದಿರುವಾಗ ಹಾಗೂ ರಾಷ್ಟ್ರದ ವಿವಿಧ ಭಾಗಗಳಲ್ಲಿ ವಿಭಿನ್ನ ವೈವಿಧ್ಯದ ಪಕ್ಷಗಳು ಆಳ್ವಿಕೆ ನಡೆಸಿರುವ ಈ ಸಂದರ್ಭದಲ್ಲಂತೂ ಇದು ಪ್ರಮುಖವಾಗುತ್ತದೆ. ಆದ್ದರಿಂದ ರಾಷ್ಟ್ರದ ಅತ್ಯುನ್ನತ ಸಂವಿಧಾನಿಕ ಕಛೇರಿಯನ್ನು ಅಲಂಕರಿಸುವ ವ್ಯಕ್ತಿ ಇಡೀ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಗ್ರಹಿಸಿ ಕೂಡಲೇ ಆದರೆ ಸರಿಯಾಗಿ ಸಮಯದಿಂದ ಸಮಯಕ್ಕೆ ಉಂಟಾಗುವ ಬೆಳವಣಿಗೆಗಳಿಗೆ ಪ್ರತಿಕ್ರಿಯಿಸ ಬೇಕಾಗುತ್ತದೆ.

ಡಾ। ಕಲಾಂರವರು ಅಲ್ಪಸಂಖ್ಯಾತ ಕೋಮಿಗೆ ಸೇರಿದವರೆಂಬ ಕಾರಣಕ್ಕಾಗಿ ಅವರನ್ನು ಬೆಂಬಲಿಸಬೇಕೆಂಬ ಕಾರಣ ನೀಡಿರುವ ಬಿಜೆಪಿಯ ವಾದಗಳೇ ಡಾ। ಕಲಾಂರವರನ್ನು ಪೋಷಿಸಿರುವ ಹಿಂದಿನ ಅವರ ಅಂತಿಮ ಉದ್ದೇಶವನ್ನು ತೋರುತ್ತದೆ. ಆದರೆ ಇದೇ ಬಿಜೆಪಿ ಸರ್ಕಾರದ ಆಡಳಿತವಿರುವ ಗುಜರಾತ್‌ನಲ್ಲಿ ಸ್ವತಂತ್ರ ಭಾರತ ಕಂಡರಿಯದಂತಹ ಅಲ್ಪಸಂಖ್ಯಾತರ ಮಾರಣ ಹೋಮ ನಡೆದಿದೆ ಎಂಬುದನ್ನು ಯಾರು ತಾನೆ ಮರೆಯಲ ಸಾಧ್ಯ? ಡಾ। ಕಲಾಂರವರು ಅಲ್ಪಸಂಖ್ಯಾತ ಕೋಮಿಗೆ ಸೇರಿದವರೆಂಬ ಬಿಜೆಪಿಯ ವಾದ ದೆವ್ವದ ಬಾಯಲ್ಲಿ ಬರುವ ಭಗವದ್ಗೀತೆ ಉಚ್ಚಾರಕ್ಕಿಂತ ಕೆಟ್ಟದಾಗಿದೆ. ಅಲ್ಪಸಂಖ್ಯಾತ ಮೇಲಿನ ಈ ಪ್ರೀತಿ ಎಷ್ಟು ಒಂದಿನದು ಎಂದು ಬಿಜೆಪಿ ಹೇಳಬಲ್ಲದೆ?

ಸಮಾಜವಾದಿ ಪಕ್ಷ ತನ್ನ ಬೆಂಬಲವನ್ನು ಡಾ। ನಾರಾಯಣನ್‌ರವರಿಂದ ಡಾ। ಕಲಾಂ ರವರಿಗೆ ಬದಲಿಸುವ ಮಟ್ಟಿಗೆ ಬಿಜೆಪಿ ತನ್ನ ಆಟದಲ್ಲಿ ಯಶಸ್ವಿಯಾಗಿದೆ. ಈ ರೀತಿ ವಾಜಪೇಯಿರವರ ವಂಚನೆಯ ಜಾಲ ವಿರೋಧ ಪಕ್ಷಗಳ ಐಕ್ಯತೆಯಲ್ಲಿ ಒಡಕನ್ನು, ಪ್ರಮುಖವಾಗಿ ಲೋಕ ಮೋರ್ಚಾದಲ್ಲಿ ಉಂಟುಮಾಡಿದೆ. ತೃತೀಯ ಪರ್ಯಾಯದ ಮೇಲೆ ಹರಿಹಾಯುವ ಮುನ್ನ ಎನ್.ಡಿ.ಎ. ಪಕ್ಷಗಳು ನೆನಪಿನಲ್ಲಿ ಇಡಬೇಕಾದ ಅಂಶವೆಂದರೆ, ತೃತೀಯ ಪರ್ಯಾಯದ ಭ್ರೂಣಾವಸ್ಥೆಯಾದ ಲೋಕಮೋರ್ಚಾದ ರಚನೆ ಯಾವುದೇ ನಿರ್ದಿಷ್ಟ ಪಕ್ಷಗಳ ಮೇಲೆ ಅವಲಂಬಿತವಲ್ಲ ಎಂಬುದಾಗಿದೆ. ಸಿಪಿಐ(ಎಂ)ನ 17ನೇ ಮಹಾಧಿವೇಶನದ ರಾಜಕೀಯ ಗೊತ್ತುವಳಿ ತಿಳಿಸಿರುವಂತೆ ಪಕ್ಷಗಳು ಬರಬಹುದು ಹಾಗೂ ಹೋಗಬಹುದು ಆದರೆ ತೃತೀಯ ಶಕ್ತಿಯು ಅಗತ್ಯ ಇಂದಿನ ಅವಶ್ಯಕತೆಯಾಗಿದೆ. ಲೋಕ ಮೋರ್ಚಾವನ್ನು ಕೂಡಲೇ ಪುನರ್ ಸಂಘಟಿಸಲಾಗುವುದು.

ಇಂತಹ ಪರಿಸ್ಥಿತಿಯಲ್ಲಿ ಡಾ। ಕಲಾಂರವರಿಗೆ ಯಾವುದೇ ರೀತಿಯ ಅಗೌರವ ತೋರದೆ, ಬಿಜೆಪಿ ನೇತೃತ್ವದ ಎನ್.ಡಿ.ಎ ರಾಷ್ಟ್ರಪತಿ ಸ್ಥಾನವನ್ನು ಸಲೀಸಾಗಿ ತನ್ನದಾಗಿಸಿಕೊಳ್ಳಲು ಬಿಡಬಾರದೆಂದು ಎಡ ಪಕ್ಷಗಳು ನಿರ್ಧರಿಸಿವೆ.

○

ಕಮ್ಯುನಿಸ್ಟರ ಕುರಿತಾದ ಪ್ರತ್ಯೇಕತೆಯ ಬಗೆಗಿನ ಮಾತು, ಪ್ರಜಾತಂತ್ರದ ಸ್ಪಷ್ಟ ಕಲ್ಪನೆ ಇಲ್ಲದವರು ಆಡುವ ಮಾತು. ನಮ್ಮದು ಬಹುಜನಾಂಗೀಯ ಪ್ರಜಾಪ್ರಭುತ್ವ, ಬಹುಮುಖೀ ಸಂಸ್ಕೃತಿಯ ನಾಡು, ವಿಭಿನ್ನ ಚಿಂತನೆಗಳ ತವರೂರು ಎಂದೆಲ್ಲ ನಮ್ಮನ್ನು ನಾವು ಹೊಗಳಿಕೊಳ್ಳುತ್ತೇವೆ. ನಮ್ಮ ರಾಜ್ಯಾಂಗವೂ ಭಿನ್ನ ಚಿಂತನೆಯನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ. ಇಂಥಲ್ಲಿ ಕಮ್ಯುನಿಸ್ಟರು ಇತರ ಪಕ್ಷಗಳ ಚಿಂತನೆಗಿಂತ ಪ್ರತ್ಯೇಕವಾಗಿ ನಿಲ್ಲುತ್ತಾರಾದರ ಅದು ಅವರ ಸೈದ್ಧಾಂತಿಕ ಬದ್ಧತೆಗೆ ಸಾಕ್ಷಿ. ತಾವು ಸೋಲುತ್ತೇವೆ ಎಂಬುದು ಖಚಿತವಿದ್ದರೂ, ನಮ್ಮದು ಹೀಗೆ ಎನ್ನುವ ಸ್ಪಷ್ಟ ನಿಲುವು ಚಿಂತನೆಯ ಗಟ್ಟಿತನವನ್ನು ಸಾಬೀತುಪಡಿಸುತ್ತದೆ.

- ಅರವಿಂದ ಚೊಕ್ಕಾಡಿ

ಜನವಾಹಿನಿ

* * *

ಅವರು ಈ ದೇಶದ ಪ್ರಧಾನಿಯ ವೈಜ್ಞಾನಿಕ ಸಲಹೆಗಾರರಾಗಿ ಅಣ್ವಸ್ತ್ರಗಳ ನಿರರ್ಥಕತೆಯನ್ನು ತಿಳಿಸಿಕೊಡುವ ಬದಲು ಪೋಖ್ರಾನಿನಲ್ಲಿ ಪ್ರಯೋಗ ನಡೆಸಿ ಈ ದೇಶದ ದಾರಿ ತಪ್ಪಿಸಿದ್ದಾರೆ. ಪ್ರಧಾನಿಯೊಂದಿಗೆ ಸೇರಿಕೊಂಡು ಅಣ್ವಸ್ತ್ರಗಳನ್ನು ಹೊಂದಿದ್ದ ನಾವು ಬಲಿಷ್ಠ ರಾಷ್ಟ್ರವಾಗಿದ್ದೇವೆ ಎಂದು ಹೇಳುತ್ತ ಜನರನ್ನು ಭ್ರಮೆಯಲ್ಲಿರಿಸಿದ್ದಾರೆ.

ಅಬ್ದುಲ್ ಕಲಾಂ ಅವರು ನಿಜವಾಗಿ ಯೂ ಶ್ರೇಷ್ಠ ವಿಜ್ಞಾನಿ, ಮಾನವತಾವಾದಿ, ಪರಿಸರವಾದಿ ಮತ್ತು ಕವಿಹೃದಯುದವರಾಗಿದ್ದರೆ ಅವರ ಸಂಶೋಧನೆಯ ದಿಕ್ಕು ಬೇರೆಯಾಗಿರುತ್ತಿತ್ತು. ಈ ನಿಟ್ಟಿನಲ್ಲಿ ತಂತ್ರ ಜ್ಞಾನ ಕುರಿತ ಅವರ ವ್ಯಾಖ್ಯಾನಗಳು ಯುವಕರಿಗೆ ಕೊಡುವ ಸಂದೇಶಗಳು ಕೇವಲ ಕಪಟ.

ನಮ್ಮ ಪ್ರಜಾಪ್ರಭುತ್ವದ ಅತ್ಯುನ್ನತ ಸ್ಥಾನಕ್ಕೆ ಅವರ ಸಾಧನೆಗಳೇ ಬಹುಮುಖ್ಯ ಮಿತಿಗಳಾಗಿದವೆ.

- ಪ್ರಜಾವಾಣಿ

* * *

ಮೂರು ತಿಂಗಳಿಂದ ಕೇಂದ್ರ ನಾರಾಯಣನ್‌ರಿಗೆ ತುರ್ತು ಪರಿಸ್ಥಿತಿ ಘೋಷಿಸಲು ಒತ್ತಾಯಿಸುತ್ತಿತ್ತೆಂದು ವದಂತಿ. ಅವರು ತುರ್ತು ಪರಿಸ್ಥಿತಿ ಘೋಷಿಸಲಿಲ್ಲ. ಸಂಘ ಪರಿವಾರಕ್ಕೆ/ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರಿಗೆ ಭಾರೀ ಮುಖಭಂಗ. ತುರ್ತುಪರಿಸ್ಥಿತಿ ಘೋಷಣೆಗೆ ಭಾರತ-ಪಾಕ್ ಗಡಿ ಯುದ್ಧ ಭಯದ ಕಾರಣ ಕೊಡಲಾಗಿತ್ತೆಂದು ಹೇಳಲಾಗುತ್ತದೆ.

- ಸುಧಾ

ಮಾಸ್ಕೊಗೆ ಅಮೇರಿಕಾದ ಅಧ್ಯಕ್ಷ ಬುಶ್ ಭೇಟಿಯಲ್ಲಿ ಎರಡು ಪ್ರಮುಖ ಒಪ್ಪಂದಗಳಾದವು. ಅಣ್ವಸ್ತ್ರ ಕ್ಷಿಪಣಿಗಳ ಕಡಿತದ ಒಪ್ಪಂದ ಒಂದು. ಇನ್ನೊಂದು ನಾಟೋ-ರಶ್ಯಾ ಕೌನ್ಸಿಲ್‌ನ ರಚನೆ ಬಗ್ಗೆ ಎರಡೂ ಮೊದಲ ನೋಟಕ್ಕೆ ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಬಿಗುವು ಕಡಿಮೆ ಮಾಡುವ, ವಿಶ್ವಶಾಂತಿಗೆ ಪೂರಕವಾದಂತೆ ಕಾಣಬಹುದು. ಆದರೆ ನಿಜವಾಗಿಯೂ ಇವೆರಡೂ ವಿಶ್ವಶಾಂತಿಗೆ ಮಾರಕವಾದವು. ಇದರಿಂದ ಜಗತ್ತಿನ ವಿದ್ಯಮಾನಗಳಲ್ಲಿ ಅಮೇರಿಕಾದ ದೊಡ್ಡಣ್ಣನ 'ದರ್ಪ' ಇನ್ನೂ ಗಟ್ಟಿಗೊಳ್ಳಲಿದೆ. ಈ ಎರಡೂ ಒಪ್ಪಂದಗಳಿಂದ ರಶ್ಯಾವನ್ನು ಅಮೆರಿಕ ತನ್ನ ಹಿತಾಸಕ್ತಿಗಳಿಗೆ ಅನುಗುಣವಾಗಿ ಗೋಣು ಆಚರಿಸುವಂತೆ ಮಣಿಸಿದೆ. ಇನ್ನೂ ಪ್ರಬಲ ಮಿಲಿಟರಿ ಶಕ್ತಿಯಾಗಿರುವ ರಶ್ಯಾದಿಂದ, ತನ್ನ ಅಧಿಪತ್ಯಕ್ಕೆ ಪ್ರತಿರೋಧವನ್ನು ಚಿವುಟಿಹಾಕಿದೆ. ವಿಶ್ವವಾಣಿಜ್ಯ ಕೇಂದ್ರದ ಮೇಲಿನ ಭಯೋತ್ಪಾದಕ ಕೃತ್ಯಗಳ ಹಿನ್ನೆಲೆಯಲ್ಲಿ ಬರಲಾದ ಅಂತರ್ರಾಷ್ಟ್ರೀಯ ಪರಿಸ್ಥಿತಿ, ಇದರಿಂದ ಪ್ರಕೋಪಕ್ಕೆ ಹೋಗಿದೆ. ಸಣ್ಣ ಮತ್ತು ದುರ್ಬಲ ಮೂರನೇ ಜಗತ್ತಿನ ದೇಶಗಳ ಮೇಲೆ, ಅಮೆರಿಕಾದ ಸಾಮ್ರಾಜ್ಯಶಾಹಿ-ಪರ ನೀತಿ ಯಾವುದೇ ಪ್ರತಿರೋಧ ಇಲ್ಲದೆ ಪಾಲಿಸುವ ಬಗ್ಗೆ ಒತ್ತಡ ಹೆಚ್ಚಿದೆ. ಆದರೆ ರಶ್ಯಾದ ಜನತೆಯ ವಿರೋಧ, ಯುರೋಪಿಯನ್ ಒಕ್ಕೂಟದಲ್ಲಿ ಅಮೆರಿಕಾದ ನೀತಿಗಳ ಬಗ್ಗೆ ವಿರೋಧ, ಮೂರನೇ ಜಗತ್ತಿನ ದೇಶಗಳ ಜನತೆಯ ಪ್ರತಿರೋಧ ಇವೆಲ್ಲಾ ಅಮೇರಿಕಾದ 'ದೊಡ್ಡಣ್ಣನ ದರ್ಪ' ಈಗ ನಗ್ನವಾಗಿ ಕಾಣುತ್ತಿರುವುದರಿಂದ ಹೆಚ್ಚಲಿದೆ.

ಅಮೆರಿಕನ್ ಒತ್ತಡಕ್ಕೆ ಮಣಿದ ರಶ್ಯಾ

ಬುಶ್-ಪುಟಿನ್ ಮಾಸ್ಕೋ ಶೃಂಗಸಭೆ ಒಪ್ಪಂದಗಳು

ಶರತ್ ಚಂದ್ರ

ಅಮೆರಿಕದ ಅಧ್ಯಕ್ಷ ಬುಶ್ ಮಾಸ್ಕೋ ಭೇಟಿಯಲ್ಲಿ, ರಶ್ಯಾ ಅಧ್ಯಕ್ಷ ಪುಟಿನ್ ಜತೆ ಶೃಂಗ ಸಭೆ ನಡೆಯಿತು. ಈ ಶೃಂಗಸಭೆಯಲ್ಲಿ ಎರಡು ಒಪ್ಪಂದಗಳಾದವು. ಒಂದು ಅಣ್ವಸ್ತ್ರ ಕ್ಷಿಪಣೆಗಳ ಕಡಿತದ ಬಗ್ಗೆ, ಹತ್ತುವರ್ಷಗಳೊಳಗೆ ಮೂರನೇ ಎರಡು ಭಾಗದಷ್ಟು ಕಡಿತಮಾಡಿ, ಆರು ಸಾವಿರದಿಂದ ಎರಡು ಸಾವಿರಕ್ಕೆ ಇಳಿಸುತ್ತದೆ ಈ ಒಪ್ಪಂದ. ಆದರೆ ನಿಜವಾಗಿಯೂ ಈ ಒಪ್ಪಂದ ಅಮೇರಿಕದ ಮಿಲಿಟರಿ ತೊಳ್ಬಲ ಹೆಚ್ಚಿಸಲಿದೆ. ರಶ್ಯಾದ ಜತೆ ಹೋಲಿಕೆಯಲ್ಲಿ ಕಡಿತಗೊಳಿಸಿದ ಅಣ್ವಸ್ತ್ರಗಳನ್ನು ನಾಶಮಾಡಬೇಕು. ಈ ಬಗ್ಗೆ ಉಭಯ ಮೇಲ್ವಿಚಾರಣೆ ಇರಬೇಕು. ಎಂಬ ರಶ್ಯಾದ ಬೇಡಿಕೆಯನ್ನು ಅಮೆರಿಕಾ ತಿರಸ್ಕರಿಸಿತು. ಏನೇ ಆಗಲಿ ಅಣ್ವಸ್ತ್ರ ಕ್ಷಿಪಣೆಗಳಲ್ಲಿ ಕಡಿತ ವಿಶ್ವ ಶಾಂತಿಗೆ ಪೂರಕವಲ್ಲವೇ ಎಂದು ಯಾರಾದರೂ ಕೇಳಬಹುದು. ರಶ್ಯಾದಿಂದ ಬೆದರಿಕೆ ಇಲ್ಲವಾಗಿರುವುದು, ಬದಲಾದ ಅಂತರ್ರಾಷ್ಟ್ರೀಯ ಸನ್ನಿವೇಶದಲ್ಲಿ ಹೊಸ ಮಿಲಿಟರಿ ರಣನೀತಿಯನ್ನು ಅಮೇರಿಕ ಅಂಗೀಕರಿಸಿರುವ ಹಿನ್ನೆಲೆಯಲ್ಲಿ ಈ ಒಪ್ಪಂದವನ್ನು ನೋಡಬೇಕು. ರಶ್ಯಾದಲ್ಲಿ ಈಗ ಸ್ಥಾಪಿತವಾಗಿರುವ ವಿಕೃತ ಬಂಡವಾಳಶಾಹಿ ವ್ಯವಸ್ಥೆಯಿಂದ ದುರ್ಬಲಗೊಂಡಿದ್ದು ಅಂತರ್ರಾಷ್ಟ್ರೀಯವಾಗಿ ಅಮೇರಿಕಕ್ಕೆ ಸವಾಲು ಹಾಕುವ ಸ್ಥಿತಿಯಲಿಲ್ಲ. ರಶ್ಯಾದ ಅಧ್ಯಕ್ಷ ಪುಟಿನ್ ಅಮೇರಿಕದ ಅಗತ್ಯಗಳಿಗೆ ಹೊಂದಿಕೊಳ್ಳುವ ಮೂಲಕ, ರಶ್ಯಾಕ್ಕೆ ಕೆಲವಾದರೂ ರಿಯಾಯಿತಿ ದೊರಕಿಸಿಕೊಳ್ಳುವ ಪ್ರಯತ್ನ ನಡೆಸಿದರು. ಆದರೆ ಒಪ್ಪಂದಗಳ ಅಂತಿಮ ರೂಪ ನೋಡಿದರೆ ರಶ್ಯಾಕ್ಕೆ ಇದರಿಂದ ಏನೂ ದಕ್ಕಲಿಲ್ಲ. ರಶ್ಯಾದ ಆರ್ಥಿಕ ಹಿತಾಸಕ್ತಿಗಳಿಗೆ ಅಗತ್ಯವಾದ ಎರಡು ಅಂಶಗಳನ್ನು ಪುಟಿನ್ ಮುಂದೊಡ್ಡಲು ಮಾಡಿದ ಪ್ರಯತ್ನಗಳು ವಿಫಲವಾದವು. ವಿಶ್ವ ವಾಣಿಜ್ಯ ಸಂಸ್ಥೆಗೆ ರಶ್ಯಾದ ಸೇರ್ಪಡೆ ಬಗ್ಗೆ ವೇಳಾಪಟ್ಟಿ ತಯಾರಿಸುವುದರಲ್ಲಿ ಅಮೇರಿಕಾದ ಬೆಂಬಲ ಒಂದು ಅಂಶ ರಶ್ಯಾದ ಜತೆ ವಾಣಿಜ್ಯದ ಮೇಲೆ ನಿರ್ಬಂಧಗಳನ್ನು ಹಾಕುವ 1974ರ ಜ್ಯಾಕ್ಸನ್ - ವಾನಿಕ್ (ಅಮೇರಿಕಾದ) ಸೋಲನ್ನು ರದ್ದು ಮಾಡುವುದು ಇನ್ನೊಂದು ಅಂಶ. ಈ ಎರಡೂ ಅಂಶಗಳನ್ನು ಅಮೇರಿಕ ಸಾರಾಸಗಟಾಗಿ ತಿರಸ್ಕರಿಸಿದ್ದು ರಶ್ಯಾದ ದುರ್ಬಲ ಸ್ಥಿತಿಯನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಪುಟಿನ್ ಶರಣಾಗತಿ

'ರಾಷ್ಟ್ರೀಯ ಕ್ಷಿಪಣೆ ರಕ್ಷಣ ವ್ಯವಸ್ಥೆ ಎಂಬ ಹೆಸರಿನಲ್ಲಿ ಬುಶ್ 'ಮಿನಿ - ತಾರಾ ಸಮರ'ಕ್ಕೆ ಹೊಸ ಶಸ್ತ್ರಾಸ್ತ್ರಗಳ ಬೆಳವಣಿಗೆ ಆರಂಭಿಸಿದ್ದಾರೆ. ಇದು ಹೊಸ ಅನಗತ್ಯ ಶಸ್ತ್ರಾಸ್ತ್ರ ಪೈಪೋಟಿ ಆರಂಭಿಸುತ್ತದೆ ಮತ್ತು ಶಾಂತಿಗೆ ಪೂರಕ ಮಾತ್ರವಲ್ಲ. ಇದು 1972ರ ಕ್ಷಿಪಣೆ ವಿರೋಧಿ ಒಪ್ಪಂದದ ಏಕಪಕ್ಷಿಯ ಉಲ್ಲಂಘನೆ ಇದು ರಶ್ಯಾದ (ಸರಿಯಾದ) ನಿಲುಮೆಯಾಗಿತ್ತು. ಆದರೆ ಬುಶ್ ಭೇಟಿಯ ಸಮಯದಲ್ಲಿ ಈ ನಿಲುಮೆಯನ್ನು ಬಿಟ್ಟುಕೊಟ್ಟು, ಹೆಚ್ಚು ಕಡಿಮೆ 'ಮಿನಿ-ತಾರಾಸಮರ'ಕ್ಕೆ ಒಪ್ಪಿಕೊಂಡಿದೆ. ಇದಲ್ಲದೆ ಸಣ್ಣ ದೇಶಗಳ, 'ಭಯೋತ್ಪಾದಕ' (ಅಮೇರಿಕಾದ ದೃಷ್ಟಿಯಲ್ಲಿ) ಗುಂಪುಗಳ ಬೆದರಿಕೆ ಎದುರಿಸಲು ಸಣ್ಣ ಎಲ್ಲೆಂದರಲ್ಲಿ ಸಾಗಿಸುವುದಾದ ಅಣ್ವಸ್ತ್ರಗಳ ಬೆಳವಣಿಗೆಗೆ ಅಮೇರಿಕಾದ ಯೋಜನೆ ಹಾಕಿದೆ. ಇದು ಅಮೇರಿಕಾದ ಹೊಸ ಮಿಲಿಟರಿ ನೀತಿ. ಬುಶ್ ಇತ್ತೀಚೆಗೆ 60 ದೇಶಗಳಲ್ಲಿ 'ಭಯೋತ್ಪಾದಕ ಕೇಂದ್ರಗಳ ಮೇಲೆ ಮುನ್ನೆಚ್ಚರಿಕೆಯ ದಾಳಿ ಮಾಡುವ ಬಗ್ಗೆ ಮಾತನಾಡಿದ್ದಾರೆ. ಜೈವಿಕ ಶಸ್ತ್ರಾಸ್ತ್ರಗಳನ್ನು ನಿಷೇಧಿಸುವ ಒಪ್ಪಂದಕ್ಕೂ ಸಹಿ ಹಾಕಲು ನಿರಾಕರಿಸಿ' ಅಮೇರಿಕ ಮಿಲಿಟರಿ ಮೇಲುಗೈ ಸಾಧಿಸುವ ತನ್ನ ಉದ್ದೇಶವನ್ನು ಸ್ಪಷ್ಟಪಡಿಸಿದೆ. ಅಣ್ವಸ್ತ್ರ ದೇಶಗಳಾದ ರಶ್ಯಾ, ಚೀನಾ ಒಂದು ಕಡೆ. ಅಣ್ವಸ್ತ್ರ ರಹಿತ ದೇಶಗಳಾದ ಲಿಬ್ಯಾ, ಸಿರಿಯಾ, ಇರಾನ್, ಇರಾಕ್ ಮತ್ತು ಉತ್ತರ ಕೋರಿಯಾ ಇನ್ನೊಂದು ಕಡೆ. ಇವೆರಡೂ ದೇಶಗಳ 'ಬೆದರಿಕೆ' ಎದುರಿಸಲು ಮೊದಲು ಮುನ್ನೆಚ್ಚರಿಕೆಯ ಆಕ್ರಮಣದ ಹೊಸ ರಣನೀತಿಯನ್ನು ಅಮೇರಿಕ ಅಂಗೀಕರಿಸಿದೆ. ಈ ವರೆಗೆ ಅಣ್ವಸ್ತ್ರ ರಹಿತ ದೇಶಗಳ ಮೇಲೆ ದಾಳಿ ಮಾಡದಿರುವ ಅಣ್ವಸ್ತ್ರ ದೇಶಗಳು ದಾಳಿಮಾಡಿದರೆ ತಿರುಗೇಟಿನ ಆಕ್ರಮಣ ಮಾಡುವ ಅಣ್ವಸ್ತ್ರ ರಕ್ಷಣಾ ರಣನೀತಿಯನ್ನು ಇದರಿಂದ ಅಪಾಯಕಾರಿ ದಿಕ್ಕಿನಲ್ಲಿ ಬದಲಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಮಾಸ್ಕೋ ಒಪ್ಪಂದ ಬುಶ್‌ರ ಆಕ್ರಮಿಕ ಅಣ್ವಸ್ತ್ರ ರಣನೀತಿಗೆ ರಶ್ಯಾ ಶರಣಾಗತಿ ಎನ್ನಬೇಕು. ಇದು ವಿಶ್ವಶಾಂತಿಗೆ ಮಾರಕ. ಜಗತ್ತಿನ ಎಲ್ಲಾ ದೇಶಗಳ, ಜನರ ಶಾಂತಿನೀತಿ ಬೆಳವಣಿಗೆಗೆ ಮಾರಕ ಬೆಳವಣಿಗೆ



ನಾಟೋ ರಶ್ಯಾ 'ಜೂನಿಯರ್ ಪಾರ್ಟನರ್'


ಇನ್ನೊಂದು ಒಪ್ಪಂದವಾಗಿದ್ದು ರಶ್ಯಾ ನಾಟೋ ಕೌನ್ಸಿಲ್ ರಚನೆ ಬಗ್ಗೆ. ಇದನ್ನು ಇತ್ತೀಚೆಗೆ (ಮೇ 28 ರಂದು ರೋಮ್‌ನಲ್ಲಿ ನಡೆದ ನಾಟೋ ರಶ್ಯಾ ಶೃಂಗ ಸಭೆಯಲ್ಲಿ ಈಗಾಗಲೇ ಘೋಷಿಸಲಾಗಿತ್ತು. 19 ದೇಶಗಳ ನಾಟೋಗೆ ರಶ್ಯಾವನ್ನು ಸೇರಿಸಲಾಗಿದ್ದು, ನಾಟೋ ರಶ್ಯಾ ಕೌನ್ಸಿಲ್ ರಚಿಸಲಾಗಿದೆ. ಆದರೆ ನಾಟೋದ ಇತರ ಸದಸ್ಯರಿಗಿರುವ ವಿಟೋ ಪವರ್ ಇರುವುದಿಲ್ಲ. ರಶ್ಯಾ ತನ್ನ ಅಭಿಪ್ರಾಯವನ್ನು ಹೇಳಬಹುದು. ಈ ಕೌನ್ಸಿಲ್‌ನಲ್ಲಿ, ಆದರೆ ಯಾವುದನ್ನೇ ವಿರೋಧಿಸುವ ಅಧಿಕಾರ ಇರುವುದಿಲ್ಲ. ನಾಟೋಗೆ ಪೂರ್ಣ ಸದಸ್ಯರನ್ನು ಸೇರಿಸುವ ಬಗೆಗಾಗಲಿ, ಅದರ ಮಿಲಿಟರಿ ನಿರ್ಧಾರಗಳನ್ನು ತಡೆಯಲು ರಶ್ಯಾಗೆ ಅಧಿಕಾರವಿರುವುದಿಲ್ಲ. ನವಂಬರ್‌ನಲ್ಲಿ ನಡೆಯಲಿರುವ ನ್ಯಾಟೋದ ಸಭೆಯಲ್ಲಿ ಪೂರ್ವಯುರೋಪಿನ ಏಳು ದೇಶಗಳನ್ನು ನಾಟೋಗೆ ಸೇರಿಸಿಕೊಳ್ಳಲು ತಯಾರಿ ನಡೆದಿದೆ. ಇದನ್ನು ರಶ್ಯಾ ವಿರೋಧಿಸುತ್ತಿತ್ತು. ಜಂಟಿ ಕೌನ್ಸಿಲ್‌ಗೆ ಸೇರುವ ಮೂಲಕ ರಶ್ಯಾ ಈ ವಿರೋಧವನ್ನು ಹಿಂತೆಗೆದುಕೊಂಡಂತೆ ಆಗಿದೆ. ಅಂತರ್ರಾಷ್ಟ್ರೀಯ 'ಶಾಂತಿ ಪಾಲನೆ' ಭಯೋತ್ಪಾದನೆಗೆ ಸೀಮಿತವಾಗಿರುತ್ತದೆ. ನಾಟೋದ ಪ್ರಮುಖ ಮಿಲಿಟರಿ ನಿರ್ಧಾರಗಳು ರಶ್ಯಾಕ್ಕೆ ಏನೂ ಪಾತ್ರವಿರುವುದಿಲ್ಲ. ನಾಟೋದ 'ಉದ್ದೇಶ'ಗಳಿಗೆ ರಶ್ಯಾವನ್ನು ಬಳಸಿಕೊಳ್ಳಬಹುದು ಈ ಒಪ್ಪಂದದಿಂದ.

ಅಪಾಯಕಾರಿ ಒಪ್ಪಂದಗಳು

ಈ ಮಾಸ್ಕೋ ಒಪ್ಪಂದಗಳು ಬಹಳ ಅಪಾಯಕಾರಿಯಾಯಿತು. ಬುಶ್‌ಗೆ ಇಡೀ ಜಗತ್ತಿನ ಮೇಲೆ ಏಕಚಕ್ರಾಧಿಪತ್ಯ ಕೊಡುವುದಿಲ್ಲ. ಅಮೇರಿಕನ್ ಏಕಪಕ್ಷೀಯ ನಿರ್ಧಾರಗಳಿಗೆ ಯುರೋಪಿನ ಅವರ ಸಹವರ್ತಿಗಳು ವಿರೋಧಿಸಿ ಇರಾಕ್ ಮೇಲೆ ದಾಳಿ, ಅಣ್ವಸ್ತ್ರ ರಹಿತ (ಕ್ಯೂಬಾ ಇರಾನ್, ಸಿಲಿಯಾ, ಉತ್ತರ ಕೋರಿಯಾ) ದೇಶಗಳಿಗೆ ದಾಳಿಯ ಬೆದರಿಕೆಯನ್ನು ಯುರೋಪಿಯನ್ ಒಕ್ಕೂಟ ವಿರೋಧಿಸಿದೆ. ಈ ಎಲ್ಲಾ ಮಿಲಿಟರಿ ಅಧಿಪತ್ಯ ಅಮೇರಿಕಾದ ಸಾಮ್ರಾಜ್ಯಶಾಹಿ ಆರ್ಥಿಕ ಹಿತಾಸಕ್ತಿ ಕಾಪಾಡಲು ಎಂದು ನೆನಪಿಡಬೇಕು. ಅದನ್ನು ವಿರೋಧಿಸಲಾಗುತ್ತಿದೆ. ಅಮೇರಿಕಾವು ಉಕ್ಕಿನ ಆಮದಿಗೆ ಶೇಕಡಾ 30, ಆಮದು ಶುಲ್ಕ, ಇತ್ತೀಚಿನ ಫಾರ್ಮ್ ಕಾನೂನು ಮೂಲಕ ಅಮೆರಿಕಾವು ರೈತರಿಗೆ ಇನ್ನಷ್ಟು ಸಬ್ಸಿಡಿ ಇವನ್ನು ಯುರೋಪಿಯನ್ ಒಕ್ಕೂಟ ಸಹ ಬಲವಾಗಿ ವಿರೋಧಿಸಿದೆ. ಮುಕ್ತ ಜಾಗತಿಕ ವ್ಯಾಪಾರದ ಬಗ್ಗೆ ಅಮೆರಿಕಾದ ಈ ಇಬ್ಬಗೆಯ ನೀತಿಗೆ ತೀವ್ರ ಪ್ರತಿರೋಧ ಕಂಡಿದೆ.

ವಾಜಪೇಯಿ ಸರ್ಕಾರ ನಮ್ಮ ದೇಶವನ್ನು ರಶ್ಯಾದಂತೆಯೇ ಅಮೇರಿಕಾದ ಜೂನಿಯರ್ ಪಾರ್ಟನರ್ ಮಾಡಲು ಹೆಣಗಾಡುತ್ತಿದೆ. ಒಂದು ಕಡೆ ಮಿಲಿಟರಿ ಮತ್ತು ದೇಶಭಕ್ತಿಯ ಉನ್ಮಾದ ಸೃಷ್ಟಿಸುತ್ತಾ, ಇನ್ನೊಂದು ಕಡೆ ಅಮೇರಿಕಾದ ಎಲ್ಲಾ ಒತ್ತಡಗಳಿಗೆ ಮಣಿಯುತ್ತಿದೆ. ಇದನ್ನು ಪ್ರಬಲವಾಗಿ ವಿರೋಧಿಸಬೇಕು. ಭಾರತ ಸೇರಿದಂತೆ ಜಗತ್ತಿನ ಎಲ್ಲೆಡೆ ಜನವರ ಸ್ವಾಯತ್ತ ಶಾಂತಿಯುತ ಬೆಳವಣಿಗೆ ಈ ಬೆಳವಣಿಗೆಗಳು ಅಪಾಯಕಾರಿ ಇವನ್ನು ವಿರೋಧಿಸಬೇಕು.

ರಶ್ಯನ್ನರ ವಿರೋಧ



ಕಮ್ಯುನಿಸ್ಟ್ ನಾಯಕ ಗೆನ್ನಡಿ

ರಶ್ಯಾದ ಅಧ್ಯಕ್ಷ ಪುಟಿನ್ ಬುಶ್ ಒತ್ತಡಕ್ಕೆ ಶರಣಾಗಿ ಈ ಒಪ್ಪಂದಗಳಿಗೆ ಸಹಿ ಹಾಕಿದ್ದಾರೆ. ಆದರೆ ರಶ್ಯಾದ ಜನತೆ ಇದನ್ನು ತೀವ್ರವಾಗಿ ವಿರೋದಿಸಿದ್ದಾರೆ. ಈ ಒಪ್ಪಂದದ ಬಗ್ಗೆ ರಶ್ಯಾದಲ್ಲಿ ನಡೆದ ಸಮೀಕ್ಷೆಯೊಂದರಲ್ಲಿ ಶೇ. 66 ಜನ ಇದು ರಶ್ಯಾದ ಹಿತಾಸಕ್ತಿಗಳಿಗೆ ಮಾರಕ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಒಪ್ಪಂದಗಳು ಅಮೇರಿಕಕ್ಕೆ ರಶ್ಯಾದ ಶರಣಾಗತಿ' ಎಂದು ರಶ್ಯನ್ ಕಮ್ಯುನಿಸ್ಟ್ ಪಕ್ಷ ಕಟುವಾಗಿ ಟೀಕಿಸಿದೆ. ವಿಶ್ವವಾಣಿಜ್ಯ ಕೇಂದ್ರ ಮೇಲೆ ಭಯೋತ್ಪಾದಕ ಕೃತ್ಯದ ಹಿನ್ನೆಲೆಯಲ್ಲಿ ಭಯೋತ್ಪಾದನೆ ವಿರುದ್ಧದ ಹೆಸರಲ್ಲಿ ತನ್ನ ಅಧಿಪತ್ಯ ಬಲಗೊಳಿಸುವ ಅಮೆರಿಕಾದ ಹುನ್ನಾರಗಳಿಗೆ ಪುಟಿನ್ ಪೂರ್ತಿ ಬಲಿಯಾಗಿದ್ದಾರೆ. ಅಫಘಾನಿಸ್ತಾನದ ಮೇಲ್ಲೆ ಯುದ್ಧದ ಹೆಸರಲ್ಲಿ ಉಜ್‌ಬೇಕಿಸ್ತಾನ, ಕಿರ್ ಝಿಕಿಸ್ತಾನ್‌ಗಳಲ್ಲಿ ಅಮೆರಿಕನ್ ಪಡೆಗಳನ್ನು ನೆಲೆಸಲು ಅನುಮತಿ ಕೊಡುವ ಮೂಲಕ ಪುಟಿನ್ ಈ ಶರಣಾಗತಿ ಮುಂದುವರಿಕೆ. ಸೋವಿಯೆತ್ ಯೂನಿಯನ್ ವಿಘಟನೆ ಮತ್ತು ವಾರ್ಸಾ ಒಪ್ಪಂದ ವಿಸರ್ಜನೆ ನಂತರ ನಾಟೋ ಕೂಟ ಅಸ್ತಿತ್ವಕ್ಕೆ ಏನೂ ಅರ್ಥವಿಲ್ಲ. ನಾಟೋ ಅಸ್ತಿತ್ವಕ್ಕೆ ಅರ್ಥ ಇದ್ದದ್ದು 'ವಾರ್ಸಾ ಒಪ್ಪಂದ' ದೇಶಗಳ ಬೆದರಿಕೆ' ಎದುರಿಸುವ ನೆಪದಲ್ಲಿ ವಾರ್ಸಾ ಒಪ್ಪಂದ ವನ್ನು ಸೋವಿಯೆತ್ ಒಕ್ಕೂಟ ಏಕಪಕ್ಷೀಯವಾಗಿ ವಿಸರ್ಜಿಸಿದಾಗ ಇಡೀ ಶಾಂತಿಪ್ರಿಯ ಜಗತ್ತು ನಾಟೋ ಕೂಟವನ್ನು ಸಹ ವಿಸರ್ಜಿಸಬೇಕು. ಶೀತಲ ಸಮರ ಕೊನೆಯಾದ ಹಿನ್ನೆಲೆಯಲ್ಲಿ ಮಿಲಿಟರಿ ಕೂಟಗಳಿಗೆ, ಅಣ್ವಸ್ತ್ರಗಳ ಅಗತ್ಯವಿಲ್ಲ, ಆದರೆ ಇದರ ಬದಲಾಗಿ ನಾಟೋ ವಿಸ್ತರಣೆಯಾಗುತ್ತಿದೆ, ಹೊಸ ಅಣ್ವಸ್ತ್ರಗಳೂ ಬೆಳವಣಿಗೆ ಕೈಗೆತ್ತಿಕೊಳ್ಳಲಾಗಿದೆ. ಇದು ಜಗತ್ತಿನಾದ್ಯಂತ ಶಾಂತಿಯುತ, ಸ್ವಾಯತ್ತ ಬೆಳವಣಿಗೆ ಅತ್ಯಂತ ಮಾರಕ ಬೆಳವಣಿಗೆ.

ಸ್ಫೂರ್ತಿ ನೀಡುವ, ನೈಜ ಬದುಕಿನ ಅನಾವರಣದ ಚಿತ್ರ

ಸಿನಿಮಾ

'ದ ಲೆಜೆಂಡ್ ಆಫ್ ಭಗತ್‌ಸಿಂಗ್'



ಇತ್ತೀಚಿನ ದಿನಗಳಲ್ಲಿ ಹುಸಿ ದೇಶಪ್ರೇಮದ ಹೆಸರಲ್ಲಿ ದೇಶದ ಯುವಜನರನ್ನು ಅಡ್ಡದಾರಿಗೆಳೆಯುವ ಪ್ರಸ್ತುತ ಸನ್ನಿವೇಶದಲ್ಲಿ ಭಗತ್ ಸಿಂಗ್ ಅವರ ಕ್ರಾಂತಿಕಾರಿ ಹೋರಾಟದ ಹಾದಿ ಮತ್ತು ಅವರ ಬದುಕನ್ನು ಮತ್ತಷ್ಟು ಸ್ಪಷ್ಟಗೊಳಿಸುವಂತಹ ಕೃತಿಗಳು, ಚಲನಚಿತ್ರಗಳು ಹೊರಬರುತ್ತಿರುವುದು ಅತ್ಯಂತ ಸ್ವಾಗತಾರ್ಹ ಕಾರ್ಯ. ಈ ದಿಶೆಯಲ್ಲಿ ಅಜಯ್ ದೇವಗನ್ ನಟಿಸಿರುವ 'ದಿ ಲೆಜೆಂಡ್ ಆಫ್ ಭಗತ್ ಸಿಂಗ್' ಹಲವಾರು ನ್ಯೂನ್ಯತೆಗಳಿದ್ದಾಗ್ಯೂ ಇತಿಹಾಸಕ್ಕೆ ಅಪಚಾರವೆಸಗದ ರೀತಿಯಲ್ಲಿ ನಿರ್ದೇಶಿಸಿದ ಎಲ್ಲರೂ ನೋಡಲೇಬೇಕಾದ ಚಿತ್ರ.

ಇತ್ತೀಚೆಗೆ ಭಗತ್ ಸಿಂಗ್ ಅವರ ಬದುಕು ಮತ್ತು ಹೋರಾಟವನ್ನು ಕುರಿತಂತೆ ಖ್ಯಾತ ಪತ್ರಕರ್ತ ಕುಲದೀಪ ನಾಯ್ಯರ್ ಬರೆದಂತಹ ವಿಭಿನ್ನ ಕೃತಿ 'ಹುತಾತ್ಮ ಭಗತ್ ಸಿಂಗ್' ಓದಿ ಅದನ್ನು ಇನ್ನೂ ಮೆಲುಕು ಹಾಕುತ್ತಿರುವಾಗಲೇ ಮತ್ತೊಂದು ಸಂತೋಷದ ಸುದ್ದಿ. ಜೂನ್- 7ರಂದು ಇಡೀ ದೇಶಾದ್ಯಂತ ಏಕಕಾಲಕ್ಕೆ 'ಭಗತ್ ಸಿಂಗ್' ಕುರಿತಾದ ಸುಮಾರು ಐದು ಹಿಂದಿ ಚಲನಚಿತ್ರಗಳು ತಯಾರಾಗಿ ಈಗ ಮೂರು ಚಿತ್ರಗಳು ತೆರೆಕಂಡಿವೆ.

ಹೆಸರಾಂತ ನಿರ್ದೇಶಕ ರಾಜ್‌ಕುಮಾರ್ ಸಂತೋಷಿ ನಿರ್ದೇಶಿಸಿ ಬಾಲಿವುಡ್‌ನ ಪ್ರಸಿದ್ದ ನಟ ಅಜಯ್ ದೇವಗನ್ ನಟಿಸಿರುವ 'ದಿ ಲೆಜೆಂಡ್ ಆಫ್ ಭಗತ್ ಸಿಂಗ್', ಗುಡ್ಡಾದಾನೋವ್ ನಿರ್ದೇಶಿಸಿರುವ ಹಾಗೂ ಖ್ಯಾತ ನಟರಾದ ಸನ್ನಿಡಿಯೊಲ್-ಬಾಬ್ಬಿಡಿಯೊಲ್ ನಟಿಸಿರುವ '23 ಮಾರ್ಚ್-1931 ಶಹೀದ್' ಹಾಗೂ ಸುರ್ಜಿತ್ ಮೂವೀಸ್‌ರವರು ತಯಾರಿಸಿರುವ ಚಿತ್ರ 'ಶಾಹೀದ್-ಇ-ಅಜವ್' ಚಿತ್ರಗಳು ಪ್ರಮುಖವಾದವು.

ಇತ್ತೀಚಿನ ದಿನಗಳಲ್ಲಿ ಹುಸಿ ದೇಶಪ್ರೇಮದ ಹೆಸರಲ್ಲಿ ದೇಶದ ಯುವಜನರನ್ನು ಅಡ್ಡದಾರಿಗೆಳೆಯುವ ಪ್ರಸ್ತುತ ಸನ್ನಿವೇಶದಲ್ಲಿ ಭಗತ್ ಸಿಂಗ್ ಅವರ ಕ್ರಾಂತಿಕಾರಿ ಹೋರಾಟದ ಹಾದಿ ಮತ್ತು ಅವರ ಬದುಕನ್ನು ಮತ್ತಷ್ಟು ಸ್ಪಷ್ಟಗೊಳಿಸುವಂತಹ ಕೃತಿಗಳು, ಚಲನಚಿತ್ರಗಳು ಹೊರಬರುತ್ತಿರುವುದು ಅತ್ಯಂತ ಸ್ವಾಗತಾರ್ಹ. ಈ ದಿಶೆಯಲ್ಲಿ ಅಜಯ್ ದೇವಗನ್ ನಟಿಸಿರುವ 'ದಿ ಲೆಜೆಂಡ್ ಆಫ್ ಭಗತ್ ಸಿಂಗ್' ಹಲವಾರು ನ್ಯೂನ್ಯತೆಗಳಿದ್ದಾಗ್ಯೂ ಇತಿಹಾಸಕ್ಕೆ ಅಪಚಾರವೆಸಗದ ರೀತಿಯಲ್ಲಿ ನಿರ್ದೇಶಿಸಿದ ಎಲ್ಲರೂ ನೋಡಲೇಬೇಕಾದ ಚಿತ್ರ.

ಮಾರ್ಚ್ 24ರಂದು ಭಗತ್ ಸಿಂಗ್-ರಾಜಗುರು-ಸುಖದೇವ್‌ರವರಿಗೆ ಮರಣ ದಂಡನೆ ವಿಧಿಸಬೇಕೆಂದು ಬ್ರಿಟೀಷ್ ನ್ಯಾಯಾಲಯ ತೀರ್ಪು ನೀಡಿದ್ದರೂ, ದೇಶದಲ್ಲಿ ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳನ್ನು ಬಿಡುಗಡೆಗೊಳಿಸಲು ಭುಗಿಲೆದ್ದ ತೀವ್ರ ಪ್ರತಿಭಟನೆಗಳು, ಬ್ರಿಟೀಷ್ ಸರ್ಕಾರ ಮಾರ್ಚ್-23ರಂದೇ ಅಂದರೆ ಒಂದು ದಿನ ಮೊದಲೇ ನೇಣುಗಂಬಕ್ಕೆ ಏರಿಸುವಂತಹ ಪರಿಸ್ಥಿತಿ ನಿರ್ಮಿಸಿತು. ಕತ್ತಲು ಕೋಣೆಯಿಂದ ಅವಸರವಸರವಾಗಿ ಮೂರು ಹೆಣಗಳನ್ನು ಹೊರತರುವ ಪೋಲೀಸರು ನಡುರಾತ್ರಿಯಲ್ಲೇ ನದಿಯ ದಡದಲ್ಲಿ ಮೂರು ದೇಹಗಳಿಗೆ ಬೆಂಕಿ ಹಚ್ಚುತ್ತಾರೆ. ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬುತ್ತದೆ. ಸಂಬಂಧಿಗಳು, ಜನರು ಧಾವಿಸುತ್ತಿದ್ದಂತೆ ಪೋಲೀಸರು ಕಾಲ್ಕೀಳುತ್ತಾರೆ. ಅರೆಬರೆ-ಬೆಯ್ಯುತ್ತಿರುವ ದೇಹಗಳು ಭಗತ್‌ನ ತಂದೆ ತಾಯಿಗಳಿಗೆ ತಡೆಯಲಾರದ ದುಃಖ ತರುತ್ತದೆ.

ಹೀಗೆ ಆರಂಭಗೊಳ್ಳುವ ಸಿನಿಮಾ ಭಗತ್‌ಸಿಂಗ್ ಅವರ ಬಾಲ್ಯಕ್ಕೆ ಕರೆದೊಯ್ಯುತ್ತದೆ. ಜಲಿಯನ್‌ವಾಲಾಬಾಗ್ ಹತ್ಯಾಕಾಂಡ, ಮುಗ್ಧ ಬಾಲಕನ ಮನಸ್ಸಿನಲ್ಲಿ ರೋಷ ಉಕ್ಕಿಸಿದ್ದು, 1920ರಲ್ಲಿ ಗಾಂಧೀಜಿ ಕರೆ ನೀಡಿದ್ದ ವಿದೇಶಿ ವಸ್ತುಗಳ ಬಹಿಷ್ಕಾರ, ತರಗತಿ ಬಹಿಷ್ಕಾರ, ಕರನಿರಾಕರಣೆ ಚಳುವಳಿಗಳಲ್ಲಿ ಅತ್ಯಂತ ಸ್ಫೂರ್ತಿಯಿಂದ ತರಗತಿಗಳನ್ನು ತೊರೆದು 'ಗಾಂಧಿ ಜಿಂದಾಬಾದ್' ಎನ್ನುತ್ತ ಪಾಲ್ಗೊಂಡಿದ್ದ ಭಗತ್‌ಗೆ ಗಾಂಧಿಜೀ ಚೌರಿ-ಚೌರ ಘಟನೆಯ ನೆಪದಲ್ಲಿ ಅಸಹಕಾರ ಚಳುವಳಿಯನ್ನು ಹಿಂದಕ್ಕೆ ಪಡೆದದ್ದು ತೀವ್ರ ಆಘಾತವನ್ನುಂಟು ಮಾಡುತ್ತದೆ. ಇದೇ ಸಂದರ್ಭದಲ್ಲಿ ಆತನ ಎದುರಲ್ಲೇ ಸೈಮನ್ ವಿರುದ್ಧ ಚಳುವಳಿ ನಡೆಸುತ್ತಿದ್ದ ಲಾಲಾ ಲಜಪತರಾಯ್ ಬ್ರಿಟೀಷರ ಲಾಠಿ ಏಟುಗಳಿಂದ ಮರಣ ಹೊಂದಿದ್ದು, ಹಲವಾರು ಕ್ರೂರ ಮುಖಗಳು ಭಗತ್‌ಸಿಂಗ್ ಕ್ರಾಂತಿಕಾರಿ ಹಾದಿಯತ್ತ ನೂಕಲು ಪ್ರೇರೇಪಿಸುತ್ತವೆ. ಇಂತಹ ಸನ್ನಿವೇಶದಲ್ಲಿಯೇ ಶಾಲಾ ಉಪಾಧ್ಯಾಯರಾದ ವಿದ್ಯಾಧರರವರು, ಚಂದ್ರಶೇಖರ್ ಅಜಾದ್ ನೇತೃತ್ವದಲ್ಲಿ ಸ್ಥಾಪಿಸಲಾಗಿದ್ದ ಹಿಂದೂಸ್ಥಾನ ಸೋಷಿಯಲಿಸ್ಟ್ ರಿಪಬ್ಲಿಕನ್ ಆರ್ಮಿಯ ಸಂಪರ್ಕ ಮಾಡಿಸಿ, "ಹಿಂಸೆಗೆ-ಹಿಂಸೆಯೇ ಉತ್ತರವಲ್ಲ ಬದಲಾಗಿ ಲಕ್ಷಾಂತರ ಸಂಖ್ಯೆಯಲ್ಲಿರುವ ರೈತರು, ಕಾರ್ಮಿಕರು, ವಿದ್ಯಾರ್ಥಿ ಯುವಜನರನ್ನು ಸಂಘಟಿಸಿ ಅಸಮಾನತೆಯಿಂದ ತುಂಬಿರುವ ಈ ವ್ಯವಸ್ಥೆಯನ್ನೇ ಬದಲು ಮಾಡಲು ಸಾಧ್ಯವಿದೆ. ಇದೇ 1917ರಲ್ಲಿ ರಷ್ಯಾದಲ್ಲಿ ಬೊಲ್ಸೆವಿಕ್ ಪಾರ್ಟಿ ನೇತೃತ್ವದಲ್ಲಿ ನಡೆದ ಸಮಾಜವಾದಿ ಕ್ರಾಂತಿ" ಎಂದು ಮಾರ್ಗದರ್ಶನ ನೀಡಿ ಬ್ರಿಟೀಷ್ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟದಲ್ಲಿ ಕ್ರಾಂತಿಕಾರಿ ಹೋರಾಟದ ಹೆಜ್ಜೆಯನ್ನಿರಿಸಲು ಸಹಾಯ ಮಾಡುತ್ತದೆ.

ಇಷ್ಟೊತ್ತಿಗಾಗಲೇ ಭಗತ್‌ಸಿಂಗ್ 'ನವ ಭಾರತ ಸಭಾ'ದ ನೇತೃತ್ವದಲ್ಲಿ ಯುವಜನರನ್ನು ಸಂಘಟಿಸಿ ಬ್ರಿಟೀಷ್ ಆಳರಸರಿಗೆ 'ಸಿಂಹಸ್ವಪ್ನ'ವಾಗಿದ್ದ. ಇದೇ ಸಂದರ್ಭದಲ್ಲಿಯೇ 1925 ಅಗಸ್ಟ್-9ರಂದು ಕ್ರಾಂತಿಕಾರಿಗಳು ರೈಲು ತಡೆದು ಕಾಕೋರಿ ಸಮೀಪ ಖಜಾನೆ ಲೂಟಿ ಮಾಡಿದ್ದು ಬ್ರಿಟೀಷ್ ಆಡಳಿತಕ್ಕೂ ನುಂಗಲಾಗದ ತುತ್ತಾಗುತ್ತದೆ.





ಭಗತ್ ಸಿಂಗ್ ಪಾತ್ರದಲ್ಲಿ ಅಜಯ್ ದೇವಗನ್, ಬಾಬ್ಬಿ ಡಿಯೊಲ್

1928 ನವೆಂಬರ್-17ರಂದು ಸ್ಕಾಟ್‌ನ ಲಾಠಿ ಏಟುಗಳಿಂದ ಮರಣ ಹೊಂದಿದ ಲಾಲಾಲಜಪತರಾಯ್‌ರವರ ಮರಣ ಕ್ರಾಂತಿಕಾರಿಗಳ ಮೇಲೆ ಆಘಾತವನ್ನುಂಟು ಮಾಡುತ್ತದೆ. ಹಿಂದೂಸ್ತಾನ್ ಸೋಷಿಯಾಲಿಸ್ಟ್ ರಿಪಬ್ಲಿಕನ್ (HSRA) ನೇತೃತ್ವದಲ್ಲಿ ತಮ್ಮ ಕ್ರಾಂತಿಕಾರಿ ಚಟುವಟಿಕೆಗಳನ್ನು ಇನ್ನೂ ತೀವ್ರಗೊಳಿಸಲು ನಿರ್ಧರಿಸುವ ಚಂದ್ರಶೇಖರ್ ಅಜಾದ್, ಭಗತ್‌ಸಿಂಗ್, ಸುಖದೇವ್ ಮತ್ತು ಇದೇ ಸಂದರ್ಭದಲ್ಲಿ ಆಗಮಿಸುವ ರಾಜಗುರು ಲಾಲಾಜಿ ಸಾವಿಗೆ ಕಾರಣರಾಗಿರುವ ಸ್ಕಾಟ್‌ನನ್ನು ಮುಗಿಸಲು ತೀರ್ಮಾನಿಸಿ ವಿಫಲವಾಗುತ್ತಾರೆ. ಇಷ್ಟೊತ್ತಿಗಾಗಲೇ ಕಾಂಗ್ರೆಸ್‌ನೊಳಗೆ ಕ್ರಾಂತಿಕಾರಿಗಳ ಮಧ್ಯೆ ಪ್ರವೇಶವಾಗಿ "ಡೊಮೆನಿಯನ್ ಸ್ಟೇಟಸ್" ಬೇಡಿಕೆಯನ್ನು ತೀವ್ರವಾಗಿ ವಿರೋಧಿಸುತ್ತಾರೆ. ಅಲ್ಲದೇ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯ ಕೈಗೊಳ್ಳಲು ಕಲ್ಕತ್ತ ಅಧಿವೇಶನದಲ್ಲಿ ಒತ್ತಾಯಿಸುತ್ತಾರೆ.

ಈ ಸಂದರ್ಭದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಮೂಡಿಸುತ್ತಿರುವ ಡೊಮೆನಿಯನ್ ಸ್ಟೇಟಸ್‌ನ ಪರಿಭಾಷೆ ಏನು? ಇವತ್ತಿನ ಶೋಷಣೆಯನ್ನು ಕೊನೆಗಾಣಿಸುವುದು ಹೇಗೆ? ಎಂದು ಭಗತ್‌ಸಿಂಗ್ ತನ್ನ ಸಂಗಾತಿಗಳಿಗೆ ತಿಳಿಸುವ ರೀತಿ ನಿಜಕ್ಕೂ ಅವನ ಹೋರಾಟದ ಸ್ವರೂಪ, ರಾಜಕೀಯ ಪ್ರಬುದ್ಧತೆಯನ್ನು ಮನವರಿಕೆ ಮಾಡಿಕೊಡುತ್ತದೆ.

ಬ್ರಿಟೀಷ್ ಶಾಸನ ಸಭೆಯಲ್ಲಿ ಜನರ ಹಕ್ಕುಗಳನ್ನು ಹತ್ತಿಕ್ಕಲು 'ಕಾರ್ಮಿಕ ವಿವಾದ ಕಾಯ್ದೆ' ಮತ್ತು ಸಾರ್ವಜನಿಕ ಸುರಕ್ಷ ಮಸೂದೆಗಳನ್ನು ಮಂಡಿಸುತ್ತಿರುವಾಗಲೇ ಆಳರಸರ ಕಣ್ಣುಗಳನ್ನು ಕಿವಿಗಳನ್ನು-ಹೃದಯಗಳನ್ನು ತೆರೆಸುವ ಸಲುವಾಗಿ-ಭಗತ್‌ಸಿಂಗ್ ಮತ್ತು ಸುಖದೇವ್ ತಾವೇ ಹೆಮ್ಮೆಯಿಂದ ವಹಿಸಿಕೊಂಡಿದ್ದ 'ಬಾಂಬ್ ಹಾಕುವ' ಕೆಲಸವನ್ನು ಪೂರೈಸಿ ನೂರಾರು ಕರಪತ್ರಗಳನ್ನು ಸಭಾಂಗಣದತ್ತ ಎಸೆಯುತ್ತಾ ಸಾಮ್ರಾಜ್ಯಶಾಹಿ ನಾಶವಾಗಲಿ ಕ್ರಾಂತಿ ಚಿರಾಯುವಾಗಲಿ ಘೋಷಣೆ ಕೂಗುತ್ತ ಸ್ವಯಂ ಶರಣಾಗುತ್ತಾರೆ.

ಈ ಮಧ್ಯೆ ಹೊರಗಿದ್ದುಕೊಂಡೇ ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದ ಚಂದ್ರಶೇಖರ್ ಆಜಾದ್, ಪೋಲೀಸರ ಜೊತೆ ನಡೆದ ಗುಂಡಿನ-ದಾಳಿಯಲ್ಲಿ ಗಾಯಗೊಂಡರೂ ಶರಣಾಗದೇ, ಬ್ರಿಟಿಷರ ಗುಂಡಿಗೆ ತಾನು ಈಡಾಗಬಾರದೆಂದು ತಾನೆ ಗುಂಡಿಕ್ಕಿಕೊಂಡು ಸಾಯುತ್ತಾನೆ.

ನ್ಯಾಯಾಲಯದಲ್ಲಿ ವಿಚಾರಣೆಯ ಸಂದರ್ಭವನ್ನು ಪರಿಪೂರ್ಣವಾಗಿ ಬಳಸಿಕೊಳ್ಳಲು ನಿರ್ಧರಿಸಿದ್ದ ಭಗತ್ ಮತ್ತು ಸಂಗಾತಿಗಳು ಪ್ರತಿಹಂತದಲ್ಲೂ, ಸಾಮ್ರಾಜ್ಯಶಾಹಿ ಶೋಷಣೆ ಸಂಪೂರ್ಣ, ಸ್ವಾತಂತ್ರ್ಯದ ಪರಿಕಲ್ಪನೆ, ಕ್ರಾಂತಿಕಾರಿ ಚಟುವಟಿಕೆ ಮತ್ತು ಹಿಂಸೆ ಹಾಗೂ ತಾವು ಸ್ಥಾಪಿಸಲು ಹೊರಟಿರುವ ಸಮಾಜವಾದಿ ವ್ಯವಸ್ಥೆಯ ಕನಸುಗಳ ಬಗ್ಗೆ ತಮ್ಮ ಸುಂದರ ಪ್ರಬುದ್ಧ ವಿಚಾರಲಹರಿ ಹರಿಯಬಿಡುತ್ತಾರೆ ಮತ್ತು ಅದರಲ್ಲಿ ಅವರು ಯಶಸ್ವಿಯೂ ಆಗುತ್ತಾರೆ.

1930 ಅಕ್ಟೋಬರ್-7ರಂದು ನ್ಯಾಯಾಲಯದಲ್ಲಿ ಭಗತ್, ರಾಜಗುರು, ಸುಖದೇವ್‌ಗೆ ಗಲ್ಲು ಶಿಕ್ಷೆ, ಉಳಿದವರ ಬಿಡುಗಡೆಗೆ ಆದೇಶವಾಗುತ್ತದೆ.

ಈ ಸಂದರ್ಭದಲ್ಲಿ ಧೈರ್ಯಗುಂದದ ಭಗತ್‌ಸಿಂಗ್ ತಂದೆ-ತಾಯಿಗಳಿಗೆ ನೀಡುವ ದೃಡತೆಯ ಮಾತುಗಳು ಎಲ್ಲರನ್ನೂ ಸಮಾಧಾನಗೊಳಿಸಿ ಅವನ ತ್ಯಾಗಕ್ಕೆ ಬೆಂಬಲಿಸುತ್ತವೆ.

ವ್ಯವಸ್ಥೆಯ ವಿರುದ್ಧ ಹೋರಾಡಲು ಇರಬೇಕಾದ ಕಠೋರತೆಯನ್ನು 'ಭಗತ್‌ಸಿಂಗ್' ಪಾತ್ರದಲ್ಲಿ ಅಜೇಯ್‌ದೇವಗನ್ ಯಶಸ್ವಿಯಾಗಿ ಅಭಿನಯಿಸಿದ್ದಾರೆ.

ಕ್ರಾಂತಿ ಎಂದರೆ ಹಿಂಸೆ, ರಕ್ತದ ಚಲ್ಲಾಟ, ಜೀವಗಳ ಬಲಿಯೆಂದು ಭಗತ್‌ಸಿಂಗ್ ಭಾವಿಸಿರಲಿಲ್ಲ.

ಮನುಷ್ಯ ಜೀವ ಅತ್ಯಂತ ಅಮೂಲ್ಯವಾದುದು ಎಂದು ಭಾವಿಸಿದ ಅವರು ಸ್ವಾತಂತ್ರ್ಯ ಹೋರಾಟಕ್ಕೆ ಧೈರ್ಯ ಮತ್ತು ತ್ಯಾಗಗಳು ಅಗತ್ಯವೆಂದು ಮನಗಂಡರು ಮತ್ತು ಆ ಮಹಾನ್ ಸಾಧನೆಗಾಗಿ ತಮ್ಮ ತ್ಯಾಗ ಅನಿವಾರ್ಯವೆಂದು ಬಲಿದಾನಕ್ಕೆ ಮುಂದಾಗಿ ನಗು-ನಗುತ್ತಾ ಗಲ್ಲಿಗೇರಿ **ದೇಶದ ಯುವ ಜನಾಂಗಕ್ಕೆ ಸ್ಫೂರ್ತಿ ನೀಡಿದ 'ಭಗತ್‌ಸಿಂಗ್'ರ ನೈಜ ಬದುಕಿನ ಚಿತ್ರಣವನ್ನು ಹಲವಾರು-ಇತಿ-ಮಿತಿಗಳ ಮಧ್ಯೆಯೂ ಪರಿಣಾಮಕಾರಿಯಾಗಿ ನಿರ್ದೇಶಿಸಿರುವ ರಾಜ್‌ಕುಮಾರ್ ಸಂತೋಷಿ ಮತ್ತು ನಿರ್ಮಾಪಕ ರಮೇಶ್ ತೌರಾನಿ ನಿಜಕ್ಕೂ ಅಭಿನಂದನಾರ್ಹರು. ಉತ್ತಮ ಛಾಯಾಗ್ರಹಣವನ್ನು ಮೈಗೂಡಿಸಿಕೊಂಡಿರುವ ಚಿತ್ರಕ್ಕೆ ಖ್ಯಾತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ತನ್ನ ಮಧುರಲಹರಿ ಹರಿಸಿ ಐತಿಹಾಸಿಕ ಚಿತ್ರಕ್ಕೆ ಮತ್ತಷ್ಟು ಮೆರಗು ನೀಡಿದ್ದಾರೆ.**

ಪ್ರತಿಗಾಮಿ ಶಕ್ತಿಗಳ ಆಡಳಿತದಲ್ಲಿ ದೇಶದ ಜನತೆ ನಲುಗುತ್ತಿರುವ ಪ್ರಸ್ತುತ ಸಂದರ್ಭ ಮತ್ತು ದೇಶದ ಸ್ವಾತಂತ್ರ್ಯ, ಪ್ರಜಾಸತ್ತೆ, ಸಾರ್ವಭೌಮತೆಯನ್ನು ವಿದೇಶಿಯರ ಕೈಯಲ್ಲಿ ನೀಡಿ ಶರಣಾಗುತ್ತಿರುವ ನೀತಿಗಳ ವಿರುದ್ಧ ಜನತೆ ನಡೆಸುತ್ತಿರುವ ದೇಶಪ್ರೇಮಿ ಹೋರಾಟಗಳಿಗೆ ಇದೀಗ ಬಿಡುಗಡೆಗೊಂಡಿರುವ 'ಭಗತ್‌ಸಿಂಗ್' ಕುರಿತಾದ ಎಲ್ಲ ಚಿತ್ರಗಳು ಸ್ಫೂರ್ತಿಯ ಸೆಲೆಗಳೇ. ಒಟ್ಟಾರೆ ಬಾಲಿವುಡ್ ಈ ಐದು ಚಿತ್ರಗಳಿಗೆ ವಿನಿಯೋಗಿಸಿರುವ ಹಣವೇ ಸುಮಾರು - ನೂರು ಕೋಟಿಯಷ್ಟು. ಇಂತಹ ಪ್ರಯತ್ನಗಳಿಗೆ ನಾವು ಮತ್ತೊಮ್ಮೆ ಅಭಿನಂದಿಸಲೇಬೇಕು.

- ಕೆ.ಮಹಾಂತೇಶ್

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್ ವೈ ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH